ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಅಮೋಘ ಪ್ರದರ್ಶನ ನೀಡಿದ ಭಾರತದ ಬಿಲ್ಲಾರರು ಅಹಮದಾಬಾದ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಚರಿ ಪ್ಯಾರಾ ಸರಣಿ (ಹಂತ 3) ಕ್ರೀಡಾಕೂಟದಲ್ಲಿ ಮಂಗಳವಾರ ತಲಾ ಎರಡು ಚಿನ್ನ, ಬೆಳ್ಳಿ ಸೇರಿ ಐದು ಪದಕಗಳನ್ನು ಗೆದ್ದುಕೊಂಡರು.

09 ಸೆಪ್ಟೆಂಬರ್, 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -178 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಮಳೆ ಎಲ್ಲಿದೆ ? ರೈತನ ಕಣ್ಣಲ್ಲಿ ಸಾವಿರ ಪ್ರಶ್ನೆಗಳು !! » 2


ಡಿಪಿಆರ್‌ಗೆ ಒಳ ಪಟ್ಟಿರುವ ಕೆರೆಗಳಿಗೆ ನೀರು ತುಂಬಿಸಿ 3


90 ಸಾವಿರ ವಿದ್ಯಾರ್ಥಿಗಳಿಗೆ ಉಚಿತ ಕೋಚಿಂಗ್ » 4


# ತಮಿಳುನಾಡಿಗೆ ಮತ್ತೆ ನೀರು ಹರಿಸಲು ಆದೇಶ

## ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ಸರ್ಕಾರದ ನಿರ್ಧಾರ : ಸಚಿವ ಚಲುವರಾಯಸ್ವಾಮಿ

• ಪ್ರಜೋದಯ ವರದಿ

**ಬೆಂಗಳೂರು :** ತಮಿಳುನಾಡಿಗೆ ಪ್ರತಿ ದಿನ 6,000 ಕ್ಯೂಸೆಕ್ ಕಾವೇರಿ ನೀರನ್ನು ಕರ್ನಾಟಕ ಹರಿಸಬೇಕೆಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮಂಗಳವಾರ ನಿರ್ದೇಶನ ನೀಡಿದೆ.

ಸಮಿತಿಯ ಅಧ್ಯಕ್ಷ ವಿನಿತ್ ಗುಪ್ತ ಅಧ್ಯಕ್ಷತೆಯಲ್ಲಿ ಮಂಗಳವಾರ ಬೆಳಿಗ್ಗೆ ಸಭೆ ನಡೆಸಿದ್ದ ಕಾವೇರಿ ನೀರು ನಿಯಂತ್ರಣ ಸಮಿತಿಯು ಉಭಯ ರಾಜ್ಯಗಳ ವಾದ ಆಲಿಸಿ, ನೀರು ಬಿಡುಗಡೆಗೆ ಶಿಫಾರಸ್ಸು ಮಾಡಿತ್ತು. ಪ್ರಾಧಿಕಾರದ ಅಧ್ಯಕ್ಷ ಎಸ್.ಕೆ.ಹಲ್ದಾರ್ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ ಸಭೆ ನಡೆಸಿದ ಪ್ರಾಧಿಕಾರವು ಸಮಿತಿಯ ಶಿಫಾರಸ್ಸನ್ನು ಎತ್ತಿಹಿಡಿಯಿತು. ಬುಧವಾರ ಬೆಳಿಗ್ಗೆ 8 ಗಂಟೆಯಿಂದ ಅನ್ವಯವಾಗುವಂತೆ ಕರ್ನಾಟಕವು 15 ದಿನ 7.77 ಟಿಎಂಸಿ ನೀರು ಹರಿಸಬೇಕಿದೆ.

**ಆದೇಶಕ್ಕೆ ಸಚಿವರ ಬೇಸರ**

ನೀರು ಹರಿಸುವ ಸಂಬಂಧ ಜಲಸಂಪನ್ಮೂಲ ಸಚಿವ ಎನ್.ಚಲುವರಾಯಸ್ವಾಮಿ ಅವರು ಪ್ರತಿಕ್ರಿಯಿಸಿ, ತಮಿಳುನಾಡಿಗೆ ಪ್ರತಿನಿತ್ಯ 6 ಸಾವಿರ ಕ್ಯೂಸೆಕ್ ನೀರು ಬಿಡುವಂತೆ ಸಿಡಬ್ಲ್ಯೂಆರ್‌ಸಿ ನೀಡಿರುವ ಆದೇಶ ಅಸಂಬದ್ಧವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಸಿಡಬ್ಲ್ಯೂಆರ್‌ಸಿ ಸಭೆಯಲ್ಲಿ ನಮ್ಮ ರಾಜ್ಯದ ಅಧಿಕಾರಿಗಳು ವಾಸ್ತವ ಸ್ಥಿತಿಯ ಬಗ್ಗೆ ಪ್ರಬಲವಾಗಿ ವಾದ ಮಂಡಿಸಿದ್ದಾರೆ. ತಮಿಳುನಾಡು 17 ಸಾವಿರ ಕ್ಯೂಸೆಕ್ ನೀರಿಗೆ ಬೇಡಿಕೆ ಇಟ್ಟಿತ್ತು. ಆದರೆ, ಕಳೆದ ಒಂದು ವಾರದಿಂದ ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಿನ ಒಳಹರಿವು ಗಣನೀಯವಾಗಿ ಕಡಿಮೆಯಾಗಿದೆ. ಇಂತಹ ಸಂಕಷ್ಟದ ಸ್ಥಿತಿಯಲ್ಲಿ 6 ಸಾವಿರ ಕ್ಯೂಸೆಕ್ ನೀರು ಹರಿಸುವುದೂ ನಮಗೆ ಅಸಾಧ್ಯ. ನಾವು ಶೂನ್ಯ ನೀರು ಬಿಡುವ ನಿಟ್ಟಿನಲ್ಲಿ ಸತತ ಪ್ರಯತ್ನ ನಡೆಸುತ್ತಿದ್ದೇವೆ ಎಂದರು.

ದೆಹಲಿಯಲ್ಲಿ ಕುಳಿತು ಆಡಳಿತ ನಡೆಸುವ ಸಾಂವಿಧಾನಿಕ ಹಾಗು ಆಡಳಿತಾತ್ಮಕ ಪೀಠಗಳಿಗೆ ನೆಲಮಟ್ಟದ ವಾಸ್ತವ ಸ್ಥಿತಿ ಅರ್ಥವಾಗುತ್ತಿಲ್ಲ. ಈ ಹಿಂದೆಯೂ ವಾಸ್ತವ ಅರಿಯದೆ ಇದೇ ರೀತಿಯ ಆದೇಶಗಳನ್ನು ನೀಡಿರುವ ನಿದರ್ಶನಗಳಿವೆ. ಈ ಬಗ್ಗೆ ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿ, ಬುಧವಾರವೇ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲು ಸರ್ಕಾರ ಗಂಭೀರ ಚಿಂತನೆ ನಡೆಸಿದೆ ಎಂದರು.

ರಾಜ್ಯದ ಜಲಾಶಯಗಳ ನೀರಿನ ಸಂಗ್ರಹದ ಕುರಿತು ವಿವರಿಸಿದ ಅವರು, ಪ್ರಸ್ತುತ ಅಣೆಕಟ್ಟೆಗಳಲ್ಲಿರುವ ನೀರಿನ ಪೈಕಿ ಶೇ.50 ರಷ್ಟನ್ನು ಕೇವಲ ಕುಡಿಯುವ ನೀರಿನ ಉದ್ದೇಶಕ್ಕೆ ಮೀಸಲಿಡಲಾಗಿದೆ. ಭದ್ರಾ ಹಾಗು ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ರೈತರ ಬೆಳೆಗಳಿಗೆ ಅಗತ್ಯಕ್ಕೆ ತಕ್ಕಂತೆ ನೀರು ಒದಗಿಸಲಾಗಿದೆ. ಚಿತ್ರದುರ್ಗ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಾರದಂತೆ ನದಿಯ ಮೂಲಕ ನೀರು ಹರಿಸಲಾಗಿದೆ. ಎಲ್ಲೆಡೆ ಕೆರೆ-ಕಟ್ಟೆಗಳನ್ನು ತುಂಬಿಸಿ ಜನ-ಜಾನುವಾರುಗಳಿಗೆ ಸಮಸ್ಯೆಯಾಗದಂತೆ ನಿರ್ವಹಣೆ ಮಾಡಲಾಗುತ್ತಿದೆ ಎಂದರು.

**ತಮಿಳುನಾಡಿನ ವಾದ**

- ಸಂಕಷ್ಟದ ವರ್ಷಗಳಲ್ಲಿ ಕರ್ನಾಟಕವು ಬಿಳಿಗುಂಡ್ಲು ಮೂಲಕ ಇಲ್ಲಿಯವರೆಗೆ 50.33 ಟಿಎಂಸಿ ನೀರು ಹರಿಸಬೇಕಿತ್ತು. ಆದರೆ, 34.32 ಟಿಎಂಸಿ ನೀರು ಹರಿಸಿ ಅನ್ಯಾಯವೆಸಗಿದೆ.
- ★ ಕರ್ನಾಟಕದಲ್ಲಿ ಜಲಸಂಕಷ್ಟ ತೀವ್ರವಾಗಿದೆ ಎಂಬುದು ಸುಳ್ಳು. ನಾಲ್ಕು ಜಲಾಶಯಗಳಲ್ಲಿ 63.21 ಟಿಎಂಸಿ ನೀರಿದೆ. ಈಗಲೂ ಕಾಲುವೆಗಳಿಗೆ ವ್ಯಾಪಕ ಪ್ರಮಾಣದಲ್ಲಿ ನೀರು ಹರಿಯುತ್ತಿದೆ.
- ★ ಬಾಕಿ ಹಾಗು ಈ ತಿಂಗಳಿನ ಪಾಲಿನ ನೀರನ್ನು ಬಿಡಲು ಕರ್ನಾಟಕಕ್ಕೆ ನಿರ್ದೇಶನ ನೀಡಬೇಕು. 9,000 ಕ್ಯೂಸೆಕ್ ಬದಲು ದಿನಕ್ಕೆ 1.76 ಟಿಎಂಸಿ ಅಡಿ (20,370 ಕ್ಯೂಸೆಕ್) ಬಿಡಲು ಆದೇಶಿಸಬೇಕು.

# ಹಾಸನ-ಬೇಲೂರು ಹೆದ್ದಾರಿಗೆ 470.85 ಕೋ.ರೂ.

## ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸಲು ಕ್ರಮ: ಶ್ರೇಯಸ್ ಪಟೇಲ್

• ಪ್ರಜೋದಯ ವರದಿ

**ಹಾಸನ:** ರಾಷ್ಟ್ರೀಯ ಹೆದ್ದಾರಿ 373ರ ಹಾಸನ-ಬೇಲೂರು ಮಾರ್ಗವನ್ನು ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸಲು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ 470.85 ಕೋ.ರೂ. ಪರಿಷ್ಕೃತ ಮೊತ್ತಕ್ಕೆ ಆಡಳಿತಾತ್ಮಕ, ತಾಂತ್ರಿಕ ಹಾಗು ಆರ್ಥಿಕ ಅನುಮೋದನೆ ನೀಡಿದೆ ಎಂದು ಸಂಸದ ಶ್ರೇಯಸ್ ಪಟೇಲ್ ಅವರು ತಿಳಿಸಿದ್ದಾರೆ.

ಹಾಸನ-ಬೇಲೂರು ಹೆದ್ದಾರಿ ಅಭಿವೃದ್ಧಿಗೆ ಶೀಘ್ರ ಅನುಮೋದನೆ ನೀಡಿ ಕಾಮಗಾರಿಯನ್ನು ಆದ್ಯತೆಯ ಮೇರೆಗೆ ಕೈಗೆತ್ತಿಕೊಳ್ಳುವಂತೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಮನವಿ ಸಲ್ಲಿಸಲಾಗಿತ್ತು. ಬಳಿಕ ಸಚಿವಾಲಯದ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದು, ಯೋಜನೆಗೆ ತ್ವರಿತ ಅನು ಮೋದನೆ ನೀಡುವಂತೆ ಒತ್ತಾಯಿಸಲಾಗಿತ್ತು.

» ನಾಲ್ಕನೇ ಪುಟದಲ್ಲಿ



**4 ವರ್ಷದೊಳಗೆ ಪೂರ್ಣಗೊಳಿಸುವ ಗುರಿ**

ಭೂಸ್ವಾಧೀನ ಪರಿಹಾರ ವಿತರಣೆಯನ್ನು ರಾಜ್ಯ ಲೋಕೋಪಯೋಗಿ ಇಲಾಖೆ ತ್ವರಿತವಾಗಿ ಪೂರ್ಣಗೊಳಿಸಬೇಕು. ಅಲ್ಲದೆ, 2026ರ ಅಕ್ಟೋಬರ್ 31ರೊಳಗೆ ಕಾಮಗಾರಿಯ ನಿಗದಿತ ಪ್ರಾರಂಭ ದಿನಾಂಕವನ್ನು ಅಂತಿಮಗೊಳಿಸುವಂತೆ ಕೇಂದ್ರ ಸರ್ಕಾರ ನಿರ್ದೇಶನ ನೀಡಿದೆ. ಕಾಮಗಾರಿಯನ್ನು 2029-30ನೇ ಆರ್ಥಿಕ ವರ್ಷದೊಳಗೆ ಪೂರ್ಣಗೊಳಿಸುವ ಗುರಿ ನಿಗದಿಪಡಿಸಲಾಗಿದೆ ಎಂದು ಶ್ರೇಯಸ್ ಪಟೇಲ್ ಅವರು ತಿಳಿಸಿದ್ದಾರೆ.

# ಸ್ಥಳೀಯ ಭಾಷೆ ಸಮೃದ್ಧವಾಗಲು ಜಾನಪದ ಕಾರಣ




• ಪ್ರಜೋದಯ ವರದಿ

**ಹಾಸನ:** ಜನರ ಬಾಯಿಂದ ಬಾಯಿಗೆ ಹರಿದು ಬಂದಿರುವ ಅಪೂರ್ವ ಸಾಹಿತ್ಯ ಜಾನಪದವು ಸ್ಥಳೀಯ ಭಾಷೆಯನ್ನು ಸಮೃದ್ಧವಾಗಿ ಬೆಳೆಸುವ ಶ್ರೇಷ್ಟ ಕಲೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ಎನ್.ಬಲರಾಮ್ ಅವರು ಹೇಳಿದರು.

ಕರ್ನಾಟಕ ಜಾನಪದ ಪರಿಷತ್ ಜಿಲ್ಲಾ ಘಟಕದಿಂದ ಮಂಗಳವಾರ ಎಸ್‌ಆರ್‌ಎಸ್ ಪ್ರಜ್ಞಾ ವಿದ್ಯಾಶಾಲೆಯಲ್ಲಿ ಹಮ್ಮಿಕೊಂಡಿದ್ದ ವಿಶ್ವ ಜಾನಪದ ದಿನಾಚರಣೆ ಮತ್ತು ಜಾನಪದ ವೈಭವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜಾನಪದವು ಅಕ್ಷರ ಜ್ಞಾನವಿಲ್ಲದ ಗ್ರಾಮೀಣ ಜನರ ಬಹುದೊಡ್ಡ ಆಸ್ತಿ. ಅದು ವಿಶೇಷ ಸಂಸ್ಕೃತಿಯಾಗಿದೆ. ಮೌಖಿಕ ಕಲೆಯಾಗಿ ಮುಂದುವರಿಯುತ್ತಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಾ.ಹಂಪನಹಳ್ಳಿ ತಿಮ್ಮೇಗೌಡ ಅವರು ಮಾತನಾಡಿ, ಹಳ್ಳಿಯ ರೈತರು, ಶ್ರಮಿಕರು ತಮ್ಮ ಆಯಾಸವನ್ನು ಮರೆಯಲು ಹೊಲ-ಗದ್ದೆಗಳಲ್ಲಿ ಹಾಡಿದ ಹಾಡುಗಳೇ ಜಾನಪದ ಗೀತೆಗಳು. ಹಳ್ಳಿಯ ಜನರ ನಿಷ್ಕಲ್ಮಶ ಮನಸ್ಸಿನಿಂದ, ಶ್ರಮದ ಸಂಸ್ಕೃತಿಯಿಂದ ಸ್ವಾಭಾವಿಕವಾಗಿ ಹುಟ್ಟಿಕೊಂಡ ಕಲೆ ಜಾನಪದಕ್ಕೆ ಲಿಖಿತ ರೂಪವಿಲ್ಲ. ಒಬ್ಬರಿಂದ ಮತ್ತೊಬ್ಬರಿಗೆ ಬಾಯಿಂದ ಬಾಯಿಗೆ ಹರಿದು ಬಂದಿದೆ. ನಮ್ಮ ಮಣ್ಣಿನ ಸಂಸ್ಕೃತಿಯನ್ನು ಉಳಿಸು

» ನಾಲ್ಕನೇ ಪುಟದಲ್ಲಿ

# ಚುನಾವಣೆ ವಿಳಂಬ: 38,437 ಕೋ.ರೂ.ಗೆ ಹೊಡೆತ

## ರಾಜ್ಯ ಸರ್ಕಾರದಿಂದ ಪಂಚಾಯತ್ ರಾಜ್ ವ್ಯವಸ್ಥೆ ದುರ್ಬಲ: ಎ.ಮಂಜು ಆರೋಪ

• ಪ್ರಜೋದಯ ವರದಿ

**ಹಾಸನ:** ರಾಜ್ಯ ಸರ್ಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸದೆ ಪಂಚಾಯತ್ ರಾಜ್ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತಿದೆ. ಚುನಾವಣೆ ವಿಳಂಬದಿಂದ 38,437 ಕೋ.ರೂ.ಗೆ ಹೊಡೆತ ಬಿದ್ದಿದೆ ಎಂದು ಮಾಜಿ ಸಚಿವ ಎ.ಮಂಜು ಅವರು ಆರೋಪಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸದಿರುವ ಪರಿಣಾಮ 15ನೇ ಹಣಕಾಸು ಆಯೋಗದಡಿ ರಾಜ್ಯಕ್ಕೆ ಬರಬೇಕಿದ್ದ 38,437 ಕೋ.ರೂ.ಗೂ ಅಧಿಕ ಅನುದಾನವೂ ರಾಜ್ಯಕ್ಕೆ ಲಭ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಅನುದಾನ ಕಡಿತವಾಗಿರುವುದರಿಂದ ರಾಜ್ಯದ ಅಭಿವೃದ್ಧಿ ಕುಂಠಿತವಾಗಿದೆ ಎಂದು ದೂರಿದರು.




ಗ್ರಾಮ ಪಂಚಾಯಿತಿ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳು ಕೇವಲ ರಾಜಕೀಯ ಚುನಾವಣೆಗಳಲ್ಲ. ಸ್ಥಳೀಯ ಪ್ರಜಾ ಪ್ರಭುತ್ವದ ಅಡಿಪಾಯವಾಗಿದೆ. ಗ್ರಾಮದ ಜನರ ಸಮಸ್ಯೆಗಳನ್ನು ಅರಿತು, ಅವರೊಂದಿಗೆ ನೇರವಾಗಿ ಕೆಲಸ ಮಾಡುವ ನಾಯಕರು ಇಲ್ಲಿಂದಲೇ ಬೆಳೆಯುತ್ತಾರೆ. ಆದರೆ, ಈ ಸರ್ಕಾರ ಹೊಸ ನಾಯತಕತ್ವವನ್ನು ಬೆಳೆಸಲು ಮುಂದಾಗುತ್ತಿಲ್ಲವೆಂದು ದೂರಿದರು.

> " ನೀರಿನ ವಿಚಾರದಲ್ಲಿ ಜಿಲ್ಲೆಯ ರೈತರು ಹಾಗು ಜನರ ಹಿತಾಸಕ್ತಿಯನ್ನು ಕಾಪಾಡುವುದು ಸರ್ಕಾರದ ಜವಾಬ್ದಾರಿ. ಆದರೆ, ಜಿಲ್ಲೆಗೆ ಆಗುತ್ತಿರುವ ಅನ್ಯಾಯವನ್ನು ತಡೆಯುವಲ್ಲಿ ಜಿಲ್ಲೆಯ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ವಿಫಲರಾಗಿದ್ದಾರೆ.
>
> -ಎ.ಮಂಜು, ಮಾಜಿ ಸಚಿವ

**ಅನುದಾನ ದುರ್ಬಳಕೆ**

ಕೇಂದ್ರ ಸರ್ಕಾರದಿಂದ ಅನುದಾನ ಬರುತ್ತಿಲ್ಲವೆಂದು ರಾಜ್ಯ ಸರ್ಕಾರ ಆರೋಪ ಮಾಡುತ್ತಿದೆ. ಆದರೆ, ಕೇಂದ್ರದ ಅನುದಾನ ಪಡೆಯಲು ರಾಜ್ಯ ಸರ್ಕಾರ ಮಾಡಬೇಕಾದ ಅಗತ್ಯ ಕಾರ್ಯಗಳನ್ನು ಮಾಡುತ್ತಿಲ್ಲ. ಕೇಂದ್ರದ ಅನುದಾನವನ್ನು ಬಳಸಿಕೊಂಡಿರುವ 261 ಗ್ರಾಮ ಪಂಚಾಯಿತಿಗಳಲ್ಲಿ ಅನುದಾನ ದುರ್ಬಳಕೆ

» ನಾಲ್ಕನೇ ಪುಟದಲ್ಲಿ

**ಜಿಲ್ಲೆಯನ್ನು ಕಡೆಗಣಿಸಿ ತುಮಕೂರಿಗೆ ನೀರು**

ಹಾಸನ ಜಿಲ್ಲೆಗೆ ನೀರು ಪೂರೈಕೆ ವಿಚಾರದಲ್ಲಿಯೂ ರಾಜ್ಯ ಸರ್ಕಾರ ಅನ್ಯಾಯ ಮಾಡುತ್ತಿದೆ. ಜಿಲ್ಲೆಗೆ ನೀರು ಮೊಟಕುಗೊಳಿಸಿ ತುಮಕೂರಿಗೆ ನೀರು ಹರಿಸಲಾಗುತ್ತಿದೆ. ಹೈಲೆವೆಲ್ ಕೆನಾಲ್‌ಗೆ ಕನಿಷ್ಠ 15 ದಿನಗಳ ಕಾಲ ನೀರು ಹರಿಸಿದ ನಂತರ ಬೇರೆಡೆಗೆ ನೀರು ಹರಿಸುವ ವ್ಯವಸ್ಥೆ ಮಾಡಬೇಕಿತ್ತು. ಆದರೆ, ಹಾಸನ ಜಿಲ್ಲೆಯ ಹಿತಾಸಕ್ತಿಯನ್ನು ಕಡೆಗಣಿಸಿ ತುಮಕೂರು ಜಿಲ್ಲೆಗೆ ನೀರು ಹರಿಸಲಾಗುತ್ತಿದೆ. ಜಿಲ್ಲೆಯ ಪಾಲಿನ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಆದ್ಯತೆ ನೀಡಬೇಕು. ರೈತರ ಹಿತಾಸಕ್ತಿಗೆ ಧಕ್ಕೆಯಾಗದಂತೆ ನೀರು ಹಂಚಿಕೆ ಮಾಡಬೇಕೆಂದು ಒತ್ತಾಯಿಸಿದರು.

# ಇಟಿಎಫ್ ಸಿಬ್ಬಂದಿಯನ್ನು ಅಟ್ಟಾಡಿಸಿದ ಒಂಟಿ ಸಲಗ

## ಕಾಡಾನೆಗಳನ್ನು ಹಿಮ್ಮೆಟ್ಟಿಸಲು ಹರಸಾಹಸ | ಗಂಗಾವರ ಗ್ರಾಮದಲ್ಲಿ ಆತಂಕದ ವಾತಾವರಣ

• ಪ್ರಜೋದಯ ವರದಿ

**ಬೇಲೂರು:** ಗ್ರಾಮದೊಳಗೆ ನುಗ್ಗಿದ ಒಂಟಿ ಸಲಗವೊಂದು ಇಟಿಎಫ್ ಸಿಬ್ಬಂದಿಯನ್ನು ಅಟ್ಟಾಡಿಸಿ ಆತಂಕ ಸೃಷ್ಟಿಸಿದ ಘಟನೆ ತಾಲ್ಲೂಕಿನ ಗಂಗಾವರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಶಾಲೆಯ ಮುಂಭಾಗ ಹಾಗು ವಸತಿ ಪ್ರದೇಶದಲ್ಲಿ ಎರಡು ದೈತ್ಯಾಕಾರದ ಕಾಡಾನೆಗಳು ಕಾಣಿಸಿ ಕೊಂಡಿದ್ದು, ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ. ಕಾಡಾನೆಗಳು ರಸ್ತೆ ದಾಟುವ ವೇಳೆ ಮುನ್ನೆಚ್ಚರಿಕೆ ವಹಿಸಿದ್ದ ಇಟಿಎಫ್ ಸಿಬ್ಬಂದಿಯತ್ತ ಏಕಾಏಕಿ ಒಂಟಿ ಸಲಗವೊಂದು ದಾಳಿ ಮಾಡಲು ಮುಂದಾಗಿದೆ.

ಆನೆ ಘೀಳಿಡುತ್ತಾ ಸಿಬ್ಬಂದಿಯನ್ನು ಅಟ್ಟಾಡಿಸಿದ್ದು, ಎದ್ದುಬಿದ್ದು ಓಡಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಬಳಿಕ ಪಟಾಕಿ ಸಿಡಿಸಿ ಕಾಡಾನೆಗಳನ್ನು ಕಾಡಿನತ್ತ ಓಡಿಸಲು ಸಿಬ್ಬಂದಿ ಹರಸಾಹಸಪಟ್ಟಿದ್ದಾರೆ. ಪಟಾಕಿ ಸಿಡಿಸುತ್ತಿದ್ದಂತೆ ಕಾಡಾನೆಗಳು ಚದುರಿ ಹೋಗಿವೆ. ಇದೇ ವೇಳೆ ದೈತ್ಯಾಕಾರದ ಒಂಟಿ ಸಲಗವೊಂದು ಗ್ರಾಮದ ಮನೆಗಳ ಮುಂಭಾಗದಲ್ಲೇ ಹಾದು ಹೋಗಿದ್ದು, ಜನರು ಭಯಭೀತರಾಗಿದ್ದಾರೆ.



ಕಾರ್ಮಿಕರು, ಗ್ರಾಮಸ್ಥರು ಆತಂಕದಿಂದ ಮನೆ ಸೇರಿದರು.

ಕಾಡಾನೆ ರಸ್ತೆ ದಾಟುತ್ತಿದ್ದ ವೇಳೆ ಸಾರಿಗೆ ಬಸ್ ಹಾಗೂ ಅರಣ್ಯ ಇಲಾಖೆ ಜೀಪ್‌ನ್ನು ಚಾಲಕರು ಸ್ಥಳದಲ್ಲೇ ನಿಲ್ಲಿಸಿಕೊಂಡಿದ್ದರು. ಏಕಾಏಕಿ ಒಂಟಿ ಸಲಗ ಬಸ್ ಹಾಗು ಜೀಪ್‌ನತ್ತಲೂ ನುಗ್ಗಿದ್ದು, ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಈ ವೇಳೆ ಇಟಿಎಫ್ ಸಿಬ್ಬಂದಿ ಹಾಗು ಸ್ಥಳದಲ್ಲಿದ್ದ ಜನರು ಚೆಲ್ಲಾಪಿಲ್ಲಿಯಾಗಿ ಓಡಿದ್ದಾರೆ.

**ಶಾಲೆಗಳಿಗೆ ರಜೆ ಘೋಷಣೆ**

ಕಾಡಾನೆಗಳ ಹಾವಳಿ ಹಿನ್ನಲೆ ಮುನ್ನೆಚ್ಚರಿಕಾ ಕ್ರಮವಾಗಿ ಗಂಗಾವರ ಸುತ್ತಮುತ್ತಲಿನ ಗ್ರಾಮಗಳ ಶಾಲೆಗಳಿಗೆ ರಜೆ ಘೋಷಿಸಲಾಗಿದೆ. ಸದ್ಯ ಅರಣ್ಯ ಇಲಾಖೆ ಸಿಬ್ಬಂದಿ ಕಾಡಾನೆಗಳ ಚಲನವಲನದ ಮೇಲೆ ನಿಗಾ ಇರಿಸಿದ್ದು, ಗ್ರಾಮಸ್ಥರು ಎಚ್ಚರಿಕೆಯಿಂದ ಇರುವಂತೆ ಅರಣ್ಯ ಇಲಾಖೆ ಅಧಿಕಾರಿಗಳು ಸೂಚಿಸಿದ್ದಾರೆ. ಇಟಿಎಫ್ ಸಿಬ್ಬಂದಿ ಸ್ಥಳಲ್ಲೇ ಮೊಕ್ಕಾಂ ಹೂಡಿದ್ದಾರೆ.

**30ಕ್ಕೂ ಹೆಚ್ಚು ಕಾಡಾನೆಗಳ ಹಿಂಡು**

ಒಂಟಿ ಸಲಗದ ಆತಂಕ ಒಂದೆಡೆಯಾದರೆ ಮತ್ತೊಂದೆಡೆ ಗಂಗಾವರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂವತ್ತಕ್ಕೂ ಹೆಚ್ಚು ಕಾಡಾನೆಗಳ ಹಿಂಡು ಗ್ರಾಮಗಳತ್ತ ನುಗ್ಗಿ ಕಾಫಿ, ಭತ್ತ, ಅಡಿಕೆ, ಮೆಕ್ಕೆಜೋಳ ಸೇರಿದಂತೆ ಅಪಾರ ಪ್ರಮಾಣದ ಬೆಳೆ ನಾಶ ಮಾಡಿವೆ.

ಮರಿಗಳೇ ಹೆಚ್ಚಿರುವ ಕಾಡಾನೆಗಳ ಹಿಂಡು ಕಳೆದ

» ನಾಲ್ಕನೇ ಪುಟದಲ್ಲಿ

# ಲೈಂಗಿಕ ದೌರ್ಜನ್ಯ: ಪೋಕ್ಸೋ ಪ್ರಕರಣ

**ಹಾಸನ:** ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಶಾಂತಿಗ್ರಾಮ ಠಾಣೆಯಲ್ಲಿ ಪೋಕ್ಸೋ ಪ್ರಕರಣ ದಾಖಲಿಸಲಾಗಿದೆ.

ಹೊಂಗೇರಿ ಗ್ರಾಮದ ಭವನ್ ಎಂಬಾತನ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಲಾರಿ ಚಾಲಕನಾಗಿರುವ ಭವನ್ ಅಪ್ರಾಪ್ತೆಯನ್ನು ಪ್ರೀತಿಯ ನೆಪದಲ್ಲಿ ಪುಸಲಾಯಿಸಿ ದೌರ್ಜನ್ಯ ಎಸಗಿದ್ದಾನೆ ಎನ್ನಲಾಗಿದೆ. ಬಾಲಕಿ ತಮ್ಮ ಪೋಷಕರಿಗೆ ವಿಷಯ ತಿಳಿಸಿದಾಗ ಮಾಹಿತಿ ಗೊತ್ತಾಗಿದೆ. ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಹಾಸನ : ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ.ಎಲ್. ಮೂರ್ತಿ ಹಾಗು ಸದಸ್ಯರು ಸೆ.9 ರ ಬುಧವಾರ ಜಿಲ್ಲಾಡಳಿತದ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ.

# ಎಣ್ಣೆ-ಬಾಡೂಟ ಕೇಳಿದ್ದಕ್ಕೆ ಮಣಿಕಂಠನ ಕೊಲೆ

• ಪ್ರಜೋದಯ ವರದಿ

**ಹಾಸನ:** ಎಣ್ಣೆ-ಬಾಡೂಟ ಕೊಡಿಸುವಂತೆ ನಿತ್ಯ ಪೀಡಿಸುತ್ತಿದ್ದ, ಆತನ ಕಿರುಕುಳ ತಾಳಲಾರದೆ ಕೊಲೆ ಮಾಡಬೇಕಾಯಿತು ಎಂದು ಚನ್ನಪಟ್ಟಣ ವೃತ್ತದ ಬಳಿ ಸೋಮವಾರ ನಡೆದ ವ್ಯಕ್ತಿಯ ಕೊಲೆ ಪ್ರಕರಣದ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆಂದು ತಿಳಿದು ಬಂದಿದೆ.

ತಾಲ್ಲೂಕಿನ ಹರಳಹಳ್ಳಿ ಗ್ರಾಮದ ಮಣಿಕಂಠ (35) ಎಂಬಾತನನ್ನು ಹಾಡಹಗಲೇ ತಲೆ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಲಾಗಿತ್ತು. ತಡರಾತ್ರಿಯೇ ಆರೋಪಿಗಳಾದ ಪುನೀತ್ ಹಾಗು ಕಂಠಿಯನ್ನು ಬಂಧಿಸಿರುವ ಪೊಲೀಸರು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ. ನಡುರಸ್ತೆಯಲ್ಲಿ ದೊಡ್ಡ ಕಲ್ಲು ಎತ್ತಿ ಹಾಕುತ್ತಿರುವ ವಿಡಿಯೊ ಸಾರ್ವಜನಿಕರ ಮೊಬೈಲ್ ಕ್ಯಾಮರಾದಲ್ಲಿ ಸೆರೆಯಾಗಿದೆ.

ಆರೋಪಿಗಳಿಬ್ಬರೂ ಮದ್ಯದ ನಶೆಯಲ್ಲಿ ಮಣಿಕಂಠನನ್ನು ಆಟೋದಲ್ಲಿ ಹಿಂಬಾಲಿಸಿಕೊಂಡು ಬಂದಿದ್ದಾರೆ.



ಕ್ಷಣಾರ್ಧದಲ್ಲೇ ಕೊಂದು ಪರಾರಿಯಾಗಿದ್ದರು. ಅಮಲಿನಲ್ಲಿದ್ದ ಕಾರಣ ಅವರಿಗೆ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ. ಮೊಬೈಲ್ ನಂಬರ್ ಟ್ರ್ಯಾಕ್ ಮಾಡಿದ ಪೊಲೀಸರು ಕೆಲವೇ ಹೊತ್ತಿನಲ್ಲಿ ಹೆಡೆಮುರಿ ಕಟ್ಟಿದ್ದಾರೆ.

**ಆಟೋ ಬಾಡಿಗೆ ವಿಚಾರವಾಗಿ ಗಲಾಟೆ**

ಮಣಿಕಂಠ ಹಾಗು ಪುನೀತ್‌ಗೆ ಹೊಸ ಬಸ್ ನಿಲ್ದಾಣದಲ್ಲಿ ಆಟೋ ನಿಲ್ಲಿಸುವ ವಿಚಾರವಾಗಿ ಈ ಹಿಂದೆ ಎರಡು ಬಾರಿ ಗಲಾಟೆ ನಡೆದಿತ್ತು. ಅದೇ ದ್ವೇಷದಿಂದ ಕೊಲೆ ಮಾಡಲಾಗಿದೆ ಎಂದು ಮೃತರ ತಂದೆ ಯೋಗಣ್ಣ ಅವರು ಆರೋಪಿಸಿದ್ದಾರೆ.

ನಿಮ್ಮ ಮಗನಿಗೆ ಸುಮ್ಮನೆ ಇರಲು ಹೇಳಿ, ಮತ್ತೆ ನನ್ನ ತಂಟೆಗೆ ಬಂದರೆ ಮುಗಿಸಿಬಿಡುತ್ತೇನೆಂದು ಪುನೀತ್ ಧಮ್ಕಿ ಹಾಕಿದ್ದ. ನಾನು ಮಗ ಮಣಿಕಂಠನಿಗೆ ಸುಮ್ಮನಿರುವಂತೆ ಹೇಳಿದ್ದೆ. ಪುತ್ರ ಮಣಿಕಂಠ ಆಟೋ ಓಡಿಸುವ ಜೊತೆಗೆ 80 ಅಡಿ ರಸ್ತೆಯಲ್ಲಿರುವ ಭಾರತ್ ಪೆಟ್ರೋಲ್ ಬಂಕ್‌ನಲ್ಲಿ ಪಾರ್ಟ್ ಟೈಮ್ ಕೆಲಸ ಮಾಡಿಕೊಂಡಿದ್ದ. ಆಲೂರು ತಾಲ್ಲೂಕು ಹಂಜಿಹಳ್ಳಿಯಲ್ಲಿರುವ ನಮ್ಮ ಅಕ್ಕ ಮೀನಾಕ್ಷಿಯವರ ಗೃಹ ಪ್ರವೇಶ ಸಮಾರಂಭಕ್ಕೆ ಕುಟುಂಬ ಸಮೇತ ಹೋಗಿದ್ದರು. ಮಣಿಕಂಠ ಸಹ ಪೆಟ್ರೋಲ್ ಬಂಕ್‌ನಿಂದ ಹಂಜಿಹಳ್ಳಿಗೆ ಬರುವುದಾಗಿ ತಿಳಿಸಿದ್ದ. ಆ ಉದ್ದೇಶದಿಂದ ಚನ್ನಪಟ್ಟಣ ವೃತ್ತದಲ್ಲಿ ಹೋಗುತ್ತಿದ್ದಾಗ ಪುನೀತ್ ಮತ್ತು ಕಂಠಿ ಎದುರಾಗಿ ಆಟೋ ಓಡಿಸುವ ವಿಚಾರವಾಗಿ ಕ್ಯಾತೆ ತೆಗೆದು ಕೊಲೆ ಮಾಡಿದ್ದಾರೆಂದು ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

# ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಹಣ-ಮೊಬೈಲ್ ದರೋಡೆ

• ಪ್ರಜೋದಯ ವರದಿ

**ಹಾಸನ:** ಗ್ರಾನೈಟ್ ಕಾರ್ಖಾನೆಯ ಇಬ್ಬರು ಕಾರ್ಮಿಕರ ಮೇಲೆ ಬೈಕ್‌ನಲ್ಲಿ ಬಂದ ಅಪರಿಚಿತರು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಮೊಬೈಲ್ ಹಾಗು ಹಣ ದೋಚಿ ಪರಾರಿಯಾಗಿರುವ ಘಟನೆ ನಗರದ ಕೈಗಾರಿಕಾ ಪ್ರದೇಶದಲ್ಲಿ ಸೋಮವಾರ ರಾತ್ರಿ ನಡೆದಿದೆ. ಸಾದಿಕ್, ಗುಲ್ವಾರ್ ಗಾಯಗೊಂಡ ಕಾರ್ಮಿಕರು.

ಕಾರ್ಮಿಕರು ರಾತ್ರಿ ವೇಳೆ ಕಾರ್ಖಾನೆಯ ಗೇಟ್ ತೆರೆಯುತ್ತಿದ್ದ ಸಂದರ್ಭದಲ್ಲಿ ಬೈಕ್‌ನಲ್ಲಿ ಬಂದ ಇಬ್ಬರು ಅಪರಿಚಿತರು ಏಕಾಏಕಿ ಮಾರಕಾಸ್ತ್ರಗಳಿಂದ ದಾಳಿ ನಡೆಸಿ, ಮೊಬೈಲ್ ಹಾಗು ಹಣ ಕಸಿದು ಪರಾರಿಯಾಗಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

ಕೈಗಾರಿಕಾ ಪ್ರದೇಶದಲ್ಲಿ ವಿವಿಧ ಜಿಲ್ಲೆ ಹಾಗು ಹೊರರಾಜ್ಯಗಳಿಂದ ಸಾವಿರಾರು ಕಾರ್ಮಿಕರು ಉದ್ಯೋಗದಲ್ಲಿದ್ದು, ಹಲವು ಘಟಕಗಳಲ್ಲಿ ಮೂರು ಪಾಳಿಗಳಲ್ಲಿ ಕೆಲಸ ನಡೆಯುತ್ತದೆ. ರಾತ್ರಿ ಪಾಳಿಯಲ್ಲಿ ಕೆಲಸ ಮುಗಿಸಿ ಮನೆಗೆ ತೆರಳುವ ಕಾರ್ಮಿಕರು ಹಾಗು ಮಹಿಳಾ ಉದ್ಯೋಗಿಗಳ ಸುರಕ್ಷತೆ ಕುರಿತು ಆತಂಕ ಹೆಚ್ಚಾಗಿದೆ. ಹೀಗಾಗಿ ಕೈಗಾರಿಕಾ ಪ್ರದೇಶದಲ್ಲಿ ರಾತ್ರಿ ಗಸ್ತು ಹೆಚ್ಚಿಸಿ, ಅನುಮಾನಾಸ್ಪದ ವ್ಯಕ್ತಿಗಳು ಹಾಗು ವಾಹನಗಳ ಮೇಲೆ ನಿಗಾ ವಹಿಸಬೇಕು. ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಅಳವಡಿಸಿ, ಬೀದಿ ದೀಪ ವ್ಯವಸ್ಥೆ ಸುಧಾರಿಸುವ ಮೂಲಕ ಕಾರ್ಮಿಕರಿಗೆ ಸುರಕ್ಷಿತ ವಾತಾವರಣ ಕಲ್ಪಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

## 98 ಸಾವಿರ ಫಲಾನುಭವಿಗಳಿಗೆ ತೊಂದರೆ | ದಾಖಲಾತಿ ಹೊಂದಾಣಿಕೆ ಸಂಕಷ್ಟ

# ಪಿಂಚಣಿಗಾಗಿ ವೃದ್ಧರು, ವಿಧವೆಯರ ಪರದಾಟ

**-ಮಲ್ಲಿಕಾರ್ಜುನ ಕೊಚ್ಚರಗಿ**

• ಪ್ರಜೋದಯ ವರದಿ

**ಹಾಸನ:** ಕಂದಾಯ ಇಲಾಖೆಯ ನಿಯಮಗಳು, ತಾಂತ್ರಿಕ ಕಾರಣಗಳಿಂದ ಜಿಲ್ಲಾದ್ಯಂತ 98, 850 ಫಲಾನುಭವಿಗಳಿಗೆ ಕಳೆದ ಹಲವು ತಿಂಗಳಿನಿಂದ ಸಾಮಾಜಿಕ ಭದ್ರತೆಯ ಪಿಂಚಣಿ ಸ್ಥಗಿತಗೊಂಡಿದ್ದು, ವಯೋವೃದ್ಧರು-ವಿಧವೆಯರು, ಅಂಗವಿಕಲರು ಪರದಾಡು ವಂತಾಗಿದೆ.

ಸರ್ಕಾರ ಪ್ರತಿ ತಿಂಗಳು ನೀಡುತ್ತಿದ್ದ ಪಿಂಚಣಿ ಹಣದಲ್ಲೇ ಬದುಕುತ್ತಿರುವವರಿಗೆ ದಿಢೀರ್ ಸ್ಥಗಿತದಿಂದ ತೊಂದರೆಯಾಗುತ್ತಿದೆ. ತಾಂತ್ರಿಕ ಕಾರಣಗಳನ್ನು ಮುಂದಿಟ್ಟುಕೊಂಡು ನಾಲ್ಕೈದು ತಿಂಗಳಿನಿಂದ ಹಣ ಪಾವತಿಸದಿರುವುದು ಏಕೆಂದು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ.

**ಆದಾಯ ಮಿತಿ ಗೊಂದಲ**




ಹಿಂದೆ ಪಿಂಚಣಿಗೆ ವಾರ್ಷಿಕ ಆದಾಯ ಮಿತಿ ಕಡಿಮೆ ಇದ್ದ ಕಾರಣ ಹಾಗು ಪರಿಶೀಲನೆ ವೇಳೆ ಉಂಟಾದ ವ್ಯತ್ಯಾಸಗಳಿಂದ ಹಲವರಿಗೆ ಪಿಂಚಣಿ ಹಣ ಬಂದಿಲ್ಲ. ಸರ್ಕಾರವು ವಾರ್ಷಿಕ ಆದಾಯ 40 ಸಾವಿರ ರೂ.ನಿಂದ 1.20 ಲ.ರೂ.ಗೆ ಹೆಚ್ಚಿಸಿದೆ. ಆಧಾರ್ ಜೋಡಣೆ ಹಾಗು ಜೀವಮಾನ ಪ್ರಮಾಣಪತ್ರ ಸಲ್ಲಿಕೆಯಲ್ಲಿ ತೊಂದರೆಗಳಾಗಿವೆ. ಹೀಗಾಗಿ ಮಾಸಾಶನವನ್ನೇ ನಂಬಿ ಬದುಕುತ್ತಿರುವ ಹಿರಿಯ ನಾಗರಿಕರು, ವಿಧವೆಯರು ಮತ್ತು ಅಂಗವಿಕರು ಹಣ ಸಿಗದೆ ನಿತ್ಯ ಕಚೇರಿಗೆ ಅಲೆಯುವಂತಾಗಿದೆ.

**ಪಿಂಚಣಿ ಸೌಲಭ್ಯ ಕಡಿತ ಕುರಿತು ಮಾಹಿತಿ**

| ತಾಲ್ಲೂಕು | ಗೊಂದಲ | ದಾಖಲೆ ಸಲ್ಲಿಸಿದವರು | ಹೊರಗುಳಿದವರು |
|---|---|---|---|
| ಆಲೂರು | 9113 | 2345 | 6768 |
| ಅರಕಲಗೂಡು | 11530 | 2420 | 9110 |
| ಅರಸೀಕೆರೆ | 17434 | 12129 | 5305 |
| ಬೇಲೂರು | 9126 | 2620 | 6506 |
| ಚನ್ನರಾಯಪಟ್ಟಣ | 18068 | 7898 | 10170 |
| ಹಾಸನ | 18827 | 4534 | 14293 |
| ಹೊಳೆನರಸೀಪುರ | 9709 | 4766 | 4943 |
| ಸಕಲೇಶಪುರ | 5043 | 1675 | 3368 |

**ಪರಿಹಾರ ಕ್ರಮವೇನು ?**

ಫಲಾನುಭವಿಗಳು ತಕ್ಷಣವೇ ತಮ್ಮ ಹತ್ತಿರದ ಗ್ರಾಮ ಒನ್, ಕರ್ನಾಟಕ ಒನ್ ಅಥವಾ ನಾಡ ಕಚೇರಿಗೆ ಭೇಟಿ ನೀಡಿ ಆಧಾರ್ ಮತ್ತು ಪಿಂಚಣಿ ಸ್ಥಿತಿಯನ್ನು ಪರಿಶೀಲಿಸಬೇಕು. ಅಗತ್ಯವಿರುವ ದಾಖಲೆಗಳನ್ನು ಅಥವಾ ಇ-ಕೆವೈಸಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕಿದೆ. ಆದರೆ, ಈ ಪ್ರಕ್ರಿಯೆ ಸಾಕಷ್ಟು ಗೊಂದಲಗಳಿಂದ ಕೂಡಿದೆ.

ವಯೋವೃದ್ಧರು ಸೇವಾ ಕೇಂದ್ರಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸರ್ವರ್ ಸಮಸ್ಯೆ, ವಿದ್ಯುತ್ ವ್ಯತ್ಯಯ, ಸಿಬ್ಬಂದಿ ಕೊರತೆ ಹೀಗೆ ನಾನಾ ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಜೀವನಕ್ಕೆ ಆಧಾರವಾಗಿ ರುವ ಹಣಕ್ಕಾಗಿ ಫಲಾನುಭವಿಗಳು ನಿತ್ಯ ಕಚೇರಿಗೆ ಅಲೆಯುತ್ತಿದ್ದಾರೆ. ಆದರೆ ಸರ್ಕಾರ ಮಾತ್ರ ಪರಿಹಾರ ಕ್ರಮವನ್ನು ನಿಧಾನಗತಿಯಲ್ಲಿ ಮಾಡುತ್ತಿದೆ ಎಂಬ ಆರೋಪ ಕೇಳಿಬಂದಿದೆ.

ಇಂದಿರಾ ಗಾಂಧಿ ವೃದ್ಧಾಪ್ಯ ವೇತನ 60 ವರ್ಷಕ್ಕೆ 600 ರೂ., 65 ವರ್ಷದವರಿಗೆ 1200 ರೂ., ವಿಧವಾ ವೇತನ 800 ರೂ., ಅಂಗವಿಕಲರ ವೇತನ 800 (ಶೇ. 40 ರಿಂದ 74), ಶೇ. 75ರಷ್ಟು ಅಂಗವಿಕಲತೆಯಿಂದ ಬಳಲುತ್ತಿರುವವರಿಗೆ 1400 ರೂ.,

» ನಾಲ್ಕನೇ ಪುಟದಲ್ಲಿ

# ಮಾಣಿಕ್ಯ ಪ್ರಕಾಶನದಿಂದ ವಾರ್ಷಿಕ ದತ್ತಿ ಪ್ರಶಸ್ತಿ ಪ್ರಕಟ

• ಪ್ರಜೋದಯ ವರದಿ

**ಹಾಸನ:** ಮಾಣಿಕ್ಯ ಪ್ರಕಾಶನ ಪ್ರತಿವರ್ಷ ಕೊಡಮಾಡುವ ವಾರ್ಷಿಕ ದತ್ತಿ ಪ್ರಶಸ್ತಿ ಪ್ರಕಟವಾಗಿದ್ದು, 2026-27ನೇ ಸಾಲಿಗೆ 28 ಕೃತಿಗಳು ಭಾಜನವಾಗಿವೆ ಎಂದು ಪ್ರಕಾಶಕಿ ದೀಪಾ ಉಪ್ಪಾರ್ ಅವರು ತಿಳಿಸಿದ್ದಾರೆ.

ಅ.11ರ ಭಾನುವಾರ ಸಂಸ್ಕೃತ ಭವನದಲ್ಲಿ ಹಮ್ಮಿಕೊಂಡಿರುವ 11ನೇ ವಾರ್ಷಿಕೋತ್ಸವ ಹಾಗು ರಾಜ್ಯ ಮಟ್ಟದ ಕವಿ ಕಾವ್ಯ ಸಂಭ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಕೊಟ್ರೇಶ್ ಉಪ್ಪಾರ್, ಗೌರವಾಧ್ಯಕ್ಷ ರಂಜಾನ್ ದರ್ಗಾ, ಮಹಾರಾಷ್ಟ ರಾಜ್ಯಾಧ್ಯಕ್ಷ ಡಾ. ವಿಶ್ವೇಶ್ವರ ಎನ್.ಮೇಟಿ, ಮಹಾರಾಷ್ಟ್ರ ರಾಜ್ಯ ಗೌರವಾಧ್ಯಕ್ಷ ಡಾ. ಅಮರೇಶ ಪಾಟೀಲ, ಕುವೆಂಪು ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಡಾ. ಹೆಚ್.ಕೆ.ಹಸೀನಾ, ಸಾಹಿತಿಗಳಾದ ಎನ್. ಶೈಲಜಾ ಹಾಸನ, ಶಿವಲೀಲಾ ಹುಣಸಗಿ, ಎ.ಎ. ದರ್ಗಾ ಅವರನ್ನೊಳಗೊಂಡ ಆಯ್ಕೆ ಸಮಿತಿ ರಾಜ್ಯ ಹಾಗು ಹೊರ ರಾಜ್ಯಗಳಿಂದ ಆಹ್ವಾನಿತ ಸುಮಾರು 300ಕ್ಕೂ ಹೆಚ್ಚು ಕೃತಿಗಳನ್ನು ಪರಿಶೀಲಿಸಿ ದತ್ತಿ ಪ್ರಶಸ್ತಿಗೆ ಕೃತಿಗಳ ಆಯ್ಕೆ ಮಾಡಿದೆ ಎಂದು ಹೇಳಿದರು.




“ಇನ್ನು ಮಣಿಪುರದಲ್ಲಿ ಶೇ.43, ಬಿಹಾರದಲ್ಲಿ ಶೇ.42, ಆಂಧ್ರಪ್ರದೇಶ ಮತ್ತು ಅರುಣಾಚಲ ಪ್ರದೇಶದಲ್ಲಿ ತಲಾ ಶೇ.41, ಪಂಜಾಬ್‌ನಲ್ಲಿ ಶೇ.36, ಗೋವಾದಲ್ಲಿ ಶೇ.34, ಅಸ್ಸಾಂನಲ್ಲಿ ಶೇ.25, ಕರ್ನಾಟಕದಲ್ಲಿ ಶೇ.23, ರಾಜಸ್ಥಾನದಲ್ಲಿ ಶೇ.22, ಕೇರಳದಲ್ಲಿ ಶೇ.21 ಹಾಗೂ ಮಿಜೋರಾಂನಲ್ಲಿ ಶೇ.20ರಷ್ಟು ಮಳೆಯ ಕೊರತೆ ಉಂಟಾಗಿದೆ.

# ಮಳೆ ಎಲ್ಲಿದೆ? ರೈತನ ಕಣ್ಣಲ್ಲಿ ಸಾವಿರ ಪ್ರಶ್ನೆಗಳು!

ಮಳೆಗಾಲವೆಂದರೆ ರೈತನ ಕಣ್ಣಲ್ಲಿ ಆಗ ಸಾವಿರ ಕನಸುಗಳು ಮೊಳಕೆಯೊಡೆಯುತ್ತವೆ. ಮಾನ್ಸೂನ್ ಮಾರುತಗಳು ಹೊತ್ತು ತರುವ ಮಳೆ ಧರಣಿಯನ್ನು ತಂಪಾಗಿಸಿದಾಗ, ಒಣಗಿದ್ದ ಭೂಮಿ ಹಸಿರು ಸೀರೆಯುಟ್ಟ ಪ್ರಕೃತಿ ದೇವತೆಯಂತೆ ಕಂಗೊಳಿಸುತ್ತದೆ. ನೆಲ ಹಸನಾಗಿ, ನದಿಗಳೆಲ್ಲ ಉಕ್ಕಿ ಹರಿಯುತ್ತವೆ. ಮಳೆಗಾಲವೆಂದರೆ ರೈತನಿಗೆ ಬದುಕಿನ ಭರವಸೆ, ದೇಶಕ್ಕೆ ಅನ್ನದ ಭದ್ರತೆ, ಪ್ರಕೃತಿಗೆ ಹೊಸ ಚೈತನ್ಯ. ಆದರೆ ಈ ಬಾರಿ ಕಥೆ ಬೇರೆಯಾಗಿದೆ. ಮಳೆ ಬರಬೇಕಾದ ಸಮಯದಲ್ಲಿ ಮೋಡಗಳು ಮುನಿಸಿಕೊಂಡವು; ರೈತನ ಮುಖದಲ್ಲಿದ್ದ ಮಂದಹಾಸ ನಿಧಾನವಾಗಿ ಮಾಯವಾಯಿತು.

ಸಾಮಾನ್ಯವಾಗಿ ಜೂನ್ ಹಾಗೂ ಜುಲೈ ತಿಂಗಳಲ್ಲಿ ಬೀಳಬೇಕಿದ್ದ ಮಳೆ ಸಮರ್ಪಕವಾಗಿ ಬೀಳಲಿಲ್ಲ. ದೇಶದ ಎಡೆಯೂ ಬರದ ಛಾಯೆ ಆವರಿಸುವ ಮೂಲಕ ರೈತ ಕಂಗಾಲಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ದೇಶದ ಒಟ್ಟು ಸರಾಸರಿ ಮಳೆಯ ಪ್ರಮಾಣದಲ್ಲಿ ಶೇಕಡಾ 16ರಷ್ಟು ಕೊರತೆ ಉಂಟಾಗಿದೆ. ಕರ್ನಾಟಕದಲ್ಲಿ ಮಳೆಯ ಕೊರತೆಯ ಪ್ರಮಾಣವು ಶೇಕಡಾ 35ರಿಂದ 40ರಷ್ಟು ಮುಟ್ಟಿದೆ.

ಆಗ ತಿಂಗಳ ಹೊತ್ತಿಗೆ ಮುಂಗಾರು ಸ್ವಲ್ಪ ವೇಗ ಪಡೆದಿದ್ದರ ಪರಿಣಾಮವಾಗಿ ರೈತರಲ್ಲಿ ಕೊಂಚ ಆಸೆ ಚಿಗುರಿತ್ತು. ಆ ಸ್ವಲ್ಪ ಮಳೆಯೇ ರೈತನಲ್ಲಿ ಮತ್ತೆ ಬದುಕಿನ ನಿರೀಕ್ಷೆಯನ್ನು ಮೂಡಿಸಿತು. ಅದು ಕೂಡಾ ಕೈಕೊಟ್ಟಿದ್ದರೆ ಪರಿಸ್ಥಿತಿ ಇನ್ನಷ್ಟು ಚಿಂತಾಜನಕವಾಗುತ್ತಿತ್ತು. ಜೊತೆಗೆ ಕರ್ನಾಟಕ ಮತ್ತು ತಮಿಳುನಾಡು ನೀರಿಗಾಗಿ ಹೊಡೆದಾಡುವ ಪರಿಸ್ಥಿತಿ ಮತ್ತಷ್ಟು ತಾರಕಕ್ಕೇರುತ್ತಿತ್ತು.

ಆಗ ತಿಂಗಳಲ್ಲಿ ರಾಜ್ಯದ ಕೆಲವೆಡೆ ಅಲ್ಪಸ್ವಲ್ಪ ಪ್ರಮಾಣದಲ್ಲಿ ಮಳೆಯಾಗಿದೆ. ಆದರೆ ಅದು ಎಲ್ಲರಲ್ಲೂ ಖುಷಿ ತರುವಷ್ಟು ಪ್ರಮಾಣದಗಿಲ್ಲ. ಮಳೆ ಬಂತು ಎಂಬ ಸಂತೋಷಕ್ಕಿಂತ, ಎಲ್ಲಿ ಎಷ್ಟು ಬಂತು ಎಂಬ ಪ್ರಶ್ನೆಯೇ ಈ ಬಾರಿ ಹೆಚ್ಚು ಕಾಡುತ್ತಿದೆ. ಟೈಮ್ಸ್ ಆಫ್ ಇಂಡಿಯಾ ವರದಿಯ ಪ್ರಕಾರ, ಭಾರತದಲ್ಲಿ ಅತಿ ಹೆಚ್ಚು ಪ್ರಮಾಣದಲ್ಲಿ ಮಳೆ ಬೀಳುವ ಪ್ರದೇಶವಾದ ಚಿರಾಪುಂಜಿಯ ಶೇಕಡಾ 58ರಷ್ಟು ಮಳೆಯ ಕೊರತೆ ಉಂಟಾಗಿದೆ.

ಇನ್ನು ಮಣಿಪುರದಲ್ಲಿ ಶೇ.43, ಬಿಹಾರದಲ್ಲಿ ಶೇ.42, ಆಂಧ್ರಪ್ರದೇಶ ಮತ್ತು ಅರುಣಾಚಲ ಪ್ರದೇಶದಲ್ಲಿ ತಲಾ ಶೇ.41, ಪಂಜಾಬ್‌ನಲ್ಲಿ ಶೇ.36, ಗೋವಾದಲ್ಲಿ ಶೇ.34, ಅಸ್ಸಾಂನಲ್ಲಿ ಶೇ.25, ಕರ್ನಾಟಕದಲ್ಲಿ ಶೇ.23, ರಾಜಸ್ಥಾನದಲ್ಲಿ ಶೇ.22, ಕೇರಳದಲ್ಲಿ ಶೇ.21 ಹಾಗೂ ಮಿಜೋರಾಂನಲ್ಲಿ ಶೇ.20ರಷ್ಟು ಮಳೆಯ ಕೊರತೆ ಉಂಟಾಗಿದೆ.

ಮಾನ್ಸೂನ್ ಮಾರುತಗಳನ್ನು ಬರಮಾಡಿಕೊಳ್ಳುವ ಕೇರಳದ ಈ ಬಾರಿ ಮಳೆಯ ಪ್ರಮಾಣ ಶೇ.21ರಷ್ಟು ಕಡಿಮೆಯಾಗಿದೆ. ಮತ್ತೊಂದೆಡೆ ತಮಿಳುನಾಡು, ಮಹಾರಾಷ್ಟ್ರ, ಗುಜರಾತ್, ತೆಲಂಗಾಣ, ಹರಿಯಾಣ, ಹಿಮಾಚಲ ಪ್ರದೇಶ, ಉತ್ತರಾಖಂಡ, ಉತ್ತರ ಪ್ರದೇಶ, ಜಾರ್ಖಂಡ್, ಛತ್ತೀಸ್‌ಗಢ, ಪಶ್ಚಿಮ ಬಂಗಾಳ, ತ್ರಿಪುರಾ ಮತ್ತು ನಾಗಾಲ್ಯಾಂಡ್ ರಾಜ್ಯಗಳಲ್ಲಿ ಸಾಧಾರಣ ಮಟ್ಟದಲ್ಲಿ ಮಳೆಯಾಗಿದೆ. ಆದರೆ ಒಡಿಶಾದಲ್ಲಿ ಶೇ.20ರಷ್ಟು ಮತ್ತು ಲಡಾಖ್‌ನಲ್ಲಿ ಶೇ.60ರಷ್ಟು ಸಾಮಾನ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿದೆ.

ಅಂದರೆ ಮಳೆ ಸಂಪೂರ್ಣವಾಗಿ ನಿಂತಿಲ್ಲ; ಮಳೆಯ ಸ್ವಭಾವವೇ ಬದಲಾಗಿದೆ. ಎಲ್ಲಿ ಮಳೆ ಬೇಕಿತ್ತೋ ಅಲ್ಲಿ ಬರ, ಎಲ್ಲಿ ಕಡಿಮೆ ಮಳೆ ಸಾಮಾನ್ಯವೋ ಅಲ್ಲಿ ಅತಿಮಳೆ– ಈ ವೈಪರೀತ್ಯವೇ ಇಂದು ನಮ್ಮ ಮುಂದಿರುವ ದೊಡ್ಡ ಎಚ್ಚರಿಕೆ. ಜಲಾಶಯಗಳು ಸಂಪೂರ್ಣವಾಗಿ ಭರ್ತಿಯಾಗದಿರುವುದು ಮುಂದಿನ ದಿನಗಳಲ್ಲಿ ನೀರಿನ ಅಭಾವದ ಆತಂಕವನ್ನು ಹೆಚ್ಚಿಸಿದೆ. ಮಳೆ ಕಡಿಮೆಯಾಗುವುದು ಒಂದು ಸಮಸ್ಯೆ; ಮಳೆ ತನ್ನ ಹಳೆಯ ದಾರಿಯನ್ನೇ ಬದಲಿಸಿಕೊಳ್ಳುವುದು ಇನ್ನೂ ದೊಡ್ಡ ಸಮಸ್ಯೆ.

ಸಮುದ್ರದ ಮೇಲ್ಮೈಯಲ್ಲಿ ಉಂಟಾಗುವ ಒಂದು ಸಣ್ಣ ಬದಲಾವಣೆ, ಸಾವಿರಾರು ಕಿಲೋಮೀಟರ್ ದೂರದಲ್ಲಿರುವ ರೈತನ ಬದುಕಿನ ಮೇಲೆ ಪರಿಣಾಮ ಬೀರುತ್ತದೆ ಎಂದರೆ ನಂಬಲು ಕಷ್ಟವಾಗಬಹುದು. ಆದರೆ ಪ್ರಕೃತಿಯ ವ್ಯವಸ್ಥೆ ಅಷ್ಟೊಂದು ಸೂಕ್ಷ್ಮವೂ ಶಕ್ತಿಯುತವೂ ಆಗಿದೆ. ಸದ್ಯ ಭಾರತವನ್ನು ಕಾಡುತ್ತಿರುವ ಎಲ್ ನಿನೊ ಮುಂಬರುವ ದಿನಗಳಲ್ಲಿ ಮತ್ತಷ್ಟು ಬಲಗೊಳ್ಳುವ ಸಾಧ್ಯತೆಯಿದೆ. ಈ ವರ್ಷದ ಕೊನೆಯವರೆಗೂ ಈ ವಿದ್ಯಮಾನ ಮುಂದುವರಿಯಬಹುದು.

ಇದರಿಂದ ಸಮುದ್ರದ ಮೇಲ್ಮೈ ಉಷ್ಣಾಂಶ ಹೆಚ್ಚಾಗುತ್ತದೆ. ಸಾಮಾನ್ಯವಾಗಿ ಸಮುದ್ರದ ಮೇಲ್ಮೈ ಉಷ್ಣಾಂಶವು 1.5 ಡಿಗ್ರಿ ಸೆಂ. ಹೆಚ್ಚಾಗುವ ಸಂದರ್ಭಗಳಿದ್ದು, ಈ ಬಾರಿ ಅದು 2.2ರಿಂದ 2.6 ಡಿಗ್ರಿ ಸೆಂ. ಹೆಚ್ಚಾಗುವ ಸಾಧ್ಯತೆಗಳಿವೆ. ಈ ಉಷ್ಣಾಂಶದ ಏರಿಕೆ ಕೇವಲ ಸಮುದ್ರಕ್ಕೆ ಸೀಮಿತವಾಗುವುದಿಲ್ಲ, ಅದರ ಅಲೆಗಳು ಹವಾಮಾನದ ಮೇಲೆ, ಹವಾಮಾನದ ಅಲೆಗಳು ಮಳೆಯ ಮೇಲೆ, ಮಳೆಯ ಬದಲಾವಣೆಗಳು ಕೃಷಿಯ ಮೇಲೆ, ಕೃಷಿಯ ಪರಿಣಾಮ ಇಡೀ ಸಮಾಜದ ಮೇಲೆ ಬೀರುತ್ತವೆ.

ಎಲ್ ನಿನೊ ಪರಿಣಾಮದಿಂದ ಪೆಸಿಫಿಕ್ ಭಾಗದ ಕೆಲವು ರಾಷ್ಟ್ರಗಳಲ್ಲಿ ಉಷ್ಣಾಂಶ ಶೇ.8ರಷ್ಟು ಹೆಚ್ಚಾಗಿದೆ. ಈ ಬೆಳವಣಿಗೆ ಸಾಮಾನ್ಯ ಹವಾಮಾನ ಬದಲಾವಣೆಯಷ್ಟೇ ಅಲ್ಲ; ಇಡೀ ಜಗತ್ತಿನ ಹವಾಮಾನ ವ್ಯವಸ್ಥೆಯಲ್ಲಿ ಉಂಟಾಗುತ್ತಿರುವ ದೊಡ್ಡ ಬದಲಾವಣೆಯ ಸಂಕೇತವೂ ಹೌದು. ಈ ಬಾರಿಯ ಎಲ್ ನಿನೊ ಮತ್ತಷ್ಟು ಬಲವಾಗುತ್ತಾ ಹೆಚ್ಚಿನ ಪ್ರಮಾಣದಲ್ಲಿ ತೊಂದರೆ ಉಂಟು ಮಾಡುವ ಸಾಧ್ಯತೆಗಳು ಗೋಚರಿಸುತ್ತಿವೆ.

ಈಗಾಗಲೇ ಇದರ ಪರಿಣಾಮ ಭಾರತದಲ್ಲೂ ಕಾಣಿಸಿಕೊಂಡಿದೆ. ಸಾಮಾನ್ಯವಾಗಿ ಎಲ್ ನಿನೊ ಪರಿಣಾಮಕಾರಿಯಾಗಿರುವ ವರ್ಷಗಳಲ್ಲಿ ಭಾರತದಲ್ಲಿ ಮಳೆಯ ಅಭಾವ ಕಂಡುಬರುವ ಸಾಧ್ಯತೆ ಹೆಚ್ಚಿರುತ್ತದೆ. ಜೊತೆಗೆ ಮಳೆಯ ಹರಡುವಿಕೆಯಲ್ಲೂ ವ್ಯತ್ಯಾಸ ಉಂಟಾಗಬಹುದು. ಈ ವರ್ಷದ ಉದಾಹರಣೆಯನ್ನೇ ತೆಗೆದುಕೊಂಡರೆ, ಮಹಾರಾಷ್ಟ್ರದ ಮುಂಬೈ, ಪುಣೆ ಹಾಗೂ ಅಲ್ಲಿನ ಕರಾವಳಿ ತೀರದ ನಗರಗಳು ಹೆಚ್ಚಿನ ಮಳೆಯ ಮೂಲಕ ಪ್ರವಾಹದ ಹೊಡೆತವನ್ನು ಎದುರಿಸಿವೆ. ಆದರೆ ಕೇರಳ ಮತ್ತು ಕರ್ನಾಟಕದ ಪಶ್ಚಿಮ ಘಟ್ಟಗಳಲ್ಲಿ ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಆಗಿಲ್ಲ. ಒಂದೇ ದೇಶದಲ್ಲಿ ಒಂದೆಡೆ ಪ್ರವಾಹ, ಮತ್ತೊಂದೆಡೆ ಮಳೆಯ ಕೊರತೆ–ಇದು ಪ್ರಕೃತಿಯ ವ್ಯಂಗ್ಯವಲ್ಲ; ಬದಲಾಗುತ್ತಿರುವ ಹವಾಮಾನದ ಎಚ್ಚರಿಕೆಯ ಗಂಟೆ. ಮಳೆ ಎಲ್ಲಿಗೆ ಬೇಕೋ ಅಲ್ಲಿಗೆ ಬೀಳದಿದ್ದಾಗ, ಪ್ರಕೃತಿಯ ಅಸಮತೋಲನದ ಬೆಲೆ ಮನುಷ್ಯನೇ ತೆರಬೇಕಾಗುತ್ತದೆ.

ಈ ವರ್ಷ ಎಲ್ ನಿನೊದ ಕಾರಣದಿಂದ ಮಳೆಗಾಲವೇ ಸಮಸ್ಯೆಗೆ ತುತ್ತಾಗಿದೆ. ಆದರೆ ಚಳಿಗಾಲವಾದರೂ ಸರಿಯಾಗಿದ್ದು, ಮುಂದಿನ ಮಳೆಗಾಲದ ಹೊತ್ತಿಗೆ ಎಲ್ಲವೂ ಸರಿಯಾಗಬಹುದೇ? ಈ ಪ್ರಶ್ನೆಗೆ ಉತ್ತರ ಕೂಡಾ ಆಶಾದಾಯಕವಾಗಿಲ್ಲ. ಎಲ್ ನಿನೊ ಪರಿಣಾಮದಿಂದ ಹಿಂದೂ ಮಹಾಸಾಗರ ದ್ವಿಧ್ರುವಿನಲ್ಲೂ ಬಹಳಷ್ಟು ವ್ಯತ್ಯಾಸ ಕಂಡುಬಂದಿರುವುದರಿಂದ ಭಾರತದಲ್ಲಿ ಈ ವರ್ಷ ಹಿಂಗಾರು ಮಳೆಯೂ ಕಡಿಮೆಯಾಗ ಬಹುದು ಎಂಬ ಆತಂಕ ವ್ಯಕ್ತವಾಗಿದೆ.

ಹೀಗಾಗಿ ಒಂದು ಮಳೆಗಾಲದ ಕೊರತೆ ಮತ್ತೊಂದು ಮಳೆಗಾಲದ ಮೇಲೂ ನೆರಳು ಬೀರುವ ಸಾಧ್ಯತೆ ಇದೆ. ಇದೆಲ್ಲವನ್ನೂ ಹೊರತುಪಡಿಸಿ ಮಳೆಯಾಗುವುದಾದರೆ, ಅದು ಚಂಡಮಾರುತದಂತಹ ಕಾರಣಗಳಿಂದ ಆಗಬೇಕಷ್ಟೇ. ಅಂದರೆ ನಮಗೆ ಬೇಕಾದ ಸಮಯದಲ್ಲಿ, ಬೇಕಾದ ಪ್ರಮಾಣದಲ್ಲಿ, ಬೇಕಾದ ರೀತಿಯಲ್ಲಿ ಮಳೆ ಬರುವುದೇ ದೊಡ್ಡ ಪ್ರಶ್ನೆಯಾಗಿದೆ. ಹಾಗಾಗಿ ಇಂದು ಮಳೆಯ ಕೊರತೆಯನ್ನು ಎದುರಿಸುತ್ತಿದ್ದೇವೆ; ನಾಳೆ ನೀರಿನ ಕೊರತೆಯನ್ನು ಎದುರಿಸಬೇಕಾಗದಂತೆ ಇಂದು ಎಚ್ಚೆತ್ತುಕೊಳ್ಳುವುದು ನಮ್ಮ ಜವಾಬ್ದಾರಿ.




ಹವಾಮಾನ ಬದಲಾಗುತ್ತಿದೆ ಎಂಬುದನ್ನು ಅರಿಯಲು ದೊಡ್ಡ ವೈಜ್ಞಾನಿಕ ವರದಿಗಳ ಅಗತ್ಯವಿಲ್ಲ; ನಮ್ಮ ಸುತ್ತಲಿನ ಪ್ರಕೃತಿಯನ್ನೇ ಗಮನಿಸಿದರೆ ಸಾಕು. ಈಗಾಗಲೇ ಭಾರತದಲ್ಲಿ ಮಾನ್ಸೂನ್ ಮಾರುತಗಳ ಕಾಲವೂ ಬದಲಾಗುತ್ತಿದೆ. ಸಾಮಾನ್ಯವಾಗಿ ಜೂನ್ ಮೊದಲ ವಾರದಲ್ಲಿ ಕಾಲಿಡುತ್ತಿದ್ದ ಮಾನ್ಸೂನ್, ಮೇ ತಿಂಗಳ ಕೊನೆಯ ಹೊತ್ತಿಗೇ ಬರುತ್ತಿರುವ ಸಂದರ್ಭಗಳು ಕಂಡುಬರುತ್ತಿವೆ. ಮಾನ್ಸೂನ್ ಮಾರುತಗಳು ಬರುವ ಸಮಯದಲ್ಲಿ ಅರಬ್ಬಿ ಸಮುದ್ರದಲ್ಲಿ ಚಂಡಮಾರುತಗಳು ಸೃಷ್ಟಿಯಾಗುತ್ತಿರುವುದೂ ಗಮನಾರ್ಹ. ಇವೆಲ್ಲವೂ ಭಾರತದ ಹವಾಮಾನ ಬದಲಾಗುತ್ತಿರುವುದರ ಸೂಚನೆಗಳು.

ಚಳಿಗಾಲದ ಬಿಸಿಲಿನ ತೀವ್ರತೆ ಹೆಚ್ಚಾಗುತ್ತಿರುವುದರಿಂದ ಮುಂದಿನ ಬೇಸಿಗೆಯನ್ನು ಸಹಿಸಿಕೊಳ್ಳುವುದೂ ಕಷ್ಟವಾಗುತ್ತಿದೆ. ಅದು ಮತ್ತಷ್ಟು ರಣಭೀಕರವಾಗುವ ಸಾಧ್ಯತೆಗಳೂ ಇವೆ. ಹೀಗಾದಾಗ ನಂತರ ಬರುವ ಮಳೆಗಾಲವೂ ವಿಪರೀತ ಸ್ವರೂಪ ಪಡೆಯಬಹುದು. 2019ರಲ್ಲಿ ರಾಜ್ಯ ಎದುರಿಸಿದ ಪರಿಸ್ಥಿತಿ ಇದಕ್ಕೆ ಒಂದು ಉದಾಹರಣೆಯಾಗಿದೆ. ಮಾರ್ಚ್–ಏಪ್ರಿಲ್ ತಿಂಗಳ ಬಿಸಿಲಿನ ತೀವ್ರತೆಯ ನಂತರ ಬಂದ ಮಳೆ ರಾಜ್ಯ ಹಿಂದೆಂದೂ ಕಾಣದ ರೀತಿಯ ಪ್ರವಾಹ ಪರಿಸ್ಥಿತಿಯನ್ನು ಸೃಷ್ಟಿಸಿತ್ತು.

ಸಾಮಾನ್ಯವಾಗಿ ಪ್ರತಿ ಐದರಿಂದ ಏಳು ವರ್ಷಗಳ ಒಳಗೆ ಎಲ್ ನಿನೊ ಕಾಣಿಸಿಕೊಳ್ಳುತ್ತದೆ ಎಂಬ ಅಭಿಪ್ರಾಯವಿದೆ. ಆದರೆ ಅದರ ಸ್ವರೂಪ ಮತ್ತು ಮಾದರಿಯಲ್ಲೂ ಬದಲಾವಣೆಗಳು ಕಾಣಿಸಿ ಕೊಳ್ಳುತ್ತಿವೆ. ಕೇವಲ ಮೂರು–ನಾಲ್ಕು ವರ್ಷಗಳಿಗೊಮ್ಮೆ ಅದರ ಪರಿಣಾಮ ಎದುರಾಗುತ್ತಿರುವುದನ್ನು ಗಮನಿಸಿದರೆ, ಪ್ರಕೃತಿ ನಮಗೆ ಕೊಡುವ ಎಚ್ಚರಿಕೆಯನ್ನು ನಿರ್ಲಕ್ಷಿಸುವ ಕಾಲ ಇದಲ್ಲ.

ಅಷ್ಟಕ್ಕೂ ಈ ಎಲ್ ನಿನೊ ಏನಿದು? ಹೆಸರು ಕೇಳಲು ಪುಟ್ಟ ಬಾಲಕನಂತೆ ಕಂಡರೂ, ಅದರ ಪರಿಣಾಮ ಮಾತ್ರ ಇಡೀ ಜಗತ್ತಿನ ಹವಾಮಾನವನ್ನು ಅಲುಗಾಡಿಸುವಷ್ಟು ದೊಡ್ಡದು. ಎಲ್ ನಿನೊ ಎಂಬ ಹೆಸರನ್ನು ಸ್ಪ್ಯಾನಿಷ್ ಭಾಷೆಯಿಂದ ಪಡೆದುಕೊಳ್ಳಲಾಗಿದೆ.



ಇದಕ್ಕೆ ಲಿಟಲ್ ಬಾಯ್ ಎಂಬ ಅರ್ಥವಿದೆ. ಕ್ರಿ.ಶ. 1600ರ ಸುಮಾರಿಗೆ ದಕ್ಷಿಣ ಅಮೆರಿಕಾದ ಮೀನುಗಾರರು ಡಿಸೆಂಬರ್ ತಿಂಗಳಲ್ಲಿ ಮೀನು ಹಿಡಿಯಲು ಸಮುದ್ರಕ್ಕೆ ಇಳಿದಾಗ, ಸಮುದ್ರದ ನೀರು ಅಸಹಜವಾಗಿ ಬಿಸಿಯಾಗಿರುವುದನ್ನು ಗಮನಿಸಿದರು.

ಅದು ಕ್ರಿಸ್ಮಸ್ ಸಮಯವಾಗಿದ್ದರಿಂದ ಈ ವಿದ್ಯಮಾನವನ್ನು ಯೇಸು ಕ್ರಿಸ್ತನೊಂದಿಗೆ ಸಂಬಂಧಿಸಿ ಎಲ್ ನಿನೊ ಡಿ ನವಿಡಾದ್ ಎಂದು ಕರೆಯಲಾಯಿತು. ಇದರ ಅರ್ಥ ಕ್ರಿಸ್ತನ ಮಗು ಅಥವಾ ಬಾಲ ಯೇಸು. ಕಾಲಕ್ರಮೇಣ ಕ್ರಿಸ್ಮಸ್ ಎನ್ನುವುದು ಬಿಟ್ಟುಹೋಗಿ ಎಲ್ ನಿನೊ ಎಂಬ ಹೆಸರು ಮಾತ್ರ ಉಳಿಯಿತು. ಒಂದು ಕಾಲದಲ್ಲಿ ಮೀನುಗಾರರು ಗಮನಿಸಿದ ಸಮುದ್ರದ ಬಿಸಿಯ ಬದಲಾವಣೆ, ಇಂದು ಇಡೀ ಜಗತ್ತು ಗಂಭೀರವಾಗಿ ಗಮನಿಸಬೇಕಾದ ಹವಾಮಾನದ ವಿದ್ಯಮಾನವಾಗಿದೆ.

ದಕ್ಷಿಣ ಅಮೆರಿಕಾದ ಪೆರು ಮತ್ತು ಈಕ್ವೆಡಾರ್ ಕರಾವಳಿಯ ಪೆಸಿಫಿಕ್ ಸಾಗರದಲ್ಲಿ ಸಮುದ್ರದ ಮೇಲ್ಮೆ ನೀರು ಅಸಹಜವಾಗಿ ಬೆಚ್ಚಗಾಗುವ ವಿದ್ಯಮಾನವನ್ನು ಎಲ್ ನಿನೊ ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಪೆಸಿಫಿಕ್ ಸಾಗರದಲ್ಲಿ ವ್ಯಾಪಾರ ಮಾರುತಗಳು ಪೂರ್ವದಿಂದ ಪಶ್ಚಿಮಕ್ಕೆ ಬೀಸುತ್ತವೆ. ಹೀಗಾಗಿ ಪೆಸಿಫಿಕ್ ಸಾಗರದ ಮೇಲಿನ ಬೆಚ್ಚಗಿನ ನೀರು ಏಷ್ಯಾದ ಕಡೆಗೆ ಸಾಗುತ್ತದೆ. ಆ ನೀರು ಆವಿಯಾಗಿ, ನಂತರ ಮಳೆಯ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ. ಆದರೆ ಎಲ್ ನಿನೊ ಉಂಟಾದಾಗ ಟ್ರೇಡ್ ವಿಂ ದುರ್ಬಲಗೊಳ್ಳುತ್ತವೆ.

ಇದರಿಂದ ಸಾಗರದ ಮೇಲಿನ ಬೆಚ್ಚಗಿನ ನೀರಿನ ಚಲನೆಯಲ್ಲೂ ಬದಲಾವಣೆ ಉಂಟಾಗುತ್ತದೆ. ಆ ನೀರು ದಕ್ಷಿಣ ಅಮೆರಿಕಾದ ಕರಾವಳಿಯ ಕಡೆಗೆ ಸಾಗುತ್ತದೆ. ಅಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿ ಪ್ರವಾಹ ಉಂಟಾಗಬಹುದು. ಮತ್ತೊಂದೆಡೆ ಏಷ್ಯಾ ಮತ್ತು ಆಸ್ಟ್ರೇಲಿಯಾಗಳಿಗೆ ಮಳೆಯ ಕೊರತೆ ಸೇರಿದಂತೆ ವಿವಿಧ ಹವಾಮಾನ ಸಮಸ್ಯೆಗಳು ಎದುರಾಗುತ್ತವೆ. ಎಲ್ ನಿನೊಗೆ ಸಂಬಂಧಿಸಿದ ಪ್ರಮುಖ ಅಂಶಗಳಲ್ಲಿ ತಾಪಮಾನ ಏರಿಕೆಯೂ ಒಂದು. ಜಾಗತಿಕ ತಾಪಮಾನ ಹೆಚ್ಚಾದಂತೆ ಸಾಗರದ ಮೇಲ್ಮೈ ಉಷ್ಣಾಂಶವೂ ಹೆಚ್ಚಾಗುತ್ತದೆ. ಇದರಿಂದ ಎಲ್ ನಿನೋ ಪರಿಣಾಮ ಮತ್ತಷ್ಟು ತೀವ್ರವಾಗುವ ಸಾಧ್ಯತೆಯಿದೆ. ಜಗತ್ತಿನ ಯಾವುದೋ ಒಂದು ಮೂಲೆಯಲ್ಲಿ ಉಂಟಾಗುವ ಹವಾಮಾನದ ವೈಪರೀತ್ಯ ಮತ್ತೊಂದು ಭಾಗದ ಬದುಕಿನ ಮೇಲೂ ಪರಿಣಾಮ ಬೀರುತ್ತದೆ.

ಮಳೆ ಎಂದರೆ ಕೇವಲ ಆಕಾಶದಿಂದ ಭೂಮಿಗೆ ಬೀಳುವ ನೀರಲ್ಲ. ಅದು ರೈತನ ಬದುಕಿನ ಭರವಸೆ, ಹೊಲದ ಹಸಿರು, ನದಿಯ ಹರಿವು, ಜಲಾಶಯದ ಜೀವ ಮತ್ತು ದೇಶದ ಆಹಾರ ಭದ್ರತೆ. ಆದ್ದರಿಂದ ಎಲ್ ನಿನೊದಂತಹ ಹವಾಮಾನದ ವೈಪರೀತ್ಯವನ್ನು ಕೇವಲ ಒಂದು ವರ್ಷದ ಮಳೆ ಕೊರತೆಯಾಗಿ ನೋಡಲು ಸಾಧ್ಯವಿಲ್ಲ. ಇದು ಪ್ರಕೃತಿಯೊಂದಿಗೆ ನಮ್ಮ ಸಂಬಂಧವನ್ನು ಮರು ಪರಿಶೀಲಿಸುವ ಸಮಯ.

ಇಂದು ನಾವು ಎದುರಿಸುತ್ತಿರುವ ಪ್ರಶ್ನೆ ಮಳೆ ಯಾವಾಗ ಬರುತ್ತದೆ? ಎನ್ನುವುದಷ್ಟೇ ಅಲ್ಲ; ಮಳೆ ಬಂದಾಗ ಅದನ್ನು ಎಷ್ಟು ಉಳಿಸಿಕೊಳ್ಳುತ್ತೇವೆ? ಎನ್ನುವುದೂ ಹೌದು. ನೀರಿನ ಸಂರಕ್ಷಣೆ, ಪರಿಸರ ರಕ್ಷಣೆ, ಅರಣ್ಯಗಳ ಉಳಿವು, ಜಲಮೂಲಗಳ ಪುನರುಜ್ಜೀವನ ಮತ್ತು ವೈನಿಕ ಕೃಷಿ ಪದ್ಧತಿಗಳ ಅಳವಡಿಕೆ– ಇವುಗಳು ಇನ್ನು ಆಯ್ಕೆಗಳಲ್ಲ; ಭವಿಷ್ಯದ ಅವಶ್ಯಕತೆಗಳು. ರೈತನ ಮುಖದಲ್ಲಿ ಮತ್ತೆ ಆ ಮಂದಹಾಸ ಮೂಡಬೇಕು. ಒಣಗಿದ ಭೂಮಿ ಮತ್ತೆ ಹಸಿರು ಸೀರೆಯುಡಬೇಕು. ನದಿಗಳು ಮತ್ತೆ ಉಕ್ಕಿ ಹರಿಯಬೇಕು. ಜಲಾಶಯಗಳು ಮತ್ತೆ ತುಂಬಬೇಕು. ಅದಕ್ಕಾಗಿ ಪ್ರಕೃತಿಯನ್ನು ಗೆಲ್ಲುವ ಹಠವಲ್ಲ, ಪ್ರಕೃತಿಯೊಂದಿಗೆ ಬದುಕುವ ಬುದ್ಧಿವಂತಿಕೆ ನಮಗೆ ಬೇಕು.

ಏಕೆಂದರೆ ಮಳೆ ಕೈಕೊಟ್ಟಾಗ ಅದರ ನೋವು ಕೇವಲ ರೈತನ ಮನೆಯ ಬಾಗಿಲಿಗೆ ನಿಲ್ಲುವುದಿಲ್ಲ; ಅದು ಇಡೀ ಸಮಾಜದ ಬಾಗಿಲನ್ನೂ ತಟ್ಟುತ್ತದೆ. ಆದ್ದರಿಂದ ಇಂದು ನಾವು ಉಳಿಸುವ ಪ್ರತಿಯೊಂದು ಹನಿ ನೀರು, ನಾಳೆಯ ಒಂದು ಕುಟುಂಬದ ಬದುಕನ್ನು ಉಳಿಸಬಹುದು. ಇಂದು ನಾವು ನೆಡುವ ಪ್ರತಿಯೊಂದು ಮರ, ನಾಳೆಯ ಒಂದು ಮಳೆಯ ಹನಿಗೆ ಕಾರಣವಾಗಬಹುದು. ಹಾಗಾಗಿ ಈ ಪ್ರಕೃತಿಯನ್ನು ಕಾಪಾಡುತ್ತ ಅದರೊಂದಿಗೆ ಬೆರೆತು ಬದುಕುವ ಅವಶ್ಯಕತೆ ಇದೆ.

**– ಡಾ.ಜಗದೀಶ** ಮಾನೆ



# ನೆಲದ ಮೇಲೆ ಕುಳಿತು ಊಟ ಮಾಡುವುದರ ಲಾಭಗಳು



ಊಟ ಮಾಡುವುದು ಕೇವಲ ಒಂದು ಚಟುವಟಿಕೆ ಎಂದಾಗಿರುವ ಈ ಕಾಲದಲ್ಲಿ ನೆಲದ ಮೇಲೆ ಕುಳಿತು ಊಟ ಮಾಡುವುದು ಎಂದರೆ ಕಷ್ಟದ ಕೆಲಸದಂತಾಗಿದೆ. ಅದರಲ್ಲೂ ಯುವಕರಲ್ಲಿ ಅಸಡ್ಡೆಯ ಜೊತೆಗೆ ಅಸಾಧ್ಯದ ಭಾವನೆಯೇ ಎದ್ದು ಕಾಣುತ್ತದೆ ಈಗಿನ ಜೀವನ ಶೈಲಿಯಲ್ಲಿ ಮನೆಮಂದಿಯೆಲ್ಲಾ ಒಟ್ಟಿಗೆ ಊಟಕ್ಕೆ ಕೂರುವುದು ಎಂದರೆ ಅದು ಎಲ್ಲರ ಸೌಭಾಗ್ಯವೆ ಸರಿ.

ನಮ್ಮ ಸನಾತನ ಧರ್ಮದಲ್ಲಿ ಊಟ ಎಂದರೆ ಅದೊಂದು ಗೌರವ ಪೂರ್ವಕವಾಗಿ ನಡೆಸುವ ದೈನಂದಿನ ಯಜ್ಞವಿದ್ದಂತೆ. ಕೇವಲ ಹೊಟ್ಟೆ ತುಂಬಿಸಿಕೊಳ್ಳುವ ಕ್ರಿಯೆ ಅಲ್ಲ. ನೆಲದ ಮೇಲೆ ಪದ್ಮಾಸನದಲ್ಲಿ ಸುಖಾಸನ ಕುಳಿತು ಕೈ ಮುಗಿದು ಪ್ರಾರ್ಥಿಸಿ, ನಿಶ್ಚಿಂತೆಯಿಂದ ಬರಿಗೈಯಲ್ಲಿ ಸೇವಿಸುವ ಆಹಾರ ನಮ್ಮ ಜಠರಕ್ಕೆ, ಅಷ್ಟೇ ಅಲ್ಲದೆ ಆತ್ಮಕ್ಕೂ ತೃಪ್ತಿ ನೀಡುವುದು. ಊಟದ ನಂತರ ಅನ್ನ ದಾತೋ ಸುಖೀ ಭವ ಎಂಬ ಒಂದು ವ್ಯಾಖ್ಯಾನ ಅಡಿಗೆ ತಯಾರಿಸಿದವರ ಪಾಲಿಗೆ ಸಾರ್ಥಕತೆಯ ಅನುಭವ ನೀಡುತ್ತದೆ.

## ನೆಲದ ಮೇಲೆ ಕುಳಿತು ಊಟ ಮಾಡುವುದರ ಹಿಂದಿನ ವೈಜ್ಞಾನಿಕ

- ಯೋಗಾಸನದಲ್ಲಿ ಪ್ರಮುಖ ಆಸನವಾದ ಪದ್ಮಾಸನದಲ್ಲಿ ಕುಳಿತಾಗ ನಮ್ಮ ಕಿಬ್ಬೊಟ್ಟೆಯ ಮೇಲಿನ ಭಾಗಗಳೆಲ್ಲವೂ ಬೆನ್ನು ಹುರಿಯ ಸಹಾಯದಿಂದ ನೇರವಾಗುತ್ತದೆ ಹಾಗು ಪೆಲ್ವಿಕ್ ಸ್ನಾಯುಗಳು ಹಿಗ್ಗುತ್ತದೆ. ಇದರಿಂದ ನಮ್ಮ ಜೀರ್ಣಾಂಗ ವ್ಯೂಹವು ಉತ್ತಮ ಸ್ಥಿತಿಯನ್ನು ತಲುಪಿ ಜೀರ್ಣಕ್ಕೆ ಸಹಕರಿಸುತ್ತದೆ.
- ನೆಲದ ಮೇಲೆ ಕುಳಿತಾಗ ಮನಸ್ಸು ಪ್ರಶಾಂತಗೊಳ್ಳುತ್ತದೆ ಹಾಗು ಸ್ಥಿರತೆಯನ್ನು ವೃದ್ಧಿಗೊಳಿಸಿ ಆಹಾರದತ್ತ ಗಮನಹರಿಸಲು ಸಾಧ್ಯವಾಗುತ್ತದೆ.
- ನಮ್ಮ ಕುಟುಂಬದ ಸದಸ್ಯರೊಡನೆ ಸಮಯ ಕಳೆಯಲು ಇದೊಂದು ಸುಯೋಗವಿದ್ದಂತೆ. ಎಲ್ಲರ ಅಭಿರುಚಿ ತಿಳಿಯುವ ವೇದಿಕೆಯೂ ಹೌದು.
- ಕೆಲವು ಅಧ್ಯಯನಗಳ ಪ್ರಕಾರ ಕೆಳಗೆ ಕೂತು ಊಟ ಮಾಡುವವರು ಯಾವುದೇ ಸಹಾಯವಿಲ್ಲದೆ ಏಳಲು ಶಕ್ತರಾಗಿದಲ್ಲಿ ಅವರ ಆಯಸ್ಸು ವೃದ್ಧಿಸುತ್ತದೆ.
- ಮೊಣಕೈ ಹಾಗು ಕಾಲುಗಳಿಗೆ ವ್ಯಾಯಾಮ ದೊರೆಯುತ್ತದೆ, ಇದರಿಂದ ಸಂಧಿವಾತ ಹಾಗು ಒಸ್ಟಿಯೋಪೋರೆಸಿಸ್ಕಾಯಿಲೆಗಳನ್ನು ತಡೆಯಬಹುದು.
- ಬರಿಗೈಯಲ್ಲಿ ಊಟ ಮಾಡುವಾಗ ನಮ್ಮ ಐದು ಬೆರಳುಗಳು ಸೇರಿ ಒಂದು ಮುದ್ರೆ ರಚನೆಗೊಳ್ಳುತ್ತದೆ ಇದು ಪಂಚೇಂದ್ರಿಯಗಳನ್ನು ಪ್ರೇರೇಪಿಸಿ ಮೆದುಳಿಗೆ ಸಂದೇಶ ರವಾನಿಸುತ್ತದೆ, ಆಗ ಜೀರ್ಣ ಕ್ರಿಯೆಗೆ ಬೇಕಾದ ಜೀರ್ಣರಸಗಳು, ಸಹಜವಾಗಿ ಬಿಡುಗಡೆಗೊಳ್ಳುತ್ತದೆ.
- ಕೈಯಲ್ಲಿ ತಿನ್ನುವಾಗ ಆಹಾರದ ಬಿಸಿ ಹಾಗೂ ಮೃದುತ್ವ ನಮ್ಮ ಗಮನಕ್ಕೆ ಬರುತ್ತದೆ.
- ವೈದಿಕ ಶಾಸ್ತ್ರದ ಪ್ರಕಾರ ನಮ್ಮ ಕೈ ಬೆರಳುಗಳು ಪಂಚ ತತ್ವಗಳಿಂದ ಕೂಡಿದೆ ಹೆಬ್ಬೆರಳು–ಅಗ್ನಿ, ತೋರುಬೆರಳು ವಾಯು, ಮಧ್ಯಬೆರಳು–ಆಕಾಶ, ಉಂಗುರ ಬೆರಳು –ಭೂಮಿ, ಕಿರುಬೆರಳು – ನೀರು.
- ಊಟ ಮಾಡುವಾಗ ಬಾಗಿ ಏಳುವ ಪರಿ ಆಹಾರವನ್ನು ಸುಲಭವಾಗಿ ಜಠರಕ್ಕೆ ಜಾರಲು ಸಹಕರಿಸುತ್ತದೆ, ಹಾಗೂ ಆರೋಗ್ಯ ವೃದ್ಧಿಯಾಗಿ ದೀರ್ಘಾಯುಷ್ಯನ್ನು ಪಡೆಯಬಹುದು.



# ಗುಣ ಗ್ರಹಣ

ಇಂದು ಗುಣಗ್ರಹಣದ ಬಗ್ಗೆ ತಿಳಿದುಕೊಳ್ಳೋಣ. ಗುಣಗ್ರಹಣ ಅನ್ನುವುದು ಒಂದು ನೀತಿ. ಇದನ್ನು ಪೂಜ್ಯ ಸಿದ್ದೇಶ್ವರ ಸ್ವಾಮೀಜಿ ಒಂದು ಪ್ರವಚನದಲ್ಲಿ ಹೇಳಿದ್ದು.



ಗುಣ ಗ್ರಹಣ ಎಂದರೆ ದೋಷ ಗುರುತಿಸದೆ ಒಳ್ಳೆಯದನ್ನು ನೋಡಬೇಕು. ಪ್ರತಿಯೊಬ್ಬ ವ್ಯಕ್ತಿಯೊಳಗೆ, ಪ್ರತಿಯೊಂದು ವಸ್ತುವಿನಲ್ಲಿ ಎರಡು ಗುಣಗಳು ಜೊತೆಯಾಗಿ ಇರುತ್ತವೆ. ಒಂದು ಗುಣ ಮತ್ತು ಅದರ ವಿರುದ್ಧ ಗುಣವು ಜೊತೆಯಾಗಿರುತ್ತದೆ. ಒಂದು ಒಳ್ಳೆಯದು ಮತ್ತೊಂದು ದೋಷಪೂರಿತ ಕೆಟ್ಟದ್ದು. ಎರಡನ್ನು ಗುರುತಿಸಬೇಕು. ಆ ಬಳಿಕ ಏನು ಬೇಡದ್ದು ಇದೆ ಅದರ ಕಡೆ ಲಕ್ಷ್ಯ ಕೊಡಬಾರದು. ಅದರಲ್ಲಿರುವ ಗುಣ (ಒಳ್ಳೆಯದನ್ನು) ಗಮನಿಸಬೇಕು. ಆಗ ಜಗತ್ತು ಚಂದ ಆಗುತ್ತದೆ. ಬಹಳ ಸುಂದರವಾಗುತ್ತದೆ. ಆಗ ನಾವು ಬದುಕಲಿಕ್ಕೆ ಕಲಿತಿದ್ದೇವೆ ಎಂದು ಅದರ ಅರ್ಥ.

ಕೆಲವರ ಸ್ವಭಾವ ಇದೆ. ಬರಿ ತಪ್ಪು ಹುಡುಕುವುದು. ಏನು ಸೂರ್ಯ ಉರಿಯುತ್ತಿದ್ದಾನೆ? ಅನ್ನುತ್ತೇವೆ. ಬೆಳಕು ಕೊಡುತ್ತಾನೆ ಅನ್ನುವುದು ಮಹತ್ವದಲ್ಲ. ಹೀಗಾಗಿ ಬದುಕು ಕೆಡಿಸಿಕೊಳ್ಳುತ್ತೇವೆ. ಸೂರ್ಯ ಅಂದ ಬಳಿಕ ಅದರಲ್ಲಿ ಎರಡು ಇದೆ. ಒಂದಿಷ್ಟು ಶಾಖ, ಒಂದಿಷ್ಟು ಬೆಳಕು ಇದೆ. ನಮಗೆ ಯಾವುದು ಹಿಡಿಸುತ್ತದೆ ಅದರ ಕಡೆ ಲಕ್ಷ್ಯ ಕೊಡುವುದು. ಯಾವುದು ಒಳ್ಳೆಯದು ಇದೆ ಅದರ ಕಡೆ ಲಕ್ಷ್ಯ ಕೊಡುವುದು. ಬರೀ ಕೆಟ್ಟದ್ದನ್ನು ಹುಡುಕುತ್ತಾ ಹೋದರೆ ಜೀವನ ಕೆಟ್ಟದಾಗುತ್ತದೆ. ಜೀವನವನ್ನು ನಾವೇ ಕೆಡಿಸಿಕೊಳ್ಳುತ್ತೇವೆ. ಸಣ್ಣ ಸಂಗತಿ ಅದೇ ಬಹಳ ದೊಡ್ಡದಾಗಿ ಬಿಡುತ್ತದೆ. ಆ ಬಳಿಕ ಹೇಳುತ್ತೇವೆ ಇದು ಸರಿಯಲ್ಲ ಅಂತ.

ಈಗ ರಸಾಯನ ಶಾಸ್ತ್ರದಲ್ಲಿ ಕಾರ್ಬನ್ ಡೈಯಾಕ್ಸೈಡ್ ಇದೆ. ಇದರಲ್ಲಿ ಎರಡು ಇದೆ. ಒಂದು ಕಾರ್ಬನ್ ಇನ್ನೊಂದು ಆಕ್ಸಿಜನ್ ಇದೆ. ಆಕ್ಸಿಜನ್ ನಮಗೆ ಬಹಳ ಇಷ್ಟ ಅಂತೀವಿ. ಯಾರಾದರೂ ಇಂಗಾಲ ಉಸಿರಾಡುತ್ತಾರೇನು?. ಇಲ್ಲ. ಎರಡು ಕೂಡಿದ ಕೂಡಲೇ ಬೇಡದ ವಾಯು ಆಯ್ತು. ಇದು ಮಿಶ್ರಣ. ನೀರಿನಲ್ಲಿ ಜಲಜನಕ ಮತ್ತು ಆಮ್ಲಜನಕ ಎರಡು ಇದೆ. ನಮಗೆ ಆಮ್ಲಜನಕ ಹಿಡಿಸುತ್ತೆ ಜಲಜನಕ ಹಿಡಿಸುವುದಿಲ್ಲ. ನೀರಿನಲ್ಲಿ ಎರಡು ಇದೆ. ಆ ಎರಡು ಮಿಶ್ರಣ, ಮಿಶ್ರಣ ಆದ ಕೂಡಲೇ ನಾವು ಆ ಕಡೆ ಈ ಕಡೆ ನೋಡಬಾರದು. ಆ ಮಿಶ್ರಣ ನಮಗೆ ಹಿತವಾದದ್ದು. ಹಾಗೆ ಜಗತ್ತಿನಲ್ಲಿ ಬೇಡವಾದುದ್ದು, ಬೇಕಾದದ್ದು ಎರಡು ಇದೆ. ಇಂತಹ ಮಿಶ್ರಣ ಜಗತ್ತು ಇಂತಹದರಲ್ಲಿ ನಾವು ಏನು ನೋಡಬೇಕೊ? ಅದನ್ನು ನೋಡಬೇಕು. ಏನು ಕೇಳಬೇಕೋ? ಅದನ್ನು ಕೇಳಬೇಕು. ಏನನ್ನು ಮನಸ್ಸಿನಲ್ಲಿ ಇಟ್ಟು ಸಂತೋಷ ಪಡಬೇಕೋ? ಸಂತೋಷ ಪಡಬೇಕು. ಎಲ್ಲವನ್ನು ತಲೆಗೆ ಹಾಕೊಬಾರದು.

ಮಿಶ್ರಣ ಈ ಜಗತ್ತು. ಈ ಜಗತ್ತು ನಮ್ಮೊಬ್ಬರ ಸಲುವಾಗಿ ಆಗಿಲ್ಲ. ನಾನು ಇರಬೇಕು. ನೀವು ಇರಬೇಕು. ಎಲ್ಲರೂ ಇರಬೇಕು. ಎಲ್ಲರ ಸಲುವಾಗಿ ಜಗತ್ತು ಇರುವುದರಿಂದ ಈ ಜಗತ್ತಿಗೆ ಬಹುಮುಖಗಳು ಇರುವುದು ಸಾಮಾನ್ಯ. ಕೆಲವು ಪ್ರಾಣಿಗಳಿಗೆ ರಾತ್ರಿ ಹಿಡಿಸುತ್ತದೆ. ಕೆಲವು ಪ್ರಾಣಿಗಳಿಗೆ ಹಗಲು ಹಿಡಿಸುತ್ತದೆ. ಹಗಲು ಹಿಡಿಸಿದವರು ರಾತ್ರಿಯನ್ನು ಬೈದುಕೊಳ್ಳುತ್ತಾ ಕುಳಿತರೆ, ರಾತ್ರಿ ಹಿಡಿಸಿದವರು ಹಗಲನ್ನು ಬೈದುಕೊಳ್ಳುತ್ತಾ ಕುಳಿತರೆ, ಜೀವನ ಚಂದ ಆಗುವುದಿಲ್ಲ. ರಾತ್ರಿ ನೋಡಿ ಎಂತ ವೈಭವ. ಹಗಲಿನ ವೈಭವ ಬೇರೆ ರಾತ್ರಿಯ ವೈಭವ ಬೇರೆ. ರಾತ್ರಿ ನಮ್ಮ ಸುತ್ತಮುತ್ತ ಕತ್ತಲೆ ಕತ್ತಲೆ. ಆದರೆ ಕಣ್ಣು ಆಕಾಶದ ಕಡೆ ನೋಡಿದರೆ ನಕ್ಷತ್ರಗಳೆ ನಕ್ಷತ್ರಗಳು. ಎಂತಹ ಸೌಂದರ್ಯ. ರಾತ್ರಿಯಲ್ಲೂ ಸೌಂದರ್ಯ ಇದೆ. ಇದನ್ನು ಗುರುತಿಸಬೇಕು. ರಾತ್ರಿಯನ್ನು ಬೈದುಕೊಳ್ಳುತ್ತಾ ಕೂರಬಾರದು.

ಒಂದು ಗಿಡ ಇತ್ತು. ಅದರ ಪೊಟರೆಯಲ್ಲಿ ಒಂದು ಗೂಬೆ ವಾಸವಾಗಿತ್ತು. ಅದೇ ಗಿಡದಲ್ಲಿ ಬೇರೆ ಪಕ್ಷಿಗಳು ವಾಸ ಮಾಡುತ್ತಿದ್ದವು. ಗಿಡ ಎರಡಕ್ಕೂ ಅವಕಾಶ ಕೊಟ್ಟಿತ್ತು. ಗಿಡ ತಾರತಮ್ಯ ಮಾಡಿರಲಿಲ್ಲ. ಹಗಲಿನವರು ಮಾತ್ರ ಇರಲಿ. ಇರುಳಿನವರು ಬೇಡ ಅಂದಿರಲಿಲ್ಲ. ಗೂಬೆ ಹಗಲಿನಲ್ಲಿ ಪೊಟರೆಯಲ್ಲಿ ಕೂರುತ್ತಿತ್ತು. ಉಳಿದವು ರಾತ್ರಿ ತಮ್ಮ ತಮ್ಮ ಗೂಡಿನಲ್ಲಿ ಕೂರುತ್ತಿದ್ದವು. ಗೂಬೆ ರಾತ್ರಿ ವೇಳೆ ತಿರುಗಾಡುತ್ತಿತ್ತು. ಗೂಬೆಗೆ ರಾತ್ರಿ ಹಿಡಿಸುತ್ತಿತ್ತು. ಬೇರೆ ಪಕ್ಷಿಗಳಿಗೆ ಹಗಲು ಹಿಡಿಸುತ್ತಿತ್ತು. ಒಂದು ಸಲ ಪಕ್ಷಿಗಳು ಸೂರ್ಯನನ್ನು ಕೊಂಡಾಡಲು ಶುರು ಮಾಡಿದವು. ಏನ್ ಬೆಳಕು! ಎಷ್ಟು ಸುಂದರ!. ಎಂತಹ ಗಾಳಿ!. ಅಂದವು. ಅದಕ್ಕೆ ಗೂಬೆ ಹೇಳಿತು. ಎಷ್ಟು ಸುಳ್ಳು ಹೇಳುತ್ತಾರೆ? ಅಂದಿತು. ಗೂಬೆ ಹೇಳಿತು, ಏನು ರಾತ್ರಿ? ಎಷ್ಟು ಸೌಮ್ಯವಾದ ಬೆಳಕು!. ಎಂತಹ ಆಕಾಶದಲ್ಲಿ ನಕ್ಷತ್ರಗಳು!. ಆಗೊಮ್ಮೆ ಈಗೊಮ್ಮೆ ಚಂದ್ರ. ರಾತ್ರಿ ಎಷ್ಟು ಸುಂದರ ಅಂದಿತು. ಪಕ್ಷಿಗಳು ಹಗಲು ಹೊಗಳುತ್ತಿದ್ದವು. ಗೂಬೆ ರಾತ್ರಿಯನ್ನು ಹೊಗಳುತ್ತಿತ್ತು. ಪಕ್ಷಿಗಳು ಹೇಳುತ್ತಿದ್ದವು, ಎಷ್ಟು ಸುಳ್ಳು ಹೇಳುತ್ತಿದ್ದಾನೆ? ಗೂಬೆ. ರಾತ್ರಿ ಏನದೆ? ಕೆಟ್ಟ ಕತ್ತಲು. ಕಣ್ಣು ತೆರೆದರೆ ಏನು ಕಾಣುವುದಿಲ್ಲ. ಇಂತಹ ರಾತ್ರಿಯನ್ನು ಇವನು ಹೊಗಳುತ್ತಾನೆ. ಆದರೆ ಗಿಡ ರಾತ್ರಿಯನ್ನು ಸಂತೋಷಪಡುತ್ತದೆ. ಹಗಲನ್ನೂ ಸಂತೋಷಪಡುತ್ತದೆ. ಹಗಲು ನೀವು ತಿರುಗಾಡಿ ಎಂದು ಪಕ್ಷಿಗಳಿಗೆ, ರಾತ್ರಿ ನೀನು ತಿರುಗಾಡು ಎಂದು ಗೂಬೆಗೆ ಹೇಳುತ್ತಿತ್ತು. ಆದರೆ ನನ್ನ ಬಳಿ ನೀವು ಇರಿ ಎನ್ನುತ್ತಿತ್ತು. ಜಗತ್ತು ಹೇಗಿದೆ ಎಂದರೆ ನಮಗೂ ಆಶ್ರಯ ಕೊಡುತ್ತದೆ. ನಿಮಗೂ ಆಶ್ರಯ ಕೊಡುತ್ತದೆ. ಎಲ್ಲರಿಗೂ ಆಶ್ರಯ ಕೊಡುತ್ತದೆ. ಹೀಗಿರೋದೆ ಅಂತ ನಾವು ಪಕ್ಕ ತಿಳಿದುಕೊಂಡಿರಬೇಕು. ಒಂದರ ಕಡೆ ಬಹಳ ತಲೆ ಕೆಡಿಸಿಕೊಳ್ಳಬಾರದು. ಗುಣ ಗ್ರಹಣ ಮಾಡಬೇಕು. ಆಗ ಗಿಡ ಹೇಳಿತು. ಹಗಲು ರಾತ್ರಿ ಎರಡು ಬೇಕು. ನೀವು ಬಯ್ಯುವುದು ಬೇಡ. ಹಗಲು ಗೂಬೆಗೆ ಆಶ್ರಯ. ರಾತ್ರಿ ಪಕ್ಷಿಗಳಿಗೆ ಆಶ್ರಯ. ಇಬ್ಬರೂ ಬದುಕುವುದರಿಂದ ಇಬ್ಬರಿಗೂ ಸಂತೋಷ. ಹಗಲು ಪಕ್ಷಿಗಳು ಹಾಡುತ್ತವೆ, ನೀನು ಕೇಳಿಸಿಕೊಳ್ಳುತ್ತಾ ಇರು. ರಾತ್ರಿ ಅವುಗಳಿಗೆ ಕಾವಲು ಮಾಡಿ ಕೊಡುತ್ತಿರು. ಪಕ್ಷಿಗಳು ನಿಶ್ಚಿಂತೆಯಿಂದ ನಿದ್ರೆ ಮಾಡಲಿ ಅಂತ ಗಿಡ ಹೇಳಿತು. ಸರಿಯಾಗಿ ತಿಳಿದುಕೊಂಡರೆ ಹೀಗೆ. ಇಲ್ಲದಿದ್ದರೆ ಪಕ್ಷೀಗಳನ್ನೇ ಓಡಿಸಬೇಕು ಅಂತ ಗೂಬೆ, ಗೂಬೆಯನ್ನು ಓಡಿಸಬೇಕಂತ ಪಕ್ಷಿಗಳಿಗೆ ಶುರವಾಗುತ್ತದೆ. ಜಗತ್ತು ಮಿಶ್ರಣ. ಪರಸ್ಪರ ವಿರುದ್ಧವಿರುವ ಸಂಗತಿಗಳಿಂದ ಈ ಜಗತ್ತು ಕೂಡಿಕೊಂಡಿದೆ. ಆದ್ದರಿಂದ ನೀತಿ ಏನೆಂದರೆ ಗುಣ ಗ್ರಹಣ ಇರಬೇಕು. ದೋಷ ದೃಷ್ಟಿ ಇಟ್ಟುಕೊಳ್ಳಬಾರದು. ಬರೀ ಕೆಟ್ಟದ್ದನ್ನು, ಕೆಟ್ಟದ್ದನ್ನು ಹುಡುಕುತ್ತಾ ಹೋದರೆ ಜೀವನದಲ್ಲಿ ಸಂತೋಷಪಡುವುದು ಹೇಗೆ?. ಎಲ್ಲದರಲ್ಲೂ ದೋಷಗಳು ಸಿಕ್ಕೇ ಸಿಗುತ್ತವೆ. ನಾವು ದುರ್ಬೀನು ಹಾಕಿ ನೋಡುವುದಾದರೆ ದೋಷಗಳೆ ದೋಷಗಳು. ಅದಕ್ಕಾಗಿ ಎಷ್ಟು ದೂರದಿಂದ ನೋಡಬೇಕೋ ಅಷ್ಟು ದೂರದಿಂದ ನೋಡಬೇಕು.




ಒಬ್ಬ ದೊಡ್ಡ ಕಲೆಗಾರ ಒಂದು ಸುಂದರ ಚಿತ್ರ ಬರೆದಿದ್ದಾನೆ. ಅದನ್ನು ಒಬ್ಬ ಹತ್ತಿರ ಹೋಗಿ ನೋಡುವುದಕ್ಕೆ ಶುರು ಮಾಡಿದನು. ಸೌಂದರ್ಯ ಕಾಣಲಿಲ್ಲ ಬರಿ ಬಣ್ಣ, ಗೆರೆ ಕಾಣುತ್ತಿತ್ತು. ಆಗ ಕಲೆಗಾರ ಹೇಳಿದ ಇಲ್ಲಿ ನಿಂತು ನೋಡಬೇಡ, ಅಷ್ಟು ದೂರದಿಂದ ನೋಡು ಅಂದನು. ಇಲ್ಲಿ ನಿಂತು ನೋಡಿದರೆ ನಿನಗೆ ಏನು ಗೊತ್ತಾಗೋದಿಲ್ಲ, ದೂರದಿಂದ ನೋಡಿದರೆ ಸೌಂದರ್ಯ ಕಾಣುತ್ತದೆ. ಜಗತ್ತನ್ನು ಸ್ವಲ್ಪ ದೂರದಿಂದ ನೋಡಬೇಕು. ಎಲ್ಲವೂ ಚಂದ ಕಾಣಿಸುತ್ತದೆ. ಹೇಗೆ ನಿಂತು ನೋಡಬೇಕು ಹಾಗೆ ನಿಂತು ನೋಡಬೇಕು. ನಮ್ಮ ಬದುಕು ಚೆಂದ ಆಗಬೇಕಾದರೆ ದೂರದಿಂದ ನೋಡಬೇಕು.

ಒಬ್ಬ ಪಾಪಿ ಮನುಷ್ಯ ಒಂದು ಸುಂದರ ತೋಟ ಮಾಡಿದ್ದನು. ಅದುವರೆಗೂ ಒಂದು ಒಳ್ಳೆಯ ಕೆಲಸ ಮಾಡಿರಲಿಲ್ಲ. ಈಗ ತೋಟ ಮಾಡಿ ಒಂದು ನಾಮಫಲಕ ಹಾಕಿದ್ದ. ಇದು ನಿಮ್ಮ ತೋಟ. ನಾವು ಬಹುತೇಕ ಕಡೆ ನೋಡುವುದು ಅಪ್ಪಣೆ ಇಲ್ಲದೆ ಪ್ರವೇಶವಿಲ್ಲ. ಪ್ರವೇಶ ನಿಷೇಧಿಸಲಾಗಿದೆ ಅನ್ನುವ ನಾಮಫಲಕ. ನಿಮ್ಮ ತೋಟ ಅಂದರೆ ಕಾಳಜಿ ಇರಬೇಕು. ತೋಟ ನಿಮ್ಮದೇ ಆಗಿರುವುದರಿಂದ ಒಳಗೆ ಬನ್ನಿ ಬಂದ ಮೇಲೆ ತೋಟದ ಬಗ್ಗೆ ಕಾಳಜಿ ಇರಲಿ. ಹಾದಿಯಲ್ಲಿ ಹೋಗುವ ಕೆಲವರು ಈ ಪಾಪಿ ತೋಟಕ್ಕೆ ನಾವೇ ಹೋಗಬೇಕೆಂದು ನೇರವಾಗಿ ಹೋದರು. ಇನ್ನು ಕೆಲವರು ತೋಟದ ಸೌಂದರ್ಯ ನೋಡಿ ಒಳ ಹೋಗಿ ಸಂತೋಷಪಟ್ಟರು. ಆ ಪಾಪಿ ಮನುಷ್ಯನಿಗೆ ಧನ್ಯವಾದ ಹೇಳಿದರು. ಯಾರು ಪಾಪಿ ಅಂತ ಬೈದು ನೇರವಾಗಿ ಹೋದವರು ಅನುಭವಿಸಲಿಲ್ಲ. ಯಾರು ಸೌಂದರ್ಯ ಕಂಡರೊ ಅವರು ಆತನ ಪಾಪವನ್ನು ಗಮನಿಸಲಿಲ್ಲ. ಬೈದುಕೊಳ್ಳುತ್ತಾ ಹೋದವರು ಮುಂದಿನ ಊರಿನಲ್ಲಿ ಹೇಳಿದರು. ಏನು ಪಾಪಿ ಮನುಷ್ಯ ಮಾಡಬಾರದು ಮಾಡಿ, ಅನ್ಯಾಯವಾಗಿ ಗಳಿಸಿ, ಜೈಲಿನಲ್ಲಿದ್ದು ಬಂದು, ಈಗ ತೋಟ ಮಾಡಿದ್ದಾನೆ. ಆ ಪಾಪಿ ತೋಟಕ್ಕೆ ಹೋಗುವುದೇನು?. ಅಂದರು. ಅಲ್ಲೂ ಕೂಡ ಬೈಯಲು ಶುರು ಮಾಡಿದರು. ಸೌಂದರ್ಯ ನೋಡಿದವರು ಆ ಊರಿಗೆ ಹೋಗಿ ಹೇಳಿದರು ಎಂತಹ ತೋಟ ಮಾಡಿದ್ದಾನೆ ಮನುಷ್ಯ!. ಮನುಷ್ಯ ಹಾಗೆ ತೋಟ ಮಾಡಬೇಕು ಅಂದರು. ಅವರು ಹಿಂದಿನದನ್ನು ಗಮನಿಸಲಿಲ್ಲ. ಇಲ್ಲಿಯವರೆಗೆ ಏನಾದರೂ ಮಾಡಿರಲಿ ನಮಗೇನು ಈಗ ಚೆಂದಾಗಿ ಮಾಡಿದ್ದಾನಲ್ಲ ಅಂದರು.

ನಾವು ಗುಣ ಗ್ರಹಣ ಕಲಿತರೆ ಜಗತ್ತು ಅದ್ಭುತವಾಗುತ್ತದೆ. ಹೀಗೆ ತಪ್ಪು ಹುಡುಕಿದರೆ ಬದುಕುವುದು ಹೇಗೆ?. ಜಗತ್ತಿನಲ್ಲಿ ಅದು ಇದು ತಲೆಗೆ ಹಾಕಿಕೊಳ್ಳುವುದನ್ನು ಬಿಟ್ಟು ಒಳ್ಳೆಯದನ್ನು ಹಾಕಿಕೊಳ್ಳಬೇಕು. ಗುಲಾಬಿ ಗಿಡದಲ್ಲಿ ಮುಳ್ಳು ಇರುತ್ತದೆ. ಮುಳ್ಳು ಕಡೆ ನೋಡುತ್ತಾ ಇದ್ದರೆ ಮುಳ್ಳು ತಲೆ ತುಂಬುತ್ತದೆ. ಮುಳ್ಳು ಇರಲಿ ನಾವು ಹೂವಿನ ಕಡೆ ನೋಡಬೇಕು. ಹಾಗೆ ಜನರಲ್ಲಿ ಸಣ್ಣ ಪುಟ್ಟ ದೋಷಗಳು ಇರುತ್ತವೆ. ಒಳ್ಳೆಯದರ ಕಡೆ ನೋಡುವುದನ್ನು ಕಲಿತರೆ ನಮ್ಮ ಜೀವನ ಚಂದ ಆಗುತ್ತದೆ. ಅಲ್ಲವೇ?

**– ಎಂ.ಪಿ. ಜ್ಞಾನೇಶ್,** ಮಂಗಳೂರು

# ಇನ್ನೂ ಸಾಕಷ್ಟು ಇದೆ!

ಚಕ್ಕುಲಿ, ನಿಪ್ಪಟ್ಟು, ಕೋಡುಬಳೆ, ಸಂಡಿಗೆಗಳೇ, ಕಡುಬು, ಹೋಳಿಗೆ, ಕಜ್ಜಾಯ, ಕರ್ಜಿಕಾಯಿಗಳೇ, ಬೆಣ್ಣೆ, ತುಪ್ಪ, ಹಾಲು, ಮೊಸರುಗಳೇ, ಮುದ್ದೆ, ರೊಟ್ಟಿ, ಚಪಾತಿ, ಪೀಜಾ, ಬರ್ಗರ್‌ಗಳೇ, ಚಿಕನ್, ಮಟನ್, ಫಿಶ್, ಪೋರ್ಕ್, ಭೀಫ್‌ಗಳೇ, ಸೀರೆ, ಲಂಗ, ಬುರ್ಖಾ, ಜೀನ್ಸ್, ಚೂಡಿದಾರ್‌ಗಳೇ, ಪ್ಯಾಂಟ್, ಷರ್ಟ್, ಪಂಚೆ, ಲುಂಗಿ, ಪೈಜಾಮಾಗಳೇ, ಹರಿಶಿನ, ಕುಂಕುಮ, ವಿಭೂತಿ, ಧೂಪ, ಪರ್ ಫ್ಯೂಮ್‌ಗಳೇ, ರೋಜಾ, ಮಲ್ಲಿಗೆ, ಸಂಪಿಗೆ, ಸೇವಂತಿಗೆ, ಕಾಕಡಾಗಳೇ, ಒಂದು ಜಡೆ, ಎರಡು ಜಡೆ, ಬಾಬ್ ಕಟ್, ಹೇರ್ ಕಟ್‌ಗಳೇ, ಗೌಡ, ಲಿಂಗಾಯತ, ದಲಿತ, ಬ್ರಾಹ್ಮಣ, ಕುರುಬ, ಹಿಂದುಳಿದ ವರ್ಗಗಳೇ, ಶಿಯಾ, ಸುನ್ನಿ, ಕ್ಯಾಥೋಲಿಕ್, ಪ್ರಾಟೆಸ್ಟೆಂಟ್, ತೇರವಾದ, ಮಹಾಯಾನ, ದಿಗಂಬರ, ಶ್ವೇತಂಬರ, ಅಕಾಲಿ, ಖಾಲ್ಸಾ, ಪಾರ್ಸಿ, ಯಹೂದಿಗಳೇ, ಕರಿಯ, ಬಿಳಿಯ, ಕೆಂಚ, ಗೋದಿ ಮೈ ಬಣ್ಣಗಳೇ, ಶಿವ, ಜೀಸಸ್, ಪೈಗಂಬರ್, ಗುರುನಾನಕ್, ಬುದ್ದ, ಮಹಾವೀರರುಗಳೇ, ರಾಮ, ಇಮ್ರಾನ್, ಜೇಕಬ್, ಸರ್ದಾರ್, ಪಠಾಣ್, ಠಾಕೂರ್‌ಗಳೇ, ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು, ಸಂಸ್ಕೃತಗಳೇ, ಕಣ್ಣು, ಕಿವಿ, ಮೂಗು, ಬಾಯಿ, ಕಿಡ್ನಿ, ಹೃದಯಗಳೇ, ಬಿಪಿ, ಶುಗರ್, ಕ್ಯಾನ್ಸರ್, ಏಡ್ಸ್, ಕೊರೋನಾ ವೈರಸ್‌ಗಳೇ, ಡಾಕ್ಟರ್, ಆಕ್ಟರ್, ಬೆಗ್ಗರ್, ಮಿನಿಸ್ಟರ್, ರಾಬರ್ಸಗಳೇ, ಅಪ್ಪ, ಅಮ್ಮ, ಅಣ್ಣ, ತಮ್ಮ, ತಂಗಿ, ಬಂಧುಗಳೇ,....



ಪ್ರಕೃತಿಯಲ್ಲಿ ಎಲ್ಲಾ ಒಂದೇ ಕಣ್ರಯ್ಯಾ, ಇಲ್ಲಿ ಯಾವುದೂ ಸೃಷ್ಟಿಸಲು ಸಾಧ್ಯವಿಲ್ರಯ್ಯ, ಯಾವುದೂ ನಾಶ ಮಾಡಲು ಸಾಧ್ಯವಿಲ್ರಯ್ಯ, ರೂಪ, ಆಕಾರ, ಗುಣಗಳು ಮಾತ್ರ ಬೇರೆ ಬೇರೆಯಾಗಿರುತ್ತದ್ರಯ್ಯ, ತಾರತಮ್ಯ ಎಲ್ಲಾ ನಿಮ್ಮ ಭ್ರಮೆಯಯ್ಯ, ಇಷ್ಟು ಸರಳ ವಿಷಯ ಅರ್ಥವಾಗಲು ಸಹಸ್ರಾರು ವರ್ಷ ಬೇಕೇನ್ರಯ್ಯ, ಆದರೂ ನಾವು ಹೇಳಿಕೊಳ್ಳುತ್ತೇವೆ, ಮಾನವ ಮುಂದುವರಿದ ನಾಗರೀಕ ಸಮಾಜದ, ಅತ್ಯಂತ ಬುದ್ದಿವಂತ ಪ್ರಾಣಿಯೆಂದು, ಇದು ನಿಜವೇ ? ನನಗೇಕೊ ಅನುಮಾನ.!! ನಿಮಗೆ ?

ಎಲ್ಲೋ ಎಡವುತ್ತಿದ್ದೇವೆಯೇ ನಾವು? ಬಹುಶಃ, ಯಾವುದೋ ಸಿದ್ಧಾಂತಗಳಿಗೆ ದಾಸರಾಗುತ್ತಿದ್ದೇವೆಯೇ? ಅಥವಾ ಬದಲಾವಣೆಗಳನ್ನು ತಪ್ಪಾಗಿ ಗ್ರಹಿಸುತ್ತಿದ್ದೇವೆಯೇ? ಅಥವಾ ತಾಂತ್ರಿಕ ಪ್ರಗತಿಯಿಂದ ಗೊಂದಲಕ್ಕೊಳಗಾಗುತ್ತಿದ್ದೇವೆಯೇ? ಅಥವಾ ಬದುಕಿನ ಅರ್ಥವೇ ಬದಲಾಗುತ್ತಿದೆಯೇ?

ಅಥವಾ ನಾವೇ ಭ್ರಮೆಗೊಳಗಾಗುತ್ತಿದ್ದೇವೆಯೇ? ಅಥವಾ ಅಭಿವೃದ್ಧಿ ಎಂದರೆ ಏನೆಂದೇ ತಿಳಿಯುತ್ತಿಲ್ಲವೇ? ಅಥವಾ ಎಲ್ಲೋ ಕಳೆದುಹೋದ ಅನುಭವವಾಗುತ್ತಿದೆಯೇ? ಅಥವಾ, ನಿಜಕ್ಕೂ ಒಳ್ಳೆಯ ಮಾರ್ಗದಲ್ಲಿ ಸಾಗುತ್ತಿದ್ದೇವೆಯೇ? ಅಥವಾ ಇದೇ ಬದುಕಿನ ಸಹಜ ಕ್ರಮವೇ? ಅಥವಾ ಎಲ್ಲಾ ಕಾಲಘಟ್ಟಗಳಲ್ಲೂ ಈ ತಳಮಳ ಇದ್ದದ್ದೆಯೇ?

ಅಥವಾ ಸತ್ಯದ ಹುಡುಕಾಟವೇ ಅಂತಿಮ ಧ್ಯೇಯವೇ? ಅಥವಾ, ಇದೆಲ್ಲವನ್ನು ಮೀರಿದ ಇನ್ನೇನಾದರೂ ಇದೆಯೇ? ಕಾಡುತ್ತಲೇ ಇರುವ ಗೊಂದಲದ ಕಾಡಿನಲಿ, ಅಲೆಯುತ್ತಲೇ ಇರುವ ಮನದ ಸಾಗರದಲಿ, ಉತ್ತರ ಹುಡುಕಿಕೊಳ್ಳಲು ಪ್ರಯತ್ನಿಸಿದರೆ, ಬದುಕು ಒಂದಷ್ಟು ಸಹನೀಯವಾಗಬಹುದು, ಜೀವನಮಟ್ಟ ಸುಧಾರಿಸಬಹುದು, ಕ್ರಿಯಾತ್ಮಕ ಸಾಧನೆಗಳು ಸಾಧ್ಯವಾಗಬಹುದು, ಆ ದಿನಗಳ ನಿರೀಕ್ಷೆಯಲ್ಲಿ....

**– ವಿವೇಕಾನಂದ. ಎಚ್. ಕೆ.,** ಬೆಂಗಳೂರು

# ಡಿಪಿಆರ್‌ಗೆ ಒಳಪಟ್ಟಿರುವ ಕೆರೆಗಳಿಗೆ ನೀರು ತುಂಬಿಸಿ

## ಮತಿಘಟ್ಟ ಸಮಾಲೋಚನಾ ಸಭೆಯಲ್ಲಿ ರೈತರ ಒತ್ತಾಯ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹಿರೀಸಾವೆ-ಜುಟ್ಟನಹಳ್ಳಿ ಏತನೀರಾವರಿ ಯೋಜನೆಯಡಿ ಡಿಪಿಆರ್‌ಗೆ ಒಳಪಟ್ಟಿರುವ ಕೆರೆಗಳಿಗೆ ನೀರು ತುಂಬಿಸದೆ ನಂತರದಲ್ಲಿ ಒಳಪಟ್ಟ ಸಣ್ಣಪುಟ್ಟ ಕೆರೆ- ಕಟ್ಟೆಗಳಿಗೆ ನೀರು ಹರಿಸುತ್ತಿರುವುದನ್ನು ವಿರೋಧಿಸಿ ತಾಲ್ಲೂಕಿನ ಮತಿಘಟ್ಟ ಗ್ರಾಮ ಪಂಚಾಯಿತಿ ಆವರಣದಲ್ಲಿ ರೈತರು ಮಂಗಳವಾರ ಪ್ರತಿಭಟನೆ ಮಾದರಿಯಲ್ಲಿ ಸಮಾಲೋಚನಾ ಸಭೆ ನಡೆಸಿದರು.

ರೈತ ಮುಖಂಡ ನಾಗರಾಜು ಮಾತನಾಡಿ, ನಾವು ರೈತರೆಲ್ಲರೂ ಒಂದೇ. ಎಲ್ಲರಿಗೂ ನೀರು ಅಗತ್ಯವಿದೆ. ಏತ ನೀರಾವರಿ ಯೋಜನೆಯಡಿ ಎಡದಂಡೆ ನಾಲೆಯ ಮೂಲಕ ಕೆರೆ-ಕಟ್ಟೆಗಳಿಗೆ ನೀರು ಹರಿಸುತ್ತಿರುವುದು ಸಂತಸದ ವಿಚಾರವಾಗಿದೆ. ಆದರೆ ಡಿಪಿಆರ್ ಮೂಲಕ ಯೋಜನೆ ರೂಪಿಸಿದ ಕೆರೆಗಳಿಗೆ ಪ್ರಥಮವಾಗಿ ಆದ್ಯತೆ ನೀಡದೆ ರಾಜಕೀಯ ಪ್ರೇರಿತರಾಗಿರುವ ಅಧಿಕಾರಿಗಳು, ಡಿಪಿಆರ್ ನಂತರದಲ್ಲಿ ಪಟ್ಟಿಗೆ ಸೇರಿದ ಸಣ್ಣಪುಟ್ಟ ಕೆರೆಕಟ್ಟೆಗಳಿಗೆ ನೀರು ತುಂಬಿಸಲು ಮುಂದಾಗಿರುವುದು ಸರಿಯಲ್ಲ ಎಂದು ಆರೋಪಿಸಿದರು.

ಹಿರೀಸಾವೆ ಭಾಗದ ರೈತ ಮುಖಂಡರ 42 ವರ್ಷಗಳ ಹೋರಾಟದ ಫಲವಾಗಿ ಯೋಜನೆ ರೂಪುಗೊಂಡು ಕಳೆದ ಎರಡು ವರ್ಷಗಳಿಂದ ಹಿರೀಸಾವೆ ಹಾಗೂ ಜುಟ್ಟನಹಳ್ಳಿ ವ್ಯಾಪ್ತಿಯ ಕೆರೆಗಳಿಗೆ ನೀರು ಹರಿಸಲಾಗುತ್ತಿದೆ. ಹಿಂದಿನ ವರ್ಷ ಮಳೆ ಆಶ್ರಯದಲ್ಲಿ ಕೆರೆಗಳು ತುಂಬಿದ್ದವು. ಆದರೆ, ಈ ಬಾರಿ ಪೂರ್ವ ಮುಂಗಾರಿನಿಂದಲೂ ಮಳೆ ಇಲ್ಲದೆ ಬರ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಸರ್ಕಾರದ ಆದೇಶದಂತೆ ಕಳೆದ 15 ದಿನಗಳಿಂದ ಏತ ನೀರಾವರಿ ಮೂಲಕ ನೀರೆತ್ತಿ ಕೆರೆಗಳಿಗೆ ತುಂಬಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಆದರೆ, ಯೋಜನೆಗೆ ಡಿಪಿಆರ್ ಮೂಲಕ ಸೇರ್ಪಡೆಗೊಂಡಿರುವ ಕೆರೆಗಳಿಗೆ ನೀರು ಹರಿಸದೆ ನಂತರದಲ್ಲಿ ಸೇರ್ಪಡೆಗೊಂಡ ಕೆರೆಗಳಿಗೆ ತುಂಬಿಸಲಾಗುತ್ತಿದೆ. ಇದರಲ್ಲಿ ಅಧಿಕಾರಿಗಳ ಲೋಪದೋಷ ಹಾಗೂ ರಾಜಕೀಯ ಪ್ರೇರಿತವು ಎದ್ದು ಕಾಣುತ್ತಿದೆ ಎಂದು ದೂರಿದರು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಬಿ.ಎನ್.ಮಂಜುನಾಥ್ ಮಾತನಾಡಿ, ಕೆರೆಗಳಿಗೆ ನೀರು ಹರಿಸುತ್ತಿರುವುದು ಒಳ್ಳೆಯ ವಿಚಾರ. ಆದರೆ ರೈತ ರೈತರ ನಡುವೆ ಒಡಕು ಮೂಡಿಸುವುದು ಸರಿಯಲ್ಲ. ಈ ಭಾಗದ ಎಲ್ಲಾ ರೈತರಿಗೂ ನೀರು ಅಗತ್ಯ. ಅದನ್ನು ನ್ಯಾಯ ಸಮ್ಮತವಾಗಿ ಹಂಚಿಕೆ ಮಾಡಿ ಕೆರೆಗಳಿಗೆ ನೀರು ತುಂಬಿಸುವ ಕೆಲಸವಾಗಬೇಕು. ಆದರೆ ಅಧಿಕಾರಿಗಳು ರಾಜಕೀಯ ಪ್ರೇರಿತರಾಗಿರುವಂತೆ ಕಂಡುಬರುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅಧಿಕಾರಿಗಳ ನಿರ್ಲಕ್ಷ ಹಾಗೂ ಜನಪ್ರತಿನಿಧಿಗಳ ದುರಾಡಳಿತದ ಪರಿಣಾಮದಿಂದ ರೈತರ ಒಗ್ಗಟ್ಟಿನಲ್ಲಿ ಬಿರುಕು ಮೂಡಬಾರದು. ಆಯಾ ವ್ಯಾಪ್ತಿಯ ನೀರಿನ ಪಾಲನ್ನು ನ್ಯಾಯ ಸಮ್ಮತವಾಗಿ ಹಂಚಿಕೆ ಮಾಡುವುದು ಒಳ್ಳೆಯದು. ನಮ್ಮ ಪಾಲಿನ ನೀರನ್ನು ನಮಗೆ ಕೊಡಿ. ಈ ನಂತರವಾದರೂ ಎಚ್ಚೆತ್ತುಕೊಂಡು ಗಮನಹರಿಸದಿದ್ದರೆ ರೈತರೆಲ್ಲರೂ ರಸ್ತೆಗಿಳಿದು ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ರೈತ ಮುಖಂಡ ನಿಂಗೇಗೌಡ ಮಾತನಾಡಿ, ಡಿಪಿಆರ್‌ನಲ್ಲಿ ಮತಿಘಟ್ಟ, ಆಯರಹಳ್ಳಿ ಹಾಗೂ ಮದನೆ ಸೇರಿದಂತೆ ಭಾಗದ ಮೂಲ ಚಿತ್ರಣವನ್ನೇ ತಿರುಚಲಾಗಿದೆ. ತೂಬುಗಳ ವ್ಯವಸ್ಥೆ ಸರಿಯಿಲ್ಲ. ಅದರಲ್ಲಿಯೂ ನೀರು ಬಿಡುವ ವಿಷಯದಲ್ಲಿ ಅಧಿಕಾರಿಗಳ ಇಂತಹ ಧೋರಣೆ ವಿಚಾರ ಸರಿಯಲ್ಲ. ಈ ಭಾಗದ 3 ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಿಗೆ ನೀರಿನ ಹಂಚಿಕೆ ವಿಚಾರದಲ್ಲಿ ಮೋಸ' ವಾಗುತ್ತಿದೆ ಎಂದರು.

ಮತಿಘಟ್ಟ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಪ್ರಕಾಶ್, ದಲಿತಪರ ಸಂಘಟನೆಗಳ ಮುಖಂಡ ಮತಿಘಟ್ಟ ರಂಗಸ್ವಾಮಿ, ರೈತ ಮುಖಂಡರಾದ ರಘು, ಶಾಮಿಲ್ ರಘು, ಪಾಪಣ್ಣ, ಅಣ್ಣಪ್ಪ, ಪೂಮುಡಿಹಳ್ಳಿ ರವಿಕುಮಾರ್, ಹೊನ್ನೇನಹಳ್ಳಿ ಶಶಿಕುಮಾರ್, ಹೊನ್ನ ಶೆಟ್ಟಿಹಳ್ಳಿ ಮಂಜೇಗೌಡ, ರಾಶಿಕ್‌ಗೌಡ, ಬ್ಯಾಂಗಲ್ಸ್ ಮಹೇಶ್, ಸತೀಶ್, ಮಂಜುನಾಥ್ ಮೌರ್ಯ, ಶೇಖರ, ರಾಮಸ್ವಾಮಿ, ಕುಮಾರ್, ವೆಂಕಟೇಶ್, ರಾಮೇಗೌಡ ಇನ್ನಿತರರು ಪಾಲ್ಗೊಂಡಿದ್ದರು.



### ಹಿರೀಸಾವೆಯಲ್ಲಿಂದು ಪ್ರತಿಭಟನೆ

ಡಿಪಿಆರ್ ಯೋಜನೆಗೆ ಸೇರಿರುವ ಕೆರೆಕಟ್ಟೆಗಳಿಗೆ ನೀರು ತುಂಬಿಸುವಲ್ಲಿ ಆದ್ಯತೆ ನೀಡದೆ ತಮಗಿಷ್ಟ ಬಂದಂತೆ, ನಂತರದಲ್ಲಿ ಸೇರ್ಪಡೆಗೊಂಡಿರುವ ಕೆರೆಕಟ್ಟೆಗಳಿಗೆ ನೀರು ತುಂಬಿಸುವಲ್ಲಿ ಮುಂದಾಗಿರುವುದನ್ನು ವಿರೋಧಿಸಿ ಅಧಿಕಾರಿಗಳು ಹಾಗೂ ಗಮನ ಹರಿಸದ ಜನಪ್ರತಿನಿಧಿಗಳ ವಿರುದ್ಧ ಹಿರೀಸಾವೆ, ಮತಿಘಟ್ಟ ಹಾಗೂ ಜುಟ್ಟನಹಳ್ಳಿ ಸೇರಿದಂತೆ 3 ಗ್ರಾಮ ಪಂಚಾಯಿತಿ ವ್ಯಾಪ್ತಿಯ ರೈತರು ಸೇರಿ ಸೆ.9 ಬುಧವಾರ ಬೆಳಗ್ಗೆ 10.30 ಕ್ಕೆ ಹಿರೀಸಾವೆ ಗ್ರಾಮದ ಶ್ರೀಕಂಠಯ್ಯ ವೃತ್ತದಲ್ಲಿ ರಾಷ್ಟ್ರೀಯ ಹೆದ್ದಾರಿ 75 ರಲ್ಲಿ ರಸ್ತೆ ತಡೆದು ಪ್ರತಿಭಟನೆ ಮಾಡುವುದಾಗಿ ರೈತ ಮುಖಂಡರು ಹಾಗೂ ವ್ಯಾಪ್ತಿಯ ರೈತರು ತಿಳಿಸಿದ್ದಾರೆ.

# ಕಾಡೆಮ್ಮೆ ದಾಳಿ: ರೈತನಿಗೆ ಪರಿಹಾರ ಚೆಕ್ ವಿತರಣೆ

## ಚಿಕಿತ್ಸಾ ವೆಚ್ಚವನ್ನು ಅರಣ್ಯ ಇಲಾಖೆಯೇ ಭರಿಸಲಿ: ಶಾಸಕ ಸಿಮೆಂಟ್ ಮಂಜು

• ಪ್ರಜೋದಯ ವರದಿ



**ಸಕಲೇಶಪುರ:** ವನ್ಯಜೀವಿ ಹಾಗೂ ಮಾನವ ಸಂಘರ್ಷದಲ್ಲಿ ಗಾಯಗೊಂಡವರ ಚಿಕಿತ್ಸಾ ವೆಚ್ಚವನ್ನು ಅರಣ್ಯ ಇಲಾಖೆಯೇ ಭರಿಸಬೇಕು ಎಂದು ಶಾಸಕ ಸಿಮೆಂಟ್ ಮಂಜು ಒತ್ತಾಯಿಸಿದರು.

ಹಾಸನದ ಕರ್ಣ ಆಸ್ಪತ್ರೆಗೆ ಭೇಟಿ ನೀಡಿ ಕಾಡೆಮ್ಮೆ ದಾಳಿಯಿಂದ ಗಾಯಗೊಂಡ ತಾಲ್ಲೂಕಿನ ಹೆತ್ತೂರು ಹೋಬಳಿಯ ಹಿಳಿಗಲು ಗ್ರಾಮದ ರೈತ ಜಯಪ್ರಕಾಶ್ (42) ಅವರ ಆರೋಗ್ಯ ವಿಚಾರಿಸಿದ ಅವರು, ಅರಣ್ಯ ಇಲಾಖೆಯಿಂದ ಮಂಜೂರಾದ ಪರಿಹಾರ ಧನದ ಚೆಕ್‌ನ್ನು ಗಾಯಾಳುವಿಗೆ ಹಸ್ತಾಂತರಿಸಿದರು.

ಹೊಂಗಡಹಳ್ಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಿಳಿಗಲು ಗ್ರಾಮದ ಜಯಪ್ರಕಾಶ್ ಅವರು ಶನಿವಾರ ಪತ್ನಿಯೊಂದಿಗೆ ಜಮೀನಿನ ಕೆಲಸ ಮುಗಿಸಿಕೊಂಡು ಮನೆಗೆ ಹಿಂದಿರುಗುತ್ತಿದ್ದ ವೇಳೆ ಏಕಾಏಕಿ ಕಾಡೆಮ್ಮೆ ದಾಳಿ ನಡೆಸಿತ್ತು. ದಾಳಿಯಿಂದ ಅವರ ಕೈ-ಕಾಲುಗಳಿಗೆ ಗಂಭೀರ ಗಾಯಗಳಾಗಿದ್ದು, ಬಲ ಭುಜದ ಮೂಳೆ ಮುರಿದಿದೆ. ಹೆತ್ತೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಹಾಸನ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಘಟನೆ ನಡೆದ ದಿನವೇ ಆಸ್ಪತ್ರೆಗೆ ಭೇಟಿ ನೀಡಿದ್ದ ಶಾಸಕ ಸಿಮೆಂಟ್ ಮಂಜು, ವೈದ್ಯರಿಂದ ಚಿಕಿತ್ಸೆಯ ಕುರಿತು ಮಾಹಿತಿ ಪಡೆದು ಗಾಯಾಳುವಿನ ಆರೋಗ್ಯ ವಿಚಾರಿಸಿದ್ದರು. ಚಿಕಿತ್ಸೆಗೆ ತಗಲುವ ಸಂಪೂರ್ಣ ವೆಚ್ಚವನ್ನು ಅರಣ್ಯ ಇಲಾಖೆಯಿಂದ ಭರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದರು. ಸೋಮವಾರ ಮತ್ತೆ ಆಸ್ಪತ್ರೆಗೆ ಭೇಟಿ ನೀಡಿ ಜಯಪ್ರಕಾಶ್ ಹಾಗೂ ಅವರ ಕುಟುಂಬದವರೊಂದಿಗೆ ಮಾತನಾಡಿ ಧೈರ್ಯ ತುಂಬಿದರು.

ಮಲೆನಾಡು ಭಾಗದಲ್ಲಿ ಕಾಡಾನೆಗಳ ಜತೆಗೆ ಕಾಡೆಮ್ಮೆ ಸೇರಿದಂತೆ ಇತರ ವನ್ಯಜೀವಿಗಳ ಹಾವಳಿಯೂ ರೈತರಲ್ಲಿ ಆತಂಕ ಮೂಡಿಸುತ್ತಿದೆ. ರೈತರು ಜಮೀನುಗಳಿಗೆ ತೆರಳಲು ಭಯ ಪಡುವ ಪರಿಸ್ಥಿತಿ ನಿರ್ಮಾಣವಾಗದಂತೆ ವನ್ಯಜೀವಿಗಳ ಚಲನವಲನದ ಮೇಲೆ ನಿಗಾ ವಹಿಸಿ, ಇಂತಹ ಘಟನೆಗಳು ಮರುಕಳಿಸದಂತೆ ಪರಿಣಾಮಕಾರಿ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸಿಮೆಂಟ್ ಮಂಜು ಅವರು ಸೂಚಿಸಿದರು.

ಈ ಸಂದರ್ಭದಲ್ಲಿ ಯಸಳೂರು ವಲಯ ಅರಣ್ಯಾಧಿಕಾರಿ ರೇವಣ್ಣ ಸಿದ್ದಯ್ಯ ಹಿರೇಮಠ್ ಸೇರಿದಂತೆ ಅರಣ್ಯ ಇಲಾಖೆ ಸಿಬ್ಬಂದಿ ಇನ್ನಿತರರು ಉಪಸ್ಥಿತರಿದ್ದರು.

# ವಿದ್ಯುತ್ ಕಡಿತ: ವಿದ್ಯಾರ್ಥಿಗಳಿಗೆ ಅನಾನುಕೂಲ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಗ್ರಾಮೀಣ ಭಾಗದ ಮನೆಗಳಿಗೆ ನಿರಂತರವಾಗಿ ವಿದ್ಯುತ್ ಒದಗಿಸುವ ಉದ್ದೇಶದ ನಿರಂತರ ವಿದ್ಯುತ್ ಯೋಜನೆ ಅಡಿಯಲ್ಲಿ ವಿದ್ಯುತ್ ಕಡಿತ ಆಗುತ್ತಿರುವುದರಿಂದ ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ತೀವ್ರ ಅನಾನುಕೂಲವಾಗುತ್ತಿದೆಂದು ಶಾಸಕ ಸಿ.ಎನ್. ಬಾಲಕೃಷ್ಣ ಅವರು ಹೇಳಿದರು.



ಕಳೆದ ಕೆಲದಿನಗಳಿಂದ ಗ್ರಾಮೀಣ ಪ್ರದೇಶದಲ್ಲಿ ನಿರಂತರ ವಿದ್ಯುತ್ ಯೋಜನೆಯಡಿ ಸೌಲಭ್ಯನೀಡುವ ವಿದ್ಯುತ್ ಪೂರೈಕೆಯಲ್ಲಿ ಶೇ.50 ಕಡಿತ ಮಾಡಲಾಗಿದೆ. ಸಂಜೆ 6 ರಿಂದ-10ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗುವುದರಿಂದ ವಿದ್ಯಾರ್ಥಿಗಳಿಗೆ, ಕೃಷಿಚಟುವಟಿಕೆ ಮತ್ತು ಹೈನುಗಾರಿಕೆಗೆ ತೊಂದರೆಯಾಗುತ್ತಿದೆಂದು ಭಾನುವಾರ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

220 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ 100 ಎಂಪಿಎ ವಿದ್ಯುತ್ ಪರಿವರ್ತಕ ಸುಟ್ಟು ಹೋಗಿದ್ದು, ಕೂಡಲೇ ಬದಲಿ ವಿದ್ಯುತ್ ಪರಿವರ್ತಕವನ್ನು ನೀಡಬೇಕು. ಎರಡು 100 ಎಂವಿಎ ವಿದ್ಯುತ್ ಪರಿವರ್ತಕಗಳಲ್ಲಿ ಒಂದು ಸುಟ್ಟುಹೋಗಿದೆ. ಶೀಘ್ರ ವಿದ್ಯುತ್ ಪರಿವರ್ತಕ ಅಳವಡಿಸದಿದ್ದರೆ ಜನರಿಗೆ ತೊಂದರೆಯಾಗುತ್ತದೆಂದು ತಿಳಿಸಿದರು.

ನಿತ್ಯ 3 ಫೇಸ್ ವಿದ್ಯುತ್ ಸರಬರಾಜು ಮಾಡಬೇಕು. ಅದರಲ್ಲಿ ಒಂದು ಗಂಟೆ ಕಡಿತ ಮಾಡಲಾಗುತ್ತಿದೆ ಎಂದರು. ಇದರ ಬಗ್ಗೆ ಗಮನ ಸೆಳೆಯಲು ಈ ತಿಂಗಳು 21-23ರ ವರೆಗೆ ನಡೆಯುವ ಅಧಿವೇಶನದಲ್ಲಿ ಚರ್ಚಿಸಲಾಗು ವುದು. ಅದೇ ರೀತಿ ತಾಲ್ಲೂಕಿಗೆ 140 ಮೆಗಾವಾಟ್ ವಿದ್ಯುತ್ ನೀಡಲಾಗುತ್ತಿತ್ತು. ಅದರಲ್ಲಿ ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡಲಾಗಿದೆ ಎಂದರು.

ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಮತ್ತು ಇಲಾಖೆಯ ಉನ್ನತ ಅಧಿಕಾರಿಗಳು ಬೇಗ ಕೆಪಿಟಿಸಿಎಲ್ ಅಧಿಕಾರಿಗಳ ಜತೆ ಸಭೆ ಮಾಡಿ ಸಮಸ್ಯೆ ಸರಿಪಡಿಸಬೇಕು. ಇಲ್ಲದಿದ್ದರೆ ಸೆಸ್ಕ್ ಕಚೇರಿ ಮುಂದೆ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕ.ಸಾ.ಪ. ತಾಲ್ಲೂಕು ಅಧ್ಯಕ್ಷ ಹಡೇನ ಹಳ್ಳಿ ಲೋಕೇಶ್, ಟಿಎಪಿಸಿಎಂಎಸ್‌ನ ಅಧ್ಯಕ್ಷ ಎಚ್.ಆರ್.ವೆಂಕಟೇಶ ಮೂರ್ತಿ, ಪುರಸಭಾ ಮಾಜಿ ಅಧ್ಯಕ್ಷ ಕೋಟೆ ಮೋಹನ್, ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಗಣೇಶ್ ಇದ್ದರು.

# ಸೆ.11 ರಂದು ಬ್ಯಾಂಕ್ ಉದ್ಯೋಗಿಗಳ ಮುಷ್ಕರ

• ಪ್ರಜೋದಯ ವರದಿ

**ನವದೆಹಲಿ:** ವಾರದಲ್ಲಿ 5 ದಿನಗಳ ಕೆಲಸದ ಅವಧಿ ಜಾರಿಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬ್ಯಾಂಕ್ ಉದ್ಯೋಗಿಗಳ ಒಕ್ಕೂಟಗಳು ಸೆಪ್ಟೆಂಬರ್ 11 ರಂದು ದೇಶಾದ್ಯಂತ ಮುಷ್ಕರಕ್ಕೆ ಕರೆ ನೀಡಿವೆ.

ಬೇಡಿಕೆ ಈಡೇರದಿದ್ದಲ್ಲಿ ಮುಂಬರುವ ಅಕ್ಟೋಬರ್ ತಿಂಗಳಲ್ಲಿ 2 ದಿನಗಳ ಸುದೀರ್ಘ ಮುಷ್ಕರ ನಡೆಸುವುದಾಗಿ ಯುನೈಟೆಡ್ ಫೋರಂ ಆಫ್ ಬ್ಯಾಂಕ್ ಯೂನಿಯನ್ಸ್ ಎಚ್ಚರಿಕೆ ನೀಡಿದೆ. ಈ ಮುಷ್ಕರದಿಂದಾಗಿ ದೇಶಾದ್ಯಂತ ಸಾರ್ವಜನಿಕ ಹಾಗೂ ಖಾಸಗಿ ವಲಯದ ಬ್ಯಾಂಕಿಂಗ್ ಸೇವೆಗಳಲ್ಲಿ ಭಾರಿ ವ್ಯತ್ಯಯ ಉಂಟಾಗುವ ಸಾಧ್ಯತೆಯಿದೆ.

ಅದಕ್ಕೂ ಫಲ ಸಿಕ್ಕದಿದ್ದರೆ ಅ. 26 ರಂದು ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸುವುದಾಗಿ ಈ ಸಂಘಟನೆಗಳು ಬೆದರಿಸಿವೆ. ಆನ್‌ಲೈನ್ ನೆಟ್ ಬ್ಯಾಂಕಿಂಗ್ ಮತ್ತು ಯುಪಿಐ ಸೇವೆಗಳು ಯಥಾ ರೀತಿಯಲ್ಲಿ ಕಾರ್ಯ ನಿರ್ವಹಿಸಲಿವೆ.

# ಕಸಾಯಿಖಾನೆಗೆ ಸಾಗಿಸುತ್ತಿದ್ದ 19 ಹಸುಗಳ ರಕ್ಷಣೆ

## ಮಾರನಹಳ್ಳಿ ಚೆಕ್‌ಪೋಸ್ಟ್ ಬಳಿ ಪತ್ತೆ | ಸ್ಥಳಕ್ಕೆ ಶಾಸಕ ಸಿಮೆಂಟ್ ಮಂಜು ಭೇಟಿ

• ಪ್ರಜೋದಯ ವರದಿ

**ಸಕಲೇಶಪುರ:** ಅಕ್ರಮವಾಗಿ ಕಸಾಯಿಖಾನೆಗೆ ಸಾಗಿಸುತ್ತಿದ್ದ 19 ಹಸುಗಳನ್ನು ಸಾಗಿಸಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಹಿಂದೂ ಹಿತ ರಕ್ಷಣಾ ಸಮಿತಿ ಕಾರ್ಯಕರ್ತರು ಪೊಲೀಸರ ಸಹಕಾರದೊಂದಿಗೆ ವಾಹನ ವನ್ನು ತಡೆದು ಹಸುಗಳನ್ನು ರಕ್ಷಿಸಿದ್ದಾರೆ.

ಸೋಮವಾರ ರಾತ್ರಿ 19 ಹಸುಗಳನ್ನು ಸಾಗಿಸಲಾಗುತ್ತಿದೆ ಎಂಬ ಮಾಹಿತಿ ಹಿನ್ನಲೆ ಹಿಂದೂ ಸಂಘಟನೆಗಳ ಮುಖಂಡರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಅದರಂತೆ ಮಾರನಹಳ್ಳಿ ಚೆಕ್‌ಪೋಸ್ಟ್ ಬಳಿ ಕೆಎ-13-ಎಎ-6873 ನೋಂದಣಿ ಸಂಖ್ಯೆಯ ವಾಹನವನ್ನು ಪೊಲೀಸರು ತಡೆದು ಪರಿಶೀಲನೆ ನಡೆಸಿದ್ದಾರೆ. ಈ ವೇಳೆ ವಾಹನದಲ್ಲಿದ್ದ 19 ಹಸುಗಳನ್ನು ವಶಕ್ಕೆ ಪಡೆದಿದ್ದಾರೆ.

ಮಾಹಿತಿ ತಿಳಿಯುತ್ತಿದ್ದಂತೆ ಶಾಸಕ ಸಿಮೆಂಟ್ ಮಂಜು ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.



ಈ ವೇಳೆ ಮಾತನಾಡಿದ ಅವರು, ಹಸುಗಳನ್ನು ಸಾಗಣೆ ಮಾಡುವ ವೇಳೆ ಅತ್ಯಂತ ಕ್ರೂರವಾಗಿ ನಡೆಸಿಕೊಳ್ಳಲಾಗಿದೆ. ಕೆಲವು ಹಸುಗಳ ಕಣ್ಣುಗಳಿಗೆ ಮೆಣಸಿನಕಾಯಿ ಹಾಕಿರುವುದು ಕಂಡುಬಂದಿದೆ. ಪ್ರಾಣಿಗಳೊಂದಿಗೆ ಇಂತಹ ಕ್ರೂರ ವರ್ತನೆ ಖಂಡನೀಯ ಎಂದರು.

ಹಿಂದು ಪರ ಸಂಘಟನೆ ಮುಖಂಡ ರಘು ಸಕಲೇಶಪುರ ಅವರು ಮಾತನಾಡಿ, ಪೊಲೀಸರು ಹಸುಗಳನ್ನು ಸದ್ಯ ಸುರಕ್ಷಿತ ಸ್ಥಳದಲ್ಲಿ ಇರಿಸಿದ್ದು, ಅವುಗಳನ್ನು ಗೋಶಾಲೆಗೆ ಕಳುಹಿಸಿ ಸಂರಕ್ಷಿಸುವ ಕ್ರಮ ಕೈಗೊಳ್ಳಬೇಕು. ಯಾವುದೇ ಪ್ರಾಣಿಗಳ ಮೇಲೆ ಈ ರೀತಿಯ ಹಿಂಸೆ ನಡೆಸಬಾರದು. ಹಸುಗಳು ಚಲಿಸದಂತೆ ಹಾಗು ಮಂಪರ್‌ನಲ್ಲಿರುವಂತೆ ಮಾಡಲು ಅವುಗಳ ಕಣ್ಣುಗಳಿಗೆ ಮೆಣಸಿನಕಾಯಿ ಹಾಕಲಾಗಿದೆ ಎಂಬ ಆರೋಪ ಕೇಳಿಬಂದಿದ್ದು, ಈ ಬಗ್ಗೆ ಪೊಲೀಸರು ತನಿಖೆ ನಡೆಸಬೇಕು. ಪ್ರಾಣಿಗಳೊಂದಿಗೆ ಕ್ರೂರವಾಗಿ ವರ್ತಿಸಿರುವುದು ಸಾಬೀತಾದಲ್ಲಿ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಂಡು ಸೂಕ್ತ ಶಿಕ್ಷೆ ನೀಡಬೇಕು ಎಂದು ಒತ್ತಾಯಿಸಿದರು.

ಹಾಸನ ಹಾಗು ಸಕಲೇಶಪುರ ಭಾಗದಲ್ಲಿ ಅಕ್ರಮ ಜಾನುವಾರು ಸಾಗಾಟ ನಡೆಯುತ್ತಿದೆ ಎಂಬ ಆರೋಪಗಳು ಕೇಳಿಬರುತ್ತಿರುವ ಹಿನ್ನಲೆ ಪೊಲೀಸರು ಹೆಚ್ಚಿನ ನಿಗಾ ವಹಿಸಬೇಕು. ಜಾನುವಾರುಗಳು ಎಲ್ಲಿಂದ ಎಲ್ಲಿಗೆ ಸಾಗಿಸಲಾಗುತ್ತಿತ್ತು, ಸಾಗಾಟದ ಹಿಂದೆ ಯಾರಿದ್ದಾರೆ ಹಾಗು ಇದರ ಉದ್ದೇಶವೇನು ಎಂಬುದರ ಕುರಿತು ಸಮಗ್ರ ತನಿಖೆ ನಡೆಸಬೇಕು. ರಾತ್ರಿ ವೇಳೆ ಗಸ್ತು ವ್ಯವಸ್ಥೆಯನ್ನು ಬಲಪಡಿಸುವುದರ ಜೊತೆಗೆ ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಿನ ತಪಾಸಣೆ ನಡೆಸಬೇಕು ಎಂದು ಅವರು ಒತ್ತಾಯಿಸಿದರು.

# ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹಾಸನದ ಕಾರೆಕೆರೆ ಕೃಷಿ ಮಹಾ ವಿದ್ಯಾಲಯದ ಬಿಎಸ್ಸಿ ಅಂತಿಮ ವರ್ಷದ ವಿದ್ಯಾರ್ಥಿಗಳು ತಾಲ್ಲೂಕಿನ ಚೌಡೇನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ ಮಣ್ಣಿನ ಸಾವಯವ ಕಾರ್ಬನ್ ಹೆಚ್ಚಿಸುವ ಅಭಿಯಾನ ನಡೆಯಿತು. ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ. ಪ್ರದೀಪ್ ಅವರು ರೈತರಿಗೆ ಸಾವಯವ ಕಾರ್ಬನ್‌ನ ಮಹತ್ವ ಮತ್ತು ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು.

ಬೆಳೆ ಅವಶೇಷಗಳನ್ನು ಸುಡುವುದು, ಅತಿಯಾದ ಉಳುಮೆ ಮತ್ತು ಸಾವಯವ ಪದಾರ್ಥಗಳ ಕೊರತೆಯಿಂದ ಕಾರ್ಬನ್ ಕಡಿಮೆಯಾಗುತ್ತದೆ. ಬೆಳೆ ಅವಶೇಷಗಳನ್ನು ಸುಡದೆ ಮಣ್ಣಿಗೆ ಸೇರಿಸುವುದು, ಕಾಂಪೋಸ್ಟ್, ಕೊಟ್ಟಿಗೆ ಗೊಬ್ಬರ ಮತ್ತು ಹಸಿರು ಗೊಬ್ಬರ ಬಳಸುವುದು, ಬೆಳೆ ಪರಿವರ್ತನೆ ಹಾಗು ಕನಿಷ್ಟ ಉಳುಮೆ ಪದ್ಧತಿ ಅಳವಡಿಸುವುದರಿಂದ ಕಾರ್ಬನ್ ಪ್ರಮಾಣ ಹೆಚ್ಚಿಸಬಹುದೆಂದು ಡಾ. ಪ್ರದೀಪ್ ಅವರು ತಿಳಿಸಿದರು.

ಮಣ್ಣಿನಲ್ಲಿ ಕಾರ್ಬನ್ ಹೆಚ್ಚಿಸುವುದರಿಂದ ತೇವಾಂಶ ಮತ್ತು ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ವೃದ್ಧಿಯಾಗುತ್ತದೆ. ಮಣ್ಣಿನ ಸೂಕ್ಷ್ಮಜೀವಿಗಳ ಚಟುವಟಿಕೆ ಉತ್ತಮಗೊಂಡು ಇಳುವರಿ ವೃದ್ಧಿಯಾಗುತ್ತದೆ. ಮಣ್ಣಿನ ಆರೋಗ್ಯ ದೀರ್ಘ ಕಾಲದವರೆಗೆ ಸುಸ್ಥಿರವಾಗಿರುತ್ತದೆ ಎಂದು ತಿಳಿಸಿದರು.

# ಕಾಡಿನ ಜ್ಞಾನ ನಾಡಿಗೆ ಪರಿಚಯಿಸಿದ ಸಂತ ತೇಜಸ್ವಿ

• ಪ್ರಜೋದಯ ವರದಿ




## 'ಪೂರ್ಣಚಂದ್ರ ತೇಜಸ್ವಿ ಜನ್ಮದಿನಾಚರಣೆ'

**ಹಾಸನ:** ಸುಲಭವಾಗಿ ಸಿಗಬಹುದಾಗಿದ್ದ ಅಧ್ಯಾಪಕ ವೃತ್ತಿಯನ್ನು ತ್ಯಜಿಸಿ, ಮಲೆನಾಡಿನ ಕಾಡಂಚಿನಲ್ಲಿ ಕಷ್ಟದ ಬದುಕನ್ನು ಎದುರಿಸುತ್ತಾ ಅಲ್ಲಿನ ಸಾಮಾನ್ಯ ಜನರೊಂದಿಗೆ ಬೆರೆತು, ಅಲ್ಲಿ ತಾವು ಕಂಡುಕೊಂಡ ಅಪೂರ್ವ ಜ್ಞಾನವನ್ನು ಅಕ್ಷರದ ಮೂಲಕ ನಾಡಿಗೆ ಹಂಚಿದ ಅಪರೂಪದ ಸಂತ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಎಂದು ಲೇಖಕ ಗೊರೂರು ಶಿವೇಶ್ ಅವರು ಅಭಿಪ್ರಾಯಪಟ್ಟರು.

ನಗರದ ಬೆಸ್ಟ್ ಕಾಲೇಜಿನಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ (ಧಾರವಾಡ), ಚಿತ್ಕಲಾ ಫೌಂಡೇಶನ್ (ಹಾಸನ) ಹಾಗೂ ರೂರಲ್ ಎಜುಕೇಷನಲ್ ಟ್ರಸ್ಟ್ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಪೂರ್ಣಚಂದ್ರ ತೇಜಸ್ವಿ ಜನ್ಮದಿನಾಚರಣೆ' ಸಮಾರಂಭದಲ್ಲಿ ಮಾತನಾಡಿದ ಅವರು, ತೇಜಸ್ವಿಯವರ ಕರ್ವಾಲೊ, ಪರಿಸರದ ಕಥೆ ಮುಂತಾದ ಕೃತಿಗಳಲ್ಲಿ ಪರಿಚಯಿಸಿದ ಜನಸಾಮಾನ್ಯರಾದ ಮಾರ, ಪ್ಯಾರ, ಎಂಗ್ಟ, ಮಂದಣ್ಣ ಮುಂತಾದ ಪಾತ್ರಗಳು ಕನ್ನಡ ಸಾಹಿತ್ಯ ಲೋಕದಲ್ಲಿ ಚಿರಸ್ಥಾಯಿಯಾಗಿ ನಿಂತಿವೆ. ಕೇವಲ ರಂಜನೆ ಮಾತ್ರವಲ್ಲದೆ ಓದುಗರಿಗೆ ಗಂಭೀರ ಪರಿಸರ ಪ್ರಜ್ಞೆಯನ್ನು ಮೂಡಿಸುತ್ತವೆ. ಕಳೆದ ಐದು ದಶಕಗಳಿಂದ ಮೂರು ತಲೆಮಾರುಗಳನ್ನು ನಿರಂತರವಾಗಿ ಪ್ರೇರೇಪಿಸಿದ ಶಕ್ತಿ ಅವರ ಬರಹಕ್ಕಿದೆ ಎಂದು ಅವರು ಸ್ಮರಿಸಿದರು.

ಜಿಲ್ಲಾ ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ. ಬಿ.ಎಸ್. ರವಿಕುಮಾರ್ ಮಾತನಾಡಿ, ಜೀವ ಜಗತ್ತು ಕೇವಲ ಮನುಷ್ಯನಿಂದಷ್ಟೇ ಅಲ್ಲ; ಸಸ್ಯ, ಪ್ರಾಣಿ, ಪಕ್ಷಿ ಮತ್ತು ಸೂಕ್ಷ್ಮಾಣು ಜೀವಿಗಳ ಪರಸ್ಪರ ಅವಲಂಬನೆಯಿಂದ ಸೃಷ್ಟಿಯಾಗಿದೆ. ಮನುಷ್ಯ ತನ್ನ ಅಹಂ ತ್ಯಜಿಸಿ ಮಾನವ ಕೇಂದ್ರಿತ ಆಲೋಚನೆಯಿಂದ ಪ್ರಕೃತಿ ಕೇಂದ್ರಿತ ಜೀವನ ಶೈಲಿಯನ್ನು ರೂಢಿಸಿಕೊಳ್ಳಬೇಕಿದೆ ಎಂದರು.

ಅಂತಾರಾಷ್ಟ್ರೀಯ ಚಿತ್ರಕಲಾವಿದ ಬಿ.ಎಸ್.ದೇಸಾಯಿ, ತೇಜಸ್ವಿಯವರ ಬಹುಮುಖ ಆಸಕ್ತಿಗಳಲ್ಲಿ ಪಕ್ಷಿ ವೀಕ್ಷಣೆ ಹಾಗೂ ಛಾಯಾಗ್ರಹಣ ಅತ್ಯಂತ ವಿಶಿಷ್ಟವಾದದ್ದು. ಸಾವಿರಾರು ಮೈಲಿ ಕ್ರಮಿಸಿ ವಲಸೆ ಬರುವ ಪುಟ್ಟ ಹಕ್ಕಿಗಳ ಜೀವನ ಚಲನೆಯನ್ನು ಅವುಗಳ ಸ್ವಾತಂತ್ರ್ಯಕ್ಕೆ ಧಕ್ಕೆಯಾಗದಂತೆ ಸೂಕ್ಷ್ಮವಾಗಿ ದಾಖಲಿಸಿ, ಕನ್ನಡ ನಾಡಿಗೆ ಪಕ್ಷಿ ಜಗತ್ತನ್ನು ಪರಿಚಯಿಸಿದ ಹೆಗ್ಗಳಿಕೆ ಅವರದ್ದು ಎಂದು ತಿಳಿಸಿದರು.

ರೂರಲ್ ಎಜುಕೇಷನಲ್ ಟ್ರಸ್ಟ್‌ನ ಖಜಾಂಚಿ ಈಶ್ವರಪ್ಪ ಮಾತನಾಡಿ, ವಿದ್ಯಾರ್ಥಿಗಳು ಮೊಬೈಲ್ ಗೀಳಿನಿಂದ ಹೊರಬಂದು ದಿನಪತ್ರಿಕೆ ಹಾಗೂ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ನಿರಂತರ ಅಧ್ಯಯನವು ಸಮಕಾಲೀನ ಜ್ಞಾನವನ್ನು ವೃದ್ಧಿಸಿ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಆತ್ಮವಿಶ್ವಾಸದಿಂದ ಎದುರಿಸಲು ನೆರವಾಗುತ್ತದೆ ಎಂದು ಸಲಹೆ ನೀಡಿದರು.

ಸಾಹಿತಿ ಗೊರೂರು ಅನಂತರಾಜು ಮಾತನಾಡಿ, ವಿದ್ಯಾರ್ಥಿಗಳು ಶೈಕ್ಷಣಿಕ ಓದಿನ ಜೊತೆಗೆ ಸಾಹಿತ್ಯಾಸಕ್ತಿ ಬೆಳೆಸಿಕೊಳ್ಳಬೇಕು. ತಮ್ಮಲ್ಲಿರುವ ಸೃಜನಶೀಲತೆಯನ್ನು ಅಭಿವ್ಯಕ್ತಿಸಲು ಸಿಗುವ ವೇದಿಕೆಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಗಾಯಕ ಜಿ.ಆರ್.ಶ್ರೀಕಾಂತ್ ಕನ್ನಡ ಗೀತೆಗಳು ಹಾಗೂ ಕನಕದಾಸರ ಕೀರ್ತನೆಗಳನ್ನು ಸುಶ್ರಾವ್ಯವಾಗಿ ಹಾಡಿ ಸಭಿಕರ ಮನಸೂರೆಗೊಂಡರು. ಸಮಾರಂಭದಲ್ಲಿ ಪ್ರಾಂಶುಪಾಲ ಕೆ.ಸಿ.ವಿನಯ್, ಉಪನ್ಯಾಸಕರು, ವಿದ್ಯಾರ್ಥಿಗಳು ಹಾಗೂ ಸಾಹಿತ್ಯಾಸಕ್ತರು ಉಪಸ್ಥಿತರಿದ್ದರು.

# ದೈಹಿಕ-ಮಾನಸಿಕ ಸದೃಢತೆಗೆ ಕ್ರೀಡೆ ಸಹಕಾರಿ




• ಪ್ರಜೋದಯ ವರದಿ

**ಹಾಸನ:** ಮಾನಸಿಕ ಹಾಗು ದೈಹಿಕ ಸದೃಢತೆಗಾಗಿವಿದ್ಯಾರ್ಥಿಗಳು ಕ್ರೀಡಾಕೂಟದಲ್ಲಿ ತಪ್ಪದೇ ಪಾಲ್ಗೊಳ್ಳಬೇಕೆಂದು ಎಪಿಜೆ ಕಾಲೇಜಿನ ನಿರ್ದೇಶಕ ಡಿ.ಮುರುಳಿ ಅವರು ತಿಳಿಸಿದರು.

ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ತಾಲ್ಲೂಕು ಮಟ್ಟದ ಎ ವಲಯ ವಿಭಾಗದ ಪದವಿಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಮಾತನಾಡಿದ ಅವರು, ಕ್ರೀಡಾಕೂಟಗಳು ಪರಸ್ಪರ ಹೊಂದಾಣಿಕೆ, ಸ್ನೇಹ ಭಾವ, ಆತ್ಮ ವಿಶ್ವಾಸ ಮೂಡಿಸಲು ಸಹಕಾರಿಯಾಗುತ್ತವೆ. ವಿದ್ಯಾರ್ಥಿಗಳು ವಿವಿಧ ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದರು.

**ವಿದ್ಯಾರ್ಥಿಗಳಿಗೆ ಬಹುಮಾನ**

ಕ್ರೀಡಾಕೂಟದಲ್ಲಿ ಎ.ಪಿ.ಜೆ. ಕಾಲೇಜು ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಅಥ್ಲೆಟಿಕ್ಸ್ ವಿಭಾಗದಲ್ಲಿ 3000 ಮೀ. ಓಟದ ವಿಭಾಗದಲ್ಲಿ ಚಿನ್ಮಯಿ ಪ್ರಥಮ, 400 ಮೀ. ಓಟದಲ್ಲಿ ನಿಖಿತಾ ಪ್ರಥಮ, 800 ಮೀ. ಓಟದ ಸ್ಪರ್ಧೆಯಲ್ಲಿ ನಿಶಾ ಪ್ರಥಮ, ಬಾಲಕಿಯರ ರಿಲೇ, ಎತ್ತರ ಜಿಗಿತ, ತ್ರಿವಿಧ ಜಿಗಿತ ಸ್ಪರ್ಧೆಯಲ್ಲಿ ಪ್ರಕೃತ್, ಸುರಕ್ಷಾ ಮತ್ತು ಚಿನ್ಮಯಿ ಸ್ಥಾನ ಪಡೆದಿದ್ದಾರೆ. ಹ್ಯಾಮರ್ ಮತ್ತು ಬರ್ಜಿ ಎಸೆತದಲ್ಲಿ ಯಶ್ವಂತ್, ಕಿಶೋರ್, ಸ್ಪಂದನ್ ದ್ವಿತೀಯ ಸ್ಥಾನ, ಗುಂಪು ಆಟಗಳಾದ ಖೋ- ಖೋದಲ್ಲಿ ಬಾಲಕಿಯರ ತಂಡ ಪ್ರಥಮ, ಬಾಲಕರ ಟೆನ್ನಿಕೇಟ್ ನಲ್ಲಿ ದ್ವಿತೀಯ, ಬಾಲಕಿ ಯರು ಶಟಲ್ ಬ್ಯಾಡ್ಮಿಂಟನ್‌ನಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ವಿಜೇತ ವಿದ್ಯಾರ್ಥಿಗಳಿಗೆ ಕಾಲೇಜು ಆಡಳಿತ ಮಂಡಳಿ ಅಭಿನಂದಿಸಿದೆ.

# ವ್ಯಕ್ತಿಯ ಮೇಲೆ ಬಿಯರ್ ಬಾಟಲಿಯಿಂದ ಹಲ್ಲೆ

## ಗೊರೂರು ಠಾಣೆಯಲ್ಲಿ ಪ್ರಕರಣ ದಾಖಲು



• ಪ್ರಜೋದಯ ವರದಿ

**ಹಾಸನ:** ಹೋಟೆಲ್ ಮುಂದೆ ಕುಳಿತು ಮದ್ಯಪಾನ ಮಾಡುತ್ತಿದ್ದ ವ್ಯಕ್ತಿಯ ಮೇಲೆ ಹೋಟೆಲ್ ಮಾಲೀಕ ಬಿಯರ್ ಬಾಟಲಿಯಿಂದ ಹಲ್ಲೆ ಮಾಡಿ ಗಂಭೀರವಾಗಿ ಗಾಯಗೊಳಿಸಿರುವ ಘಟನೆ ತಾಲ್ಲೂಕಿನ ಗೊರೂರಿನಲ್ಲಿ ನಡೆದಿದೆ. ಕಾಂತರಾಜು ಹಲ್ಲೆಗೊಳಗಾದ ವ್ಯಕ್ತಿ. ಹೋಟೆಲ್ ಮಾಲೀಕ ಜಗದೀಶ್ ಹಲ್ಲೆ ನಡೆಸಿದ ಆರೋಪಿ.

ಗೊರೂರಿನಲ್ಲಿ ಬಾರ್ ಸಮೀಪವೇ ಜಗದೀಶ್ ಮಾಲೀಕತ್ವದ ಹೋಟೆಲ್ ಇದೆ. ಸೋಮವಾರ ರಾತ್ರಿ ಕಾಂತರಾಜು ಹಾಗು ಅವರ ಸ್ನೇಹಿತ ಹೋಟೆಲ್ ಮುಂದೆ ಕುಳಿತು ಮದ್ಯಪಾನ ಮಾಡುತ್ತಿದ್ದರು. ಇದನ್ನು ಪ್ರಶ್ನಿಸಿದ ವೇಳೆ ಹೋಟೆಲ್ ಮಾಲೀಕ ಜಗದೀಶ್ ಹಾಗು ಕಾಂತರಾಜು ನಡುವೆ ಮಾತಿನ ಚಕಮಕಿ ನಡೆದಿದೆ.

ಈ ವೇಳೆ ಜಗಳ ತಾರಕಕ್ಕೇರಿದ್ದು, ಕಾಂತರಾಜು ಹಾಗು ಅವರ ಸ್ನೇಹಿತ ಜಗದೀಶ್ ಮೇಲೆ ಕಲ್ಲಿನಿಂದ ಹಲ್ಲೆ ನಡೆಸಲು ಮುಂದಾಗಿದ್ದಾರೆ. ಇದರಿಂದ ಆಕ್ರೋಶಗೊಂಡ ಜಗದೀಶ್, ಕಾಂತರಾಜು ಮೇಲೆ ಹಲ್ಲೆ ನಡೆಸಿದ್ದು, ಬಿಯರ್ ಬಾಟಲಿಯಿಂದ ತಲೆಗೆ ಹೊಡೆದಿದ್ದಾರೆ.

ಹಲ್ಲೆಯಿಂದ ಕಾಂತರಾಜು ಗಂಭೀರವಾಗಿ ಗಾಯಗೊಂಡಿದ್ದು, ಅರಕಲಗೂಡು ತಾಲ್ಲೂಕು ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಹಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಗೊರೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸಂತ ಜೋಸೆಫರ ಶಾಲೆಗೆ ಸಮಗ್ರ ಪ್ರಶಸ್ತಿ

• ಪ್ರಜೋದಯ ವರದಿ

**ಸಕಲೇಶಪುರ:** ಕಸಬಾ ಹೋಬಳಿ ಮಟ್ಟದ ಪ್ರೌಢಶಾಲಾ ಕ್ರೀಡಾಕೂಟದಲ್ಲಿ ಪಟ್ಟಣದ ಸಂತ ಜೋಸೆಫರ ಆಂಗ್ಲ ಮಾಧ್ಯಮ ಶಾಲೆ ಬಾಲಕರ ಹಾಗು ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್‌ಶಿಪ್ ಸೇರಿ ಸಮಗ್ರ ಪ್ರಶಸ್ತಿ ಪಡೆದುಕೊಂಡಿದೆ.



ಬಾಲಕರ ವಿಭಾಗದಲ್ಲಿ ಕೆ.ಕೆ.ಪ್ರಾರ್ಥನ್ 100 ಮೀ. ಓಟದಲ್ಲಿ ಪ್ರಥಮ, 200 ಮೀ.ನಲ್ಲಿ ದ್ವಿತೀಯ ಹಾಗೂ ಉದ್ದ ಜಿಗಿತದಲ್ಲಿ ತೃತೀಯ, ಹೆಚ್.ಡಿ. ಅಭಿಷೇಕ್ 400 ಮೀ. ಓಟ, 4X400 ಮೀ. ರಿಲೇ ಹಾಗು 4X00 ಮೀ. ರಿಲೇಯಲ್ಲಿ ಪ್ರಥಮ ಸ್ಥಾನ ಪಡೆದಿದ್ದು, ಗುಂಡು ಮತ್ತು ತಟ್ಟೆ ಎಸೆತದಲ್ಲಿ ತೃತೀಯ ಸ್ಥಾನ ಗಳಿಸಿದ್ದಾರೆ.

ಸೇವಂತ್ ಕುಮಾರ್ ಹಾಗು ಜೆ.ಎಸ್.ಮನ್ವಿತ್ 800 ಮೀ. ಓಟದಲ್ಲಿ ಪ್ರಥಮ ಹಾಗು ಉದ್ದ ಜಿಗಿತ ದಲ್ಲಿ ತೃತೀಯ, ಮನ್ವಿತ್ ತ್ರಿವಿಧ ಜಿಗಿತದಲ್ಲೂ ಪ್ರಥಮ, ಹೆಚ್.ಡಿ.ಅಮೃತ್ ಕುಮಾರ್ 4X400 ಮೀ. ರಿಲೇಯಲ್ಲಿ ಪ್ರಥಮ, ಧನುಷ್ 1500 ಮೀ. ಮತ್ತು ಮಹಮ್ಮದ್ ಹೂವೇಸ್ 3000 ಮೀ. ಓಟ ದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಬಾಲಕರ ವಾಲಿ ಬಾಲ್‌ನಲ್ಲಿ ಪ್ರಥಮ ಹಾಗು ಬಾಲ್ ಬ್ಯಾಡ್ಮಿಂಟನ್‌ನಲ್ಲಿ ದ್ವಿತೀಯ ಸ್ಥಾನ ಲಭಿಸಿದೆ.

ಬಾಲಕಿಯರ ವಿಭಾಗದಲ್ಲಿಯೂ ಶಾಲೆಯ ವಿದ್ಯಾರ್ಥಿನಿಯರು ಉತ್ತಮ ಸಾಧನೆ ಮಾಡಿದ್ದಾರೆ. ಎಸ್.ಎನ್.ಮಾನ್ಯ 400 ಮೀ. ಓಟ, ಉದ್ದ ಜಿಗಿತ ಹಾಗು ತ್ರಿವಿಧ ಜಿಗಿತ ಪ್ರಥಮ, ಎಸ್.ಎನ್.ಮನಿಷ 400 ಮೀ. ಓಟ ದ್ವಿತೀಯ, ಎತ್ತರ ಜಿಗಿತ ಮತ್ತು ತ್ರಿವಿಧ ಜಿಗಿತ ತೃತೀಯ, ಪೂರ್ವಿತಾ 1,500 ಮೀ. ಓಟದಲ್ಲಿ ಪ್ರಥಮ, ಸಾನಿಕ ಉಗಮ ತೃತೀಯ ಸ್ಥಾನ ಪಡೆದಿದ್ದಾರೆ.

ಬಿಪೀಶ ಜಾವೆಲಿನ್ ಎಸೆತ ಪ್ರಥಮ, ಲೇಖನ ಹ್ಯಾಮರ್ ಎಸೆತ ದ್ವಿತೀಯ, ಎಸ್.ವಿ.ಪ್ರಾಪ್ತಿ ಚಕ್ರ ಎಸೆತ ಪ್ರಥಮ ಹಾಗು ಶಾವಣ್ಯ ಚಕ್ರ ಎಸೆತ ದ್ವಿತೀಯ ಸ್ಥಾನ ಪಡೆದಿದ್ದಾರೆ. 4X400 ಮೀ. ರಿಲೇ ಪ್ರಥಮ ಹಾಗು 4X100 ಮೀ. ರಿಲೇ ದ್ವಿತೀಯ ಸ್ಥಾನ ಪಡೆದಿದ್ದು, ಥ್ರೋಬಾಲ್, ವಾಲಿಬಾಲ್ ಮತ್ತು ಬಾಲ್ ಬ್ಯಾಡ್ಮಿಂಟನ್‌ನಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ.

ಕ್ರೀಡಾಕೂಟದಲ್ಲಿ ಬಾಲಕರ ವೈಯಕ್ತಿಕ ಪ್ರಶಸ್ತಿ, ಬಾಲಕಿಯರ ವೈಯಕ್ತಿಕ ಪ್ರಶಸ್ತಿ, ಬಾಲಕರ ವಿಭಾಗದ ಚಾಂಪಿಯನ್, ಬಾಲಕಿಯರ ವಿಭಾಗದ ಚಾಂಪಿಯನ್ ಹಾಗು ಸಮಗ್ರ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳನ್ನು ಸಂತ ಜೋಸೆಫರ ಆಂಗ್ಲ ಮಾಧ್ಯಮ ಶಾಲೆ ತನ್ನದಾಗಿಸಿಕೊಂಡಿದೆ.

ವಿದ್ಯಾರ್ಥಿಗಳ ಸಾಧನೆಗೆ ಶಾಲೆಯ ಮುಖ್ಯೋ ಪಾಧ್ಯಾಯರಾದ ಸಿಸ್ಟರ್ ಐಡಾ ಡಿ. ಅಲ್ಮೇಡಾ, ಸಿಸ್ಟರ್ ಹೆಲೆನ್ ಪೆರೇರ, ದೈಹಿಕ ಶಿಕ್ಷಣ ಶಿಕ್ಷಕ ರಮೇಶ್ ಅವರು ಅಭಿನಂದಿಸಿದ್ದಾರೆ.

## ಇಂದು ಹೊ.ನ.ಪುರ ವ್ಯಾಪ್ತಿಯ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

**ಹೊಳೆನರಸೀಪುರ:** ನೋಡಲ್ ಕೇಂದ್ರ ವ್ಯಾಪ್ತಿಯಲ್ಲಿ ಸೆ.9 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ರ ವರೆಗೆ ಗಂಗೂರು, ಅಂಕನಹಳ್ಳಿ, ಸ್ವರೆಗಾರನಕೊಪ್ಪಲು, ಕಳ್ಳಿಕೊಪ್ಪಲು, ಸಂಕನಹಳ್ಳಿ, ಶಿವಪುರ, ಕಟ್ಟಹಳ್ಳಿ, ಅಪ್ಪಗೌಡನಹಳ್ಳಿ, ಚಿಕ್ಕಬ್ಯಾಗತವಳ್ಳಿ, ಪಾಳ್ಯ, ಮಾರಗೌಡನಹಳ್ಳಿ, ಶ್ರೀರಾಮದೇವರಕಟ್ಟೆ, ಹಳೇಕೋಟೆ, ಹರದನಹಳ್ಳಿ, ಕಿನ್ನರಹಳ್ಳಿ, ಶ್ರೀರಾಮನಗರ, ಕಡವಿನಕೋಟೆ, ಯಳ್ಳೇಶಪುರ ಚಿಕ್ಕನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್ ರವರ ಕಾರ್ಯಾಲಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ
ಕಛೇರಿ ದೂರವಾಣಿ: 08176-252749

ಟೆಂಡರ್ ಪ್ರಕಟಣೆ ಸಂಖ್ಯೆ: 16/2026-27 ದಿನಾಂಕ : 04-09-2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ ವ್ಯಾಪ್ತಿಯ ಚನ್ನರಾಯಪಟ್ಟಣ ತಾಲ್ಲೋಕಿಗೆ 2025-26ನೇ ಸಾಲಿನ ಪಿಎಂಶ್ರೀ ಯೋಜನೆಯಡಿ ಅನುಮೋದನೆಯಾಗಿರುವ ಚನ್ನರಾಯಪಟ್ಟಣ ತಾ: ಚನ್ನರಾಯಪಟ್ಟಣ ಪಿ.ಎಂ.ಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಟದ ಮೈದಾನ ನಿರ್ಮಾಣ ಕಾಮಗಾರಿ RDPR/2026-27/ OW/WORK_INDENT29135 ಟೆಂಡರ್ ಮೊತ್ತ ರೂ 4.22 ಲಕ್ಷಗಳಿಗೆ ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿಸಿರುವ ಅರ್ಹ ಗುತ್ತಿಗೆದಾರರಿಂದ ಸ್ಪರ್ಧಾತ್ಮಕ ಟೆಂಡರನ್ನು ಏಕಕಕ ಅಂತರ್ಜಾಲದಲ್ಲಿ ದಿನಾಂಕ: 21-09-2026ರ ಸಂಜೆ 5.00 ಘಂಟೆಯವರೆಗೆ ಟೆಂಡರ್‌ನ್ನು (EXCLUDING GST) ನಿಗಧಿತ ನಮೂನೆಗಳನ್ನು HTTPS://KPPP.KARNATAKA.GOV.IN/KPPP ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ: 21-09-2026ರ ಸಂಜೆ 5.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿನಾಂಕ 19-09-2026ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 23-09-2026 ರಂದು ಬೆಳಿಗ್ಗೆ 11.00 ಗಂಟೆಯ ನಂತರ ಗುತ್ತಿಗೆದಾರರ ಬಿಡ್ಡನ್ನು ತೆರೆಯಲಾಗುವುದು. ಕಾಮಗಾರಿಗಳ ವಿವರಗಳು KPPP ಅಂತರ್ಜಾಲದಲ್ಲಿ ಲಭ್ಯವಿರುತ್ತವೆ. ಕಾಮಗಾರಿಯನ್ನು ಪರಿಶಿಷ್ಟ ಜಾತಿಯ ಗುತ್ತಿಗೆದಾರರಿಗೆ ಮೀಸಲಿರಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಪ.ರಾಜ್.
ಇಂ.ವಿಭಾಗ, ಚನ್ನರಾಯಪಟ್ಟಣ.

ವಾಸಾಸಂಇ/ಹಿಸನಿ/ಹಾಸನ/479/ಕೆಎಸ್‌ಎಂಸಿಎ/2026-27

# 90 ಸಾವಿರ ವಿದ್ಯಾರ್ಥಿಗಳಿಗೆ ಉಚಿತ ಕೋಚಿಂಗ್

## ಸ್ಪರ್ಧಾತ್ಮಕ ಪರೀಕ್ಷೆಗೆ ಸರ್ಕಾರದಿಂದಲೇ ತರಬೇತಿ | 9 ಕೋ.ರೂ. ಅನುದಾನ

• ಪ್ರಜೋದಯ ವರದಿ

**ಬೆಂಗಳೂರು:** ಸರ್ಕಾರಿ ಉದ್ಯೋಗ ಪಡೆಯುವ ಕನಸು ಕಾಣುತ್ತಿರುವ ಕರ್ನಾಟಕದ ಸಾವಿರಾರು ಯುವ ಜನರಿಗೆ ಮಹತ್ವದ ಅವಕಾಶ ಕಲ್ಪಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಕಾಲೇಜು ಶಿಕ್ಷಣ ಇಲಾಖೆ ವತಿಯಿಂದ ಸುಮಾರು 9 ಕೋ.ರೂ. ವೆಚ್ಚದಲ್ಲಿ 90 ಸಾವಿರ ವಿದ್ಯಾರ್ಥಿಗಳಿಗೆ ಉಚಿತ ಆನ್‌ಲೈನ್ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ನೀಡುವ ಯೋಜನೆ ರೂಪಿಸಲಾಗಿದೆ. ಯೋಜನೆ ಶೀಘ್ರದಲ್ಲೇ ಜಾರಿಗೆ ಬರುವ ಸಾಧ್ಯತೆಯಿದ್ದು, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೂ ಗುಣಮಟ್ಟದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಸುಲಭವಾಗಿ ಲಭ್ಯವಾಗಲಿದೆ ಎಂಬ ನಿರೀಕ್ಷೆಯಿದೆ.

ಕರ್ನಾಟಕದ ನಿವಾಸಿಗಳಾಗಿರುವ ಅರ್ಹ ವಿದ್ಯಾರ್ಥಿಗಳು ಸೇವಾ ಸಿಂಧು ಪೋರ್ಟಲ್ ಮೂಲಕ ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ. ಒಬ್ಬ ವಿದ್ಯಾರ್ಥಿ ಒಂದೇ ಸಂದರ್ಭದಲ್ಲಿ ಗರಿಷ್ಠ ಮೂರು ಪರೀಕ್ಷೆಗಳಿಗೆ ತರಬೇತಿ ಆಯ್ಕೆ ಮಾಡಿಕೊಳ್ಳಲು ಅವಕಾಶವಿರಲಿದೆ.

ಸಹಾಯಕ ಪ್ರಾಧ್ಯಾಪಕ, ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ), ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ), ಗ್ರೂಪ್-ಸಿ, ಪೊಲೀಸ್ ಸಬ್‌ಇನ್‌ಸ್ಪೆಕ್ಟರ್, ಗ್ರಾಮ ಆಡಳಿತ




ಅಧಿಕಾರಿ (ವಿಎಒ), ಪೊಲೀಸ್ ಕಾನ್‌ಸ್ಟೆಬಲ್ ಸೇರಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ನೇಮಕಾತಿ ಪರೀಕ್ಷೆಗಳಿಗೆ ಅಗತ್ಯವಿರುವ ವಿಷಯಗಳನ್ನು ತರಬೇತಿ ವ್ಯಾಪ್ತಿಯಲ್ಲಿ ಒಳಗೊಳ್ಳುವ ಉದ್ದೇಶ ಹೊಂದಲಾಗಿದೆ.

ಸೇವಾ ಸಿಂಧು ಈಗಾಗಲೇ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸೇವೆಗಳನ್ನು ಒಂದೇ ಡಿಜಿಟಲ್ ವೇದಿಕೆಯಲ್ಲಿ ಒದಗಿಸುವ ಪ್ರಮುಖ ವ್ಯವಸ್ಥೆಯಾಗಿದ್ದು, ನೂರಾರು ಸರ್ಕಾರಿ ಸೇವೆಗಳು ಈ ವೇದಿಕೆಯೊಂದಿಗೆ ಸಂಯೋಜಿಸಲ್ಪಟ್ಟಿವೆ. ಆಯ್ಕೆಯಾಗುವ ತರಬೇತಿ ಸಂಸ್ಥೆಯು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ವಿಶೇಷ ವೆಬ್ ಪೋರ್ಟಲ್ ಹಾಗು ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಿ ನಿರ್ವಹಿಸಲಿದೆ.

**360 ಆನ್‌ಲೈನ್ ತರಗತಿಗಳು**

ಯೋಜನೆಯಡಿ ಸುಮಾರು 360 ಸಂವಾದಾತ್ಮಕ ಆನ್‌ಲೈನ್ ತರಬೇತಿ ಅವಧಿಗಳನ್ನು ನಡೆಸುವ ಉದ್ದೇಶವಿದೆ. ಪ್ರತಿ ತರಗತಿಯು ಸುಮಾರು 90 ರಿಂದ 120 ನಿಮಿಷಗಳ ಅವಧಿಯದ್ದಾಗಿರಲಿದೆ. ಪ್ರತಿ ಪರೀಕ್ಷೆಗೆ ಸಂಬಂಧಿಸಿ ತರಬೇತಿ ಕಾರ್ಯಕ್ರಮವನ್ನು ಗರಿಷ್ಠ 90 ದಿನಗಳಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಾಮಾನ್ಯವಾಗಿರುವ ಪಠ್ಯಕ್ರಮವನ್ನು ಸಮಗ್ರವಾಗಿ ಒಳಗೊಳ್ಳುವಂತೆ ತರಬೇತಿ ರೂಪಿಸಲಾಗುತ್ತಿದೆ. ಸಾಮಾನ್ಯ ಅಧ್ಯಯನ ವಿಭಾಗದಲ್ಲಿ ಪ್ರಾಚೀನ, ಮಧ್ಯಕಾಲೀನ ಹಾಗು ಆಧುನಿಕ ಇತಿಹಾಸ, ಕರ್ನಾಟಕದ ಇತಿಹಾಸ, ಭೌತಿಕ ಹಾಗು ಭಾರತೀಯ ಭೂಗೋಳ, ಕರ್ನಾಟಕದ ಭೂಗೋಳ, ಭಾರತೀಯ ಆರ್ಥಿಕತೆ ಮತ್ತು ಭಾರತೀಯ ರಾಜಕೀಯ ವ್ಯವಸ್ಥೆ ವಿಷಯಗಳಿಗೆ ಒತ್ತು ನೀಡಲಾಗುತ್ತದೆ.

ವಿಜ್ಞಾನ ಮತ್ತು ಪರಿಸರ ವಿಭಾಗದಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ವಿಜ್ಞಾನ-ತಂತ್ರಜ್ಞಾನ ಬೆಳವಣಿಗೆ, ಪರಿಸರ ವಿಜ್ಞಾನ ಹಾಗು ಪರಿಸರಶಾಸ್ತ್ರ ಒಳಗೊಂಡಿರಲಿದೆ. ಜೊತೆಗೆ ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್, ತಾರ್ಕಿಕ ಸಾಮರ್ಥ್ಯ, ಡೇಟಾ ಇಂಟರ್‌ಪ್ರಿಟೇಷನ್ ಮತ್ತು ಸಮಸ್ಯೆ ಪರಿಹಾರ ಸೇರಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಮುಖ ಕೌಶಲ್ಯಗಳ ಬಗ್ಗೆಯೂ ತರಬೇತಿ ನೀಡಲಾಗುತ್ತದೆ.

**ಒಬ್ಬ ವಿದ್ಯಾರ್ಥಿಗೆ 1,000 ರೂ.**

ಯೋಜನೆಯ ಅಂದಾಜಿನ ಪ್ರಕಾರ ಒಬ್ಬ ವಿದ್ಯಾರ್ಥಿಯ ತರಬೇತಿಗೆ ಸುಮಾರು 1,000 ರೂ. ವೆಚ್ಚವಾಗಲಿದೆ. 90 ಸಾವಿರ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದಲ್ಲಿ ಒಟ್ಟು ವೆಚ್ಚ ಸುಮಾರು 9 ಕೋ.ರೂ. ಆಗಲಿದೆ. ಆದರೆ ತರಬೇತಿ ಸಂಸ್ಥೆಗೆ ನಿಗದಿತ ಗುರಿ ಸಂಖ್ಯೆಯ ಆಧಾರದ ಮೇಲೆ ಮಾತ್ರ ಪಾವತಿ ಮಾಡುವುದಿಲ್ಲ. ವಾಸ್ತವವಾಗಿ ನೋಂದಣಿ ಮಾಡಿಕೊಂಡು ತರಬೇತಿಗೆ ಅರ್ಹತೆ ಪಡೆದ ವಿದ್ಯಾರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಪಾವತಿ ಮಾಡುವ ವ್ಯವಸ್ಥೆ ಇರಲಿದೆ.

ಒಂದು ವೇಳೆ 90 ಸಾವಿರದೊಳಗೆ ಮಾತ್ರ ನೋಂದಣಿ ನಡೆದರೆ, ಮುಂದಿನ ಬ್ಯಾಚ್‌ಗಳಲ್ಲಿ ಹೆಚ್ಚುವರಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತದೆ. ನೋಂದಣಿ ಸಂಖ್ಯೆ 90 ಸಾವಿರ ಮೀರಿದರೂ, ಹೆಚ್ಚುವರಿ ವಿದ್ಯಾರ್ಥಿಗಳಿಗೆ ಉಚಿತವಾಗಿ ತರಬೇತಿ ನೀಡಬೇಕೆಂಬ ಷರತ್ತನ್ನು ಯೋಜನೆಯಲ್ಲಿ ಸೇರಿಸಲಾಗಿದೆ.

ಈ ಯೋಜನೆಯ ಮೂಲಕ ಗ್ರಾಮೀಣ ಹಾಗು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೂ ದುಬಾರಿ ಕೋಚಿಂಗ್ ಕೇಂದ್ರಗಳ ಅವಲಂಬನೆಯಿಲ್ಲದೆ ಗುಣಮಟ್ಟದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ದೊರೆಯುವ ನಿರೀಕ್ಷೆಯಿದೆ.

## ಇಟಿಎಫ್ ಸಿಬ್ಬಂದಿಯನ್ನು ಅಟ್ಟಾಡಿಸಿದ ಒಂಟಿ ಸಲಗ

» ಮೊದಲನೇ ಪುಟದಿಂದ

ಕೆಲ ದಿನಗಳಿಂದ ತೊಳಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೆಳ್ಳೊಟ್ಟೆ, ತೊಳಲು, ಅನುಘಟ್ಟ ಹಾಗು ಕಣಗುಪ್ಪೆ ಗ್ರಾಮಗಳಲ್ಲಿ ನಿರಂತರ ವಾಗಿ ದಾಂಧಲೆ ನಡೆಸುತ್ತಿದೆ. ಕಾಡಾನೆಗಳ ಹಿಂಡಿನಿಂದಾಗಿ ರೈತರ ಜಮೀನುಗಳಿಗೆ ಭಾರಿ ಪ್ರಮಾಣದಲ್ಲಿ ಹಾನಿಯಾಗಿದ್ದು, ಕೈಗೆ ಬಂದಿದ್ದ ಬೆಳೆ ಕಾಡಾನೆಗಳ ಪಾಲಾಗಿದೆ.

ಕಾಡಾನೆಗಳನ್ನು ಕಾಡಿನತ್ತ ಓಡಿಸಲು ಇಟಿಎಫ್ ಸಿಬ್ಬಂದಿ ಪಟಾಕಿ ಸಿಡಿಸಿ ಹರಸಾಹಸ ಪಡುತ್ತಿದ್ದಾರೆ. ಪಟಾಕಿ ಸಿಡಿಸಿದರೂ ಕಾಡಾನೆಗಳು ಹೆಚ್ಚಿನ ದೂರಕ್ಕೆ ತೆರಳದೆ, ಜಮೀನುಗಳಲ್ಲೇ ಬೀಡು ಬಿಟ್ಟು ರೈತರ ಬೆಳೆಗಳನ್ನು ನಾಶಪಡಿಸುತ್ತಿವೆ. ಮರಿಗಳೊಂದಿಗೆ ಬಂದಿರುವ ಕಾಡಾನೆಗಳ ಹಿಂಡು ಕಂಡು ಗ್ರಾಮಸ್ಥರು ಹಾಗೂ ರೈತರು ಆತಂಕಕ್ಕೊಳಗಾಗಿದ್ದಾರೆ. ರಾತ್ರಿ ವೇಳೆ ಜಮೀನುಗಳಿಗೆ ತೆರಳಲು ರೈತರು ಭಯಪಡುವಂತಾಗಿದೆ. ನಿರಂತರ ಕಾಡಾನೆ ಹಾವಳಿಯಿಂದ ಬೇಸತ್ತಿರುವ ಬೇಲೂರು ಭಾಗದ ರೈತರು, ಬೆಳೆ ಹಾಗೂ ಜೀವ ರಕ್ಷಣೆಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ.

## ಜೈಲಿನಲ್ಲಿದ್ದ ಪ್ರಜ್ವಲ್ 2 ದಿನ ಪೊಲೀಸ್ ಕಸ್ಟಡಿಗೆ

• ಪ್ರಜೋದಯ ವರದಿ



**ಬೆಂಗಳೂರು:** ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದೊಳಗೆ ಮೊಬೈಲ್ ಫೋನ್ ಬಳಕೆ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣನನ್ನು ನ್ಯಾಯಾಲಯ ಎರಡು ದಿನ ಪೊಲೀಸ್ ಕಸ್ಟಡಿಗೆ ನೀಡಿದೆ.

ಜೈಲಿನೊಳಗೆ ಮೊಬೈಲ್ ಫೋನ್ ಬಳಕೆ ಆರೋಪದ ನಂತರ ಪ್ರಜ್ವಲ್ ರೇವಣ್ಣ ಮತ್ತು ಸಹ ಆರೋಪಿ ಪ್ರತಾಪ್ ರೈ ಅವರನ್ನು ಮಂಗಳವಾರ 42ನೇ ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ (ಎಸಿಎಂಎಂ) ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಜೈಲಿನಲ್ಲಿ ಅಕ್ರಮವಾಗಿ ಮೊಬೈಲ್ ಬಳಸಿದ ಆರೋಪ ಸಂಬಂಧ ಪೊಲೀಸರು ಇದೀಗ ತನಿಖೆಯನ್ನು ತೀವ್ರಗೊಳಿಸಿದ್ದು, ಮೊಬೈಲ್ ಹೇಗೆ ಸಿಕ್ಕಿತು, ಯಾರು ಕೊಟ್ಟರು ಎಂಬುವುದನ್ನು ಪತ್ತೆಹಚ್ಚಲು ಪ್ರಜ್ವಲ್ ರೇವಣ್ಣನನ್ನು ವಶಕ್ಕೆ ನೀಡುವಂತೆ ಕೋರ್ಟ್‌ಗೆ ಮನವಿ ಮಾಡಿದ್ದರು.

ಈ ಕುರಿತು ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಲಯ, ಜೈಲಿನೊಳಗೆ ಫೋನ್ ಬಳಕೆ ಆರೋಪದ ಕುರಿತು ಹೆಚ್ಚಿನ ತನಿಖೆ ನಡೆಸಲು ಅನುಕೂಲವಾಗುವಂತೆ ಪ್ರಜ್ವಲ್ ರೇವಣ್ಣ ಮತ್ತು ಪ್ರತಾಪ್ ರೈ ಅವರನ್ನು ಎರಡು ದಿನ ಪೊಲೀಸ್ ಕಸ್ಟಡಿಗೆ ಒಪ್ಪಿಸಿ ಆದೇಶಿಸಿದೆ.

ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಜೈಲು ಶಿಕ್ಷೆ ಅನುಭವಿಸುತ್ತಿರುವ ಪ್ರಜ್ವಲ್ ರೇವಣ್ಣ, ಇತ್ತೀಚೆಗೆ ಕೇಂದ್ರ ಅಪರಾಧ ಶಾಖೆ (ಸಿಸಿಬಿ) ಜೈಲಿನಲ್ಲಿ ನಡೆಸಿದ ಶೋಧ ಕಾರ್ಯಾಚರಣೆಯ ಸಮಯದಲ್ಲಿ ಮೊಬೈಲ್ ಫೋನ್ ಬಳಕೆ ಬೆಳಕಿಗೆ ಬಂದಿದ್ದು, ನಂತರ ಅಧಿಕಾರಿಗಳು ಹೆಚ್ಚಿನ ಭದ್ರತಾ ಸೌಲಭ್ಯದೊಳಗೆ ಮೊಬೈಲ್ ಫೋನ್ ಹೇಗೆ ಅವರಿಗೆ ಲಭ್ಯವಾಯಿತು ಎಂಬುದರ ಕುರಿತು ತನಿಖೆ ಆರಂಭಿಸಿದ್ದಾರೆ.

ಮೊಬೈಲ್‌ನಲ್ಲಿ ಫೇಸ್‌ಬುಕ್, ವಾಟ್ಸ್ಆ್ಯಪ್, ಇನ್‌ಸ್ಟಾಗ್ರಾಂ, ನೆಟ್‌ಫ್ಲಿಕ್ಸ್ ಹಾಗು ಅಮೆಜಾನ್ ಪ್ರೈಮ್ ನಂತಹ ಆ್ಯಪ್‌ಗಳು ಇದ್ದವು. ಮನೆಯವರು ಹಾಗು ವಕೀಲರ ಜೊತೆ ಮಾತನಾಡಲು ಇದನ್ನು ಬಳಸುತ್ತಿದ್ದುದು ಬೆಳಕಿಗೆ ಬಂದಿತ್ತು. ಮೊಬೈಲ್ ನೀಡಿದ್ದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದರು.

## ಹಾಸನ-ಬೇಲೂರು ಹೆದ್ದಾರಿಗೆ 470.85 ಕೋ.ರೂ.

» ಮೊದಲನೇ ಪುಟದಿಂದ

ಇದೀಗ ಯೋಜನೆಗೆ ಅನುಮೋದನೆ ದೊರೆತಿದೆ ಎಂದು ಹೇಳಿದ್ದಾರೆ.

ರಾಷ್ಟ್ರೀಯ ಹೆದ್ದಾರಿ 373ರ ವಿನ್ಯಾಸ ಸರಪಳಿ ಕಿ.ಮೀ. 27.780ರಿಂದ ಕಿ.ಮೀ. 57.320ರವರೆಗೆ ಒಟ್ಟು 29.54 ಕಿ.ಮೀ. ಉದ್ದದ ಹಾಸನ-ಬೇಲೂರು ರಸ್ತೆ ಭಾಗವನ್ನು ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲಾಗುವುದು. ರಾಷ್ಟ್ರೀಯ ಹೆದ್ದಾರಿ ವಾರ್ಷಿಕ ಯೋಜನೆ 2022-23ರ ಪ್ಯಾಕೇಜ್ 11ರಡಿ ಇಪಿಸಿ ಮಾದರಿಯಲ್ಲಿ ಯೋಜನೆ ಅನುಷ್ಠಾನಗೊಳ್ಳಲಿದೆ. ಪರಿಷ್ಕೃತ ಯೋಜನೆಯಡಿ ಭೂಸ್ವಾಧೀನಕ್ಕಾಗಿ 115.30 ಕೋ.ರೂ.ಹಾಗು ಭೂಸ್ವಾಧೀನ ಸೇರಿ ಪೂರ್ವ ನಿರ್ಮಾಣ ಚಟುವಟಿಕೆಗಳಿಗೆ ಒಟ್ಟು 128.90 ಕೋ.ರೂ. ಮೀಸಲಿಡಲಾಗಿದೆ ಎಂದು ತಿಳಿಸಿದ್ದಾರೆ.

ಜಿಲ್ಲೆಯ ಜನರ ಬಹುದಿನಗಳ ಬೇಡಿಕೆಗೆ ಸ್ಪಂದಿಸಿ 470.85 ಕೋ.ರೂ. ಅನುದಾನಕ್ಕೆ ಅನುಮೋದನೆ ನೀಡಿರುವ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಜಿಲ್ಲೆಯ ಜನತೆಯ ಪರವಾಗಿ ಹೃತ್ಪೂರ್ವಕ ಧನ್ಯವಾದ ಸಲ್ಲಿಸಿದ ಅವರು, ರಾಜ್ಯ ಸರ್ಕಾರ ಹಾಗು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಭೂಸ್ವಾಧೀನ ಪ್ರಕ್ರಿಯೆಯನ್ನು ಶೀಘ್ರ ಪೂರ್ಣಗೊಳಿಸಿ ಕಾಮಗಾರಿ ಆರಂಭಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ್ದಾರೆ.

ಹಾಸನ-ಬೇಲೂರು ಮಾರ್ಗವು ಜಿಲ್ಲೆಯ ಜನರು, ರೈತರು, ವ್ಯಾಪಾರಿಗಳು, ವಿದ್ಯಾರ್ಥಿಗಳು ಹಾಗು ಪ್ರವಾಸಿಗರಿಗೆ ಪ್ರಮುಖ ಸಂಪರ್ಕ ರಸ್ತೆಯಾಗಿದೆ. ಈ ಮಾರ್ಗವನ್ನು ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವುದರಿಂದ ಸಂಚಾರ ದಟ್ಟಣೆ ಮತ್ತು ಪ್ರಯಾಣದ ಸಮಯ ಕಡಿಮೆಯಾಗುವುದರ ಜೊತೆಗೆ ರಸ್ತೆ ಸುರಕ್ಷತೆ, ವ್ಯಾಪಾರ, ಪ್ರವಾಸೋದ್ಯಮ ಹಾಗು ಜಿಲ್ಲೆಯ ಸಮಗ್ರ ಆರ್ಥಿಕ ಅಭಿವೃದ್ಧಿಗೆ ಹೆಚ್ಚಿನ ಉತ್ತೇಜನ ದೊರೆಯಲಿದೆ ಎಂದು ತಿಳಿಸಿದ್ದಾರೆ.

## ಪಿಂಚಣಿಗಾಗಿ ವೃದ್ಧರು, ವಿಧವೆಯರ ಪರದಾಟ

» ಮೊದಲನೇ ಪುಟದಿಂದ

ಮಾನಸಿಕ ಅಸ್ವಸ್ಥರಿಗೆ 2 ಸಾವಿರ ರೂ., ಸಂಧ್ಯಾ ಸುರಕ್ಷಾ ಯೋಜನೆ 1200, ಮನಸ್ವಿನಿ ಯೋಜನೆಯಡಿ 800 ರೂ., ಮೈತ್ರಿ 800 ರೂ., ಆಸಿಡ್ ದಾಳಿಗೊಳಗಾದವರಿಗೆ 1 ಸಾವಿರ ರೂ., ರೈತರ ಆತ್ಮಹತ್ಯೆ ವಿಧವಾ ವೇತನ 2 ಸಾವಿರ ರೂ. ನೀಡಲಾಗುತ್ತಿದೆ.

ಪ್ರಸ್ತುತ ಇಂದಿರಾ ಗಾಂಧಿ ವೃಧಾಪ್ಯ ವೇತನದಡಿ 130080, ವಿಧವಾ ವೇತನ 64696, ಅಂಗವಿಕರು 25183, ಸಂಧ್ಯಾ ಸುರಕ್ಷಾ ಯೋಜನೆಯಡಿ 74417, ಮನಸ್ವಿನಿ 4828, ಮೈತ್ರಿ 7 ಹಾಗು ಆಸಿಡ್ ದಾಳಿಗೆ ತುತ್ತಾದ ಒಬ್ಬರು ಮತ್ತು ರೈತರ ಆತ್ಮಹತ್ಯೆ ವಿಧವಾ ವೇತನ ಪಡೆಯುತ್ತಿರುವ 491 ಮಹಿಳೆಯರು ಜಿಲ್ಲೆಯಲ್ಲಿದ್ದಾರೆ.

**60 ಸಾವಿರ ಫಲಾನುಭವಿಗಳಿಗೆ ಕೋಕ್**

ಫಲಾನುಭವಿಗಳಲ್ಲಿ ಮೃತರು, ಆಧಾರ್ ಸಂಖ್ಯೆಗೆ ಬ್ಯಾಂಕ್ ಖಾತೆ ಜೋಡಣೆಯಾಗದೆ ಇರುವುದು, ಜಾತಿ ಮತ್ತು ಆದಾಯ ಪ್ರಮಾಣ ಪತ್ರದಲ್ಲಿ ಲೋಪ ಹೀಗೆ ನಾನಾ ಕಾರಣಗಳಿಂದ 60 ಸಾವಿರ ಫಲಾನುಭವಿಗಳಿಗೆ ಪಿಂಚಣಿ ಸೌಲಭ್ಯ ಸ್ಥಗಿತಗೊಳಿಸಲಾಗಿದೆ.

ಒಟ್ಟು 98850 ಫಲಾನುಭವಿಗಳ ದಾಖಲಾತಿಗಳನ್ನು ಪರಿಶೀಲನೆಗೆ ಒಳಪಡಿಸಲಾಗಿತ್ತು. ಅದರಲ್ಲಿ 38387 ಜನರ ದಾಖಲಾತಿಗಳು ಸರಿಯಾಗಿದ್ದು, ಅವರಿಗೆ ಪಿಂಚಣಿ ಸೌಲಭ್ಯ ಕಲ್ಪಿಸಲಾಗುತ್ತಿದೆ. ಇನ್ನು 60,463 ಜನರು ಅಗತ್ಯ ದಾಖಲಾತಿಗಳನ್ನು ಒದಗಿಸದೆ ಇರುವುದರಿಂದ ಅಂತವರನ್ನು ಫಲಾನುಭವಿ ಪಟ್ಟಿಯಿಂದ ಹೊರಗಿಡ ಲಾಗಿದೆ. ನಿಗದಿತ ದಾಖಲೆ ಪತ್ರಗಳನ್ನು ಒದಗಿಸಿದರೆ ಅವರು ಪಟ್ಟಿಯಲ್ಲಿ ಸ್ಥಾನ ಪಡೆಯುವ ಸಾಧ್ಯತೆಯಿದೆ.

## ಸೈಬರ್ ಸುರಕ್ಷತೆಗೆ ಆದ್ಯತೆ ನೀಡಿ: ಆನಂದ್ ಮುನಿಕೋಟಿ

• ಪ್ರಜೋದಯ ವರದಿ

**ಹಾಸನ:** ಇಂದಿನ ಡಿಜಿಟಲ್ ಯುಗದಲ್ಲಿ ಸೈಬರ್ ಸುರಕ್ಷತೆಯ ಮಹತ್ವ ನಿರಂತರವಾಗಿ ಹೆಚ್ಚುತ್ತಿದೆಂದು ಕರ್ನಾಟಕ ಸೈಬರ್ ಸೆಕ್ಯುರಿಟಿ ಸೆಂಟರ್ ಆಫ್ ಎಕ್ಸಲೆನ್ಸ್ (ಸೈಸೆಕ್)ನ ಪ್ರೋಗ್ರಾಮ್ ಡೈರೆಕ್ಟರ್ ಆನಂದ್ ಮುನಿಕೋಟಿ ಅವರು ಅಭಿಪ್ರಾಯಪಟ್ಟರು.

ನಗರದ ಮಲೆನಾಡು ಇಂಜಿನೀಯರಿಂಗ್ ಕಾಲೇಜಿನಲ್ಲಿ ಸೈಸೆಕ್ ಸಹಯೋಗದಲ್ಲಿ ಅಧ್ಯಾಪಕರಿಗೆ ಆಯೋಜಿಸಿರುವ ಸೈಬರ್ ಸುರಕ್ಷತೆ ಕುರಿತ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಯುಪಿಐ ಪಾವತಿ, ಆನ್‌ಲೈನ್ ಬ್ಯಾಂಕಿಂಗ್, ಶಿಕ್ಷಣ, ಆರೋಗ್ಯ, ಕೈಗಾರಿಕೆ, ಸರ್ಕಾರಿ ಸೇವೆಗಳು ಸೇರಿ ಪ್ರತಿ ಕ್ಷೇತ್ರವೂ ಡಿಜಿಟಲ್ ತಂತ್ರಜ್ಞಾನವನ್ನು ಅವಲಂಬಿಸಿರುವುದರಿಂದ ಸೈಬರ್ ಸುರಕ್ಷತೆ ಅತ್ಯಗತ್ಯ ಎಂದರು.

ಅಧ್ಯಾಪಕರು ವಿದ್ಯಾರ್ಥಿಗಳಿಗೆ ಜ್ಞಾನ ವರ್ಗಾಯಿಸುವ ಜೊತೆಗೆ ಜ್ಞಾನದ ಮಲ್ಟಿಪ್ಲೈಯರ್‌ಗಳಾಗಿ ಕಾರ್ಯನಿರ್ವಹಿಸುತ್ತಾರೆ. ಅಧ್ಯಾಪಕರು ನೂರಾರು ವಿದ್ಯಾರ್ಥಿಗಳನ್ನು ತಲುಪುವ ಸಾಮರ್ಥ್ಯ




ಹೊಂದಿರುವುದರಿಂದ ಅಧ್ಯಾಪಕ ಸಮೂಹಕ್ಕೆ ಸೈಬರ್ ಸುರಕ್ಷತೆ ಕುರಿತು ತಿಳುವಳಿಕೆ ಮೂಡಿಸಿದರೆ ಅದು ಸಾವಿರಾರು ವಿದ್ಯಾರ್ಥಿಗಳಿಗೆ ತಲುಪಲಿದೆ ಎಂದು ತಿಳಿಸಿದರು.

ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ನೀಡುವ ಸೈಬರ್ ಸುರಕ್ಷತಾ ಜ್ಞಾನವು ಉದ್ಯಮದ ಅಗತ್ಯಗಳಿಗೆ ಅನುಗುಣವಾಗಿ ನಿರಂತರವಾಗಿ ಬದಲಾಗಬೇಕು. ವಿದ್ಯಾರ್ಥಿಗಳು ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸುವಾಗಲೇ ಸುರಕ್ಷತೆಯನ್ನು ಪರಿಗಣಿಸುವ 39, ಸೆಕ್ಯುರಿಟಿ ಬೈ ಡಿಸೈನ್ 39, ಮನೋಭಾವವನ್ನು ಬೆಳೆಸಿಕೊಳ್ಳಬೇಕೆಂದು ಹೇಳಿದರು.

ಅಶ್ ತಕ್ಷಾ ಲ್ಯಾಬ್ಸ್ ಸಂಸ್ಥಾಪಕ ನಂದಿ ಧರ್ಮಕಿಶೋರ್ ಮಾತನಾಡಿ, ಸೈಬರ್ ವಂಚನೆ ಪ್ರಕರಣಗಳು ಹಿಂದೆಂದಿಗಿಂತಲೂ ವೇಗವಾಗಿ ಹೆಚ್ಚುತ್ತಿವೆ. ಬೆರಳೆಣಿಕೆಯಷ್ಟು ಮಾಲ್‌ವೇರ್ ಮಾದರಿಗಳನ್ನು ಎದುರಿಸುತ್ತಿದ್ದ ಪರಿಸ್ಥಿತಿಯಿಂದ ಇಂದು ಲಕ್ಷಾಂತರ ಹೊಸ ಮಾಲ್‌ವೇರ್‌ಗಳು ಕಾಣಿಸಿಕೊಳ್ಳುವ ಮಟ್ಟಕ್ಕೆ ಸೈಬರ್ ಬೆದರಿಕೆಗಳು ವಿಸ್ತರಿಸಿವೆಂದು ಹೇಳಿದರು.

ಸೈಬರ್ ಸುರಕ್ಷತೆಯನ್ನು ಕೇವಲ ತಂತ್ರಜ್ಞಾನ ತಜ್ಞರು ಅಥವಾ ಸಂಸ್ಥೆಗಳ ಜವಾಬ್ದಾರಿಯಾಗಿ ಪರಿಗಣಿಸಬಾರದು. ಪ್ರತಿಯೊಬ್ಬರೂ ತಮ್ಮ ವೈಯಕ್ತಿಕ ಮಾಹಿತಿ, ಮೊಬೈಲ್, ಕಂಪ್ಯೂಟರ್, ದತ್ತಾಂಶ ಹಾಗೂ ನೆಟ್‌ವರ್ಕ್‌ಗಳನ್ನು ಸುರಕ್ಷಿತವಾಗಿರಿಸುವುದು ಅಗತ್ಯ. ಒಂದು ಸಾಧನದ ಸಣ್ಣ ಮಟ್ಟದ ಭದ್ರತಾ ಉಲ್ಲಂಘನೆಯೂ ದೊಡ್ಡ ಪರಿಣಾಮಗಳಿಗೆ ಕಾರಣವಾಗುವ ಸಾಧ್ಯತೆ ಇರುವುದರಿಂದ ಪ್ರತಿಯೊಬ್ಬರೂ ಎಚ್ಚರಿಕೆಯಿಂದ ಇರಬೇಕೆಂದು ಸಲಹೆ ನೀಡಿದರು.

ಸಣ್ಣ ಉಡುಗೊರೆ ಅಥವಾ ರಿಯಾಯಿತಿಗಾಗಿ ಜನರು ತಮ್ಮ ಮೊಬೈಲ್ ಸಂಖ್ಯೆ, ಇ-ಮೇಲ್ ವಿಳಾಸ ಸೇರಿ ವೈಯಕ್ತಿಕ ಮಾಹಿತಿಯನ್ನು ಸುಲಭವಾಗಿ ಹಂಚಿಕೊಳ್ಳುತ್ತಾರೆ. ಇಂತಹ ಮಾಹಿತಿ ಯನ್ನು ಸೈಬರ್ ಅಪರಾಧಿಗಳು ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆ ಇರುವುದರಿಂದ ವೈಯಕ್ತಿಕ ಮಾಹಿತಿಯ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನೀಯರಿಂಗ್ ವಿಭಾಗದ ಮುಖ್ಯಸ್ಥ ಡಾ.ಆನಂದ ಬಾಬು, ಪ್ರಾಧ್ಯಾಪಕ ಡಾ.ಎಚ್.ಎಸ್.ನರಸಿಂಹನ್, ಅಧ್ಯಾಪಕರು ಉಪಸ್ಥಿತರಿದ್ದರು.

## ದೇವಾಲಯದಲ್ಲಿ ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಅರಸೀಕೆರೆ:** ದೇವಸ್ಥಾನದ ಬೀಗ ಮುರಿದು ಒಳನುಗ್ಗಿರುವ ಕಳ್ಳರು 1.50 ಲ.ರೂ. ಮೌಲ್ಯದ ಚಿನ್ನ ಮತ್ತು ಬೆಳ್ಳಿ ಆಭರಣ ಕಳವು ಮಾಡಿ ರುವ ಘಟನೆ ತಾಲ್ಲೂಕಿನ ಭೈರಾನಾಯಕನ ಹಳ್ಳಿ ಪ್ಲೇಗಿನಮ್ಮ ದೇವಸ್ಥಾನದಲ್ಲಿ ನಡೆದಿದೆ.

ಅರ್ಚಕ ರಾಘವೇಂದ್ರ ಅವರು ಆ.15ರ ರಾತ್ರಿ 10 ಗಂಟೆಗೆ ದೇವಸ್ಥಾನಕ್ಕೆ ಬೀಗ ಹಾಕಿ ಮನೆಗೆ ತೆರಳಿದ್ದ. ರಾತ್ರಿ 10.30ಕ್ಕೆ ದೇವಸ್ಥಾನದ ಹತ್ತಿರ ಬಂದಾಗ ದೇವಾಲಯದ ಬೀಗ ಮುರಿದಿರುವುದು ಗೊತ್ತಾಗಿದೆ. ದೇವರ ವಿಗ್ರಹದ ಮೇಲಿದ್ದ ಚಿನ್ನದ ತಾಳಿ ಮತ್ತು ಗುಂಡು, ಮೆರವಣಿಗೆ ದೇವರ ಚಿನ್ನದ ತಾಳಿ ಮತ್ತು ಗುಂಡು, ಬೆಳ್ಳಿ ಮೂರ್ತಿ, ಬೆಳ್ಳಿ ಛತ್ರಿ-12, ನಾಗಾಭರಣ, ತ್ರಿಶೂಲ ಗಟ್ಟ, ಬೆಳ್ಳಿ ಶಂಖ, ಚಕ್ರ, ಬೆಳ್ಳಿ ಗಿಳಿಗಳು, 3 ಅರೆ ತಾಳಿ, ಬೆಳ್ಳಿಯ ಅರಳಿ ಎಲೆಗಳು-2 ಹಾಗು ಹುಂಡಿಯಲ್ಲಿದ್ದ ಅಂದಾಜು 15 ಸಾವಿರ ರೂ. ಕದ್ದಿದ್ದಾರೆ. ಒಟ್ಟು 2 ಕೆ.ಜಿ. 650 ಗ್ರಾಂ ತೂಕದ ಬೆಳ್ಳಿ ಮತ್ತು 25 ಗ್ರಾಂ ತೂಕದ ಚಿನ್ನಾಭರಣ ಕಳುವಾಗಿದೆ. ಗ್ರಾಮಾಂತರ ಠಾಣೆ ಯಲ್ಲಿ ತಡವಾಗಿ ಎಫ್‌ಆರ್ ದಾಖಲಿಸಲಾಗಿದೆ.

## ಚುನಾವಣೆ ವಿಳಂಬ: 38,437 ಕೋ.ರೂ.ಗೆ ಹೊಡೆತ

» ಮೊದಲನೇ ಪುಟದಿಂದ

ಯಾಗಿರುವ ಬಗ್ಗೆ ಲೆಕ್ಕಪರಿಶೋಧನಾ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಸ್ಥಳೀಯ ಸಂಸ್ಥೆಗಳಿಗೆ ಬರುವ ಅನುದಾನವನ್ನು ನಿಯಮಾನುಸಾರವಾಗಿ ಬಳಕೆ ಮಾಡಬೇಕು. ಆದರೆ, ಹಣದ ಬಳಕೆ ಹಾಗು ನಿರ್ವಹಣೆಯಲ್ಲಿ ಲೋಪವಾಗಿರುವುದು ಗಂಭೀರ ವಿಚಾರವಾಗಿದ್ದು, ಈ ಬಗ್ಗೆ ಸರ್ಕಾರ ಸ್ಪಷ್ಟ ಉತ್ತರ ನೀಡಬೇಕೆಂದು ಒತ್ತಾಯಿಸಿದರು.

16ನೇ ಹಣಕಾಸು ಯೋಜನೆಯಡಿ ರಾಜ್ಯಕ್ಕೆ 43,791 ಕೋ.ರೂ. ಅನುದಾನ ಬರಬೇಕಿದೆ. ಈ ಅನುದಾನವನ್ನು ಸಮರ್ಪಕವಾಗಿ ಪಡೆಯಲು ಹಾಗು ಬಳಕೆ ಮಾಡಿಕೊಳ್ಳಲು ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವುದು ಅತ್ಯಂತ ಅಗತ್ಯವಾಗಿದೆ ಎಂದು ಹೇಳಿದರು.

ನಗರ ಸ್ಥಳೀಯ ಸಂಸ್ಥೆಗಳಲ್ಲಿ 7,631 ಸದಸ್ಯರು ಹಾಗು ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ 98,601 ಸದಸ್ಯರ ಆಯ್ಕೆ ನಡೆಯಬೇಕಿದೆ. ಇಷ್ಟು ದೊಡ್ಡ ಸಂಖ್ಯೆಯ ಜನಪ್ರತಿನಿಧಿಗಳ ಆಯ್ಕೆ ನಡೆಯದಿರುವುದರಿಂದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಗಂಭೀರ ಸಮಸ್ಯೆ ಉಂಟಾಗಿದೆ. ಜನರಿಂದ ಆಯ್ಕೆಯಾದ ಪ್ರತಿನಿಧಿಗಳ ಮೂಲಕವೇ ಸ್ಥಳೀಯ ಆಡಳಿತ ವ್ಯವಸ್ಥೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕೆಂದು ಆಗ್ರಹಿಸಿದರು.

**ಸರ್ಕಾರ ಶ್ವೇತಪತ್ರ ಹೊರಡಿಸಲಿ**

ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಿರಂತರವಾಗಿ ಮುಂದೂಡುತ್ತಿರುವುದರಿಂದ ರಾಜ್ಯಕ್ಕೆ ಉಂಟಾಗಿರುವ ಹಣಕಾಸಿನ ಪರಿಣಾಮದ ಕುರಿತು ಸರ್ಕಾರ ಶ್ವೇತಪತ್ರ ಹೊರಡಿಸಬೇಕು. ಕೇಂದ್ರದ ಅನುದಾನದಲ್ಲಿ ಎಷ್ಟು ಹಣ ರಾಜ್ಯಕ್ಕೆ ಬರಬೇಕಿತ್ತು, ಎಷ್ಟು ಬಂದಿದೆ, ಎಷ್ಟು ಹಣ ಬಿಡುಗಡೆಯಾಗದೆ ಉಳಿದಿದೆ ಹಾಗು ಚುನಾವಣೆ ವಿಳಂಬ ದಿಂದ ರಾಜ್ಯಕ್ಕೆ ಎಷ್ಟು ನಷ್ಟವಾಗಿದೆ ಎಂಬುದನ್ನು ಸರ್ಕಾರ ಜನರ ಮುಂದೆ ಬಹಿರಂಗಪಡಿಸಬೇಕೆಂದು ಒತ್ತಾಯಿಸಿದರು.

ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಬಿದರಿಕೆರೆ ಜಯರಾಮ್, ನಗರಸಭೆ ಮಾಜಿ ಸದಸ್ಯರಾದ ಕಮಲ್ ಕುಮಾರ್, ಕ್ರಾಂತಿ ಪ್ರಸಾದ್ ತ್ಯಾಗಿ, ರವಿಶಂಕರ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಸತೀಶ್, ಬಾಲಸುಬ್ರಹ್ಮಣ್ಯ ಇದ್ದರು.

## ಕಾರ್ಮಿಕರಿಗೆ ಸುರಕ್ಷತಾ ಕಿಟ್ ವಿತರಣೆ



• ಪ್ರಜೋದಯ ವರದಿ

**ಹಾಸನ:** ರಾಜ್ಯ ಸರ್ಕಾರದ ಕಟ್ಟಡ ಮತ್ತು ಇತರೆ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ಕಟ್ಟಡ ಕಾರ್ಮಿಕರಿಗೆ ನಗರದ ವಿವೇಕ ನಗರದಲ್ಲಿರುವ ಅಂಬೇಡ್ಕರ್ ಸೇವಾ ಕೇಂದ್ರದಲ್ಲಿ ಸುರಕ್ಷತಾ ಕಿಟ್ ವಿತರಣೆ ಮಾಡಲಾಯಿತು.

ಶಾಸಕ ಹೆಚ್.ಪಿ.ಸ್ವರೂಪ್ ಹಾಗು ಅಧಿಕಾರಿಗಳು ಅರ್ಹ ಫಲಾನುಭವಿಗಳಿಗೆ ಕಿಟ್ ವಿತರಿಸಿದರು. ಅಪಾಯದ ಕೆಲಸಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಹಿತದೃಷ್ಟಿಯಿಂದ ಕಿಟ್ ವಿತರಣೆ ಮಾಡಲಾಗಿದ್ದು, ಮಳೆ-ಬಿಸಿಲು ಎನ್ನದೆ ಬೃಹತ್ ಕಟ್ಟಡಗಳನ್ನು ಕಟ್ಟುವ ಕಟ್ಟಡ ಕಾರ್ಮಿಕರು ಸುರಕ್ಷಿತವಾಗಿ ಇರಬೇಕು. ಅವರನ್ನು ನಂಬಿಕೊಂಡು ಕುಟುಂಬಗಳು ಜೀವನ ಸಾಗಿಸುತ್ತವೆ. ಅವರ ಕ್ಷೇಮವೇ ಎಲ್ಲರ ಕ್ಷೇಮ ಎಂದು ಶಾಸಕ ಸ್ವರೂಪ್ ಅವರು ಹೇಳಿದರು

ಸುಮಾರು 1433 ಕಿಟ್‌ಗಳ ಪೈಕಿ ಆಯ್ದ 50 ಕಾರ್ಮಿಕರಿಗೆ ವಿತರಣೆ ಮಾಡಲಾಯಿತು. ಮುಂದಿನ ದಿನಗಳಲ್ಲಿ ಎಲ್ಲರಿಗೂ ಕಿಟ್ ವಿತರಿಸಲಾಗುವುದೆಂದರು.

## ಸ್ಥಳೀಯ ಭಾಷೆ ಸಮೃದ್ಧವಾಗಲು ಜಾನಪದ ಕಾರಣ

» ಮೊದಲನೇ ಪುಟದಿಂದ

ವುದು ಭವಿಷ್ಯದ ಪೀಳಿಗೆಯ ಜವಾಬ್ದಾರಿ ಎಂದರು.

ಎಸ್‌ಆರ್‌ಎಸ್ ಪ್ರಜ್ಞಾ ವಿದ್ಯಾಶಾಲೆಯ ಕಾರ್ಯದರ್ಶಿ ಎಂ.ನಟರಾಜ್ ಅವರು ಮಾತನಾಡಿ, ಜಾನಪದ ಎಂದರೆ ಜನರಿಂದ ಜನರಿಗೆ ತಲುಪುವ ಒಂದು ಕಲೆ. ಅಕ್ಷರವಿಲ್ಲದ ಕಾಲದಿಂದಲೂ ಜಾನಪದ ಶ್ರೀಮಂತವಾಗಿ ಬೆಳೆದು ಬಂದಿದೆ. ಕರ್ನಾಟಕ ಜಾನಪದ ಕಲೆಯ ತವರೂರು. ತಾಂತ್ರಿಕವಾಗಿ ಮತ್ತು ಆಧುನಿಕವಾಗಿ ಜಾನಪದ ತುಂಬಾ ವಿಶೇಷವಾಗಿ ಬೆಳೆಯುತ್ತಿದೆ ಎಂದರು.

ವೇದಿಕೆಯಲ್ಲಿ ಡೊಳ್ಳು, ಕಂಸಾಳೆ, ತತ್ವಪದ, ಜಾನಪದ ಗೀತೆ, ಸೋಬಾನೆ ಪದ ಹಾಡಲಾಯಿತು. ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ದೇವಾನಂದ ವರಪ್ರಸಾದ್, ಕಲಾವಿದರಾದ ಯೋಗೇಂದ್ರ ದುದ್ದ, ಗ್ಯಾರಂಟಿ ರಾಮಣ್ಣ, ಸಾಹಿತಿ ಮೇಟಿಕೆರೆ ಹಿರಿಯಣ್ಣ, ಶಿವನಗೌಡ ಪಾಟೀಲ, ಬಿ.ಟಿ.ಮಾನವ, ನೀಲಮ್ಮ ಜಾಗರವಳ್ಳಿ ಇದ್ದರು.

## ಕಲಬೆರಕೆ ಬೆಣ್ಣೆ ಮಾರಾಟ: ತಪಾಸಣೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕಲಬೆರಕೆ ಹಾಗೂ ಕಳಪೆ ಗುಣಮಟ್ಟದ ಬೆಣ್ಣೆ ಮಾರಾಟ ಮಾಡಲಾಗುತ್ತಿದೆಂಬ ದೂರಿನ ಹಿನ್ನಲೆಯಲ್ಲಿ ತಾಲ್ಲೂಕು ಆರೋಗ್ಯಾಧಿ ಕಾರಿ ಡಾ॥ಟಿ.ಎಚ್.ಹರೀಶ್ ನೇತೃತ್ವದ ಅಧಿಕಾರಿಗಳ ತಂಡ ಮಂಗಳವಾರ ತಾಲ್ಲೂಕಿನ ಶ್ರವಣ ಬೆಳಗೊಳದಲ್ಲಿ ವಿವಿಧೆಡೆ ತಪಾಸಣೆ ನಡೆಸಿತು.

ಮಾರುತಿ ವ್ಯಾನ್ ಹಾಗೂ ಆಪೆ ಆಟೋಗಳಲ್ಲಿ ಬೆಣ್ಣೆ ತಂದು, ರೈತ ಮಹಿಳೆಯರ ಸೋಗಿನಲ್ಲಿ ಸಾರ್ವಜನಿಕರಿಗೆ ಮಾರಾಟ ಮಾಡಲಾಗುತ್ತಿದೆಂಬ ಸ್ಥಳೀಯರ ದೂರಿನ ಹಿನ್ನಲೆಯಲ್ಲಿ ಅಧಿಕಾರಿಗಳು ಪರಿಶೀಲನೆ ಕೈಗೊಂಡರು. ಅಧಿಕಾರಿಗಳು ತಪಾಸಣೆಗೆ ಬರುತ್ತಿದ್ದಂತೆ ಮಾರಾಟಕ್ಕೆ ತಂದಿದ್ದ ಬೆಣ್ಣೆ ಹಾಗೂ ವಾಹನಗಳನ್ನು ಅಲ್ಲೇ ಬಿಟ್ಟು ನಕಲಿ ಬೆಣ್ಣೆ ಮಾರಾಟಗಾರರು ಸ್ಥಳದಿಂದ ಪರಾರಿಯಾಗಿದ್ದಾರೆ. ಈ ವೇಳೆ ಮಾರಾಟಕ್ಕೆ ಇಡಲಾಗಿದ್ದ ಬೆಣ್ಣೆಯ ಮಾದರಿಗಳನ್ನು ಸಂಗ್ರಹಿಸಿ ಗುಣಮಟ್ಟ ಪರೀಕ್ಷೆಗಾಗಿ ಹಾಸನದ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.

ಪಟ್ಟಣಕ್ಕೆ ಹೊರಗಿನಿಂದ ವಾಹನ




ಗಳಲ್ಲಿ ಬೆಣ್ಣೆ ತಂದು ಮಾರಾಟ ಮಾಡಲಾಗುತ್ತಿದ್ದು, ಅದರ ಗುಣಮಟ್ಟದ ಬಗ್ಗೆ ಅನುಮಾನ ವ್ಯಕ್ತವಾಗಿದೆ. ಈ ಹಿನ್ನಲೆಯಲ್ಲಿ ಆಹಾರ ಸುರಕ್ಷತೆ ಹಾಗೂ ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಅಧಿಕಾರಿಗಳು ತಪಾಸಣೆ ನಡೆಸಿದ್ದಾರೆ.

ಬೆಣ್ಣೆಯ ಮಾದರಿಗಳ ಪರೀಕ್ಷಾ ವರದಿ ಬಂದ ಬಳಿಕ ಅದರ ಗುಣಮಟ್ಟದ ಕುರಿತು ಸ್ಪಷ್ಟತೆ ದೊರೆಯಲಿದೆ. ವರದಿಯಲ್ಲಿ ಕಳಪೆ ಗುಣಮಟ್ಟ ಅಥವಾ ಕಲಬೆರಕೆ ದೃಢಪಟ್ಟರೆ ಸಂಬಂಧ ಪಟ್ಟವರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದೆಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ತಪಾಸಣೆ ವೇಳೆ ಫುಡ್ ಆಫೀಸರ್ ಶರತ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಮೋಹನ್, ಅಚಲ್ ಹಾಗೂ ಸ್ಥಳೀಯ ರೈತರು ಇದ್ದರು.

## ರಾಜ್ಯ ಮಟ್ಟದ ಫಿನ್ ಸ್ವಿಮ್ಮಿಂಗ್: ರಾಷ್ಟ್ರ ಮಟ್ಟಕ್ಕೆ ಆಯ್ಕೆ

• ಪ್ರಜೋದಯ ವರದಿ

**ಹಾಸನ:** ಮಂಗಳೂರಿನಲ್ಲಿ ಇತ್ತೀಚೆಗೆ ನಡೆದ ರಾಜ್ಯ ಮಟ್ಟದ ಫಿನ್ ಸ್ವಿಮ್ಮಿಂಗ್ ಸ್ಪರ್ಧೆಯಲ್ಲಿ ನಗರದ ಕ್ರೀಡಾಪಟುಗಳು ಅತ್ಯುತ್ತಮ ಪ್ರದರ್ಶನ ನೀಡಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಮೋಹಕ್ ಪಿ.ಗೌಡ, ಅದ್ವಿಕಾ, ಚಿರಾಗ್ ಹಾಗು ಆಕಾಂಕ್ಷಾ ಪದಕಗಳನ್ನು ಮುಡಿಗೇರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ರಾಜ್ಯ ಮಟ್ಟದಲ್ಲಿ ಪದಕ ಗೆದ್ದು ಬೀಗಿದ ಈ ನಾಲ್ವರೂ ಕ್ರೀಡಾಪಟುಗಳು ಇದೀಗ ರಾಷ್ಟ್ರ ಮಟ್ಟದಲ್ಲಿ ತಮ್ಮ ಪ್ರತಿಭೆ ಒರೆಗೆ ಹಚ್ಚಲು ಸಜ್ಜಾಗಿದ್ದಾರೆ. ಸೆ.29 ರಿಂದ ಅ.2ರ ವರೆಗೆ ಮಹಾ ರಾಷ್ಟ್ರದ ಪುಣೆಯಲ್ಲಿ ನಡೆಯಲಿರುವ ರಾಷ್ಟ್ರೀಯ ಫಿನ್ ಸ್ವಿಮ್ಮಿಂಗ್ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.




ಎಸ್.ಕೆ.ಸ್ವಿಮ್ಮಿಂಗ್ ತರಬೇತಿ ಕೇಂದ್ರದ ನಿರ್ದೇಶಕಿ ಡಾ.ಸೈಯದಾ ಅನಿಸ್ ಫಾತಿಮಾ, ಮಿಲೇನಿಯಮ್ ವರ್ಲ್ಡ್ ಸ್ಕೂಲ್ ನಿರ್ದೇಶಕರಾದ ಶರತ್ ಮತ್ತು ಕೀರ್ತಿ, ಪ್ರಾಂಶುಪಾಲ ನಾಗಭೂಷಣ್ ವಿದ್ಯಾರ್ಥಿಗಳ ಸಾಧನೆಗೆ ಅಭಿನಂದಿಸಿದ್ದಾರೆ.

## ಅಂಗಾಂಶ ಕೃಷಿ ಕುರಿತು ರೈತರಿಗೆ ಅರಿವು



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹಾಸನದ ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಬಿಎಸ್ಸಿ ಅಂತಿಮ ವರ್ಷದ ವಿದ್ಯಾರ್ಥಿಗಳು ತಾಲ್ಲೂಕಿನ ಊಪಿನಹಳ್ಳಿಯಲ್ಲಿ ಹಮ್ಮಿಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದಲ್ಲಿ ಅಂಗಾಂಶ ಕೃಷಿ ಸಸಿಗಳ ಕುರಿತು ರೈತರಿಗೆ ಅರಿವು ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಸಂಪನ್ಮೂಲ ವ್ಯಕ್ತಿ ಡಾ॥ಸ್ಮಿತಾ ಅವರು ಮಾತನಾಡಿ, ಅಂಗಾಂಶ ಕೃಷಿ ಎಂದರೆ ಸಸ್ಯದ ಆಯ್ದ ಭಾಗವನ್ನು ಪ್ರಯೋಗಾಲಯದ ನಿಯಂತ್ರಿತ ಪರಿಸ್ಥಿತಿಯಲ್ಲಿ ಬೆಳೆಸಿ ಕಡಿಮೆ ಅವಧಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗುಣಮಟ್ಟದ ಸಸಿಗಳನ್ನು ಉತ್ಪಾದಿಸುವ ಆಧುನಿಕ ಸಸ್ಯ ಪ್ರಸರಣ ತಂತ್ರ ಜ್ಞಾನವಾಗಿದೆ. ಈ ತಂತ್ರಜ್ಞಾನದ ಮೂಲಕ ಬಾಳೆ ಮತ್ತು ಆಲೂಗಡ್ಡೆಯನ್ನು ಬೆಳೆಯುವುದು ಮಾತ್ರವಲ್ಲದೆ ಅಧಿಕ ಇಳುವರಿ ಪಡೆಯಬಹುದು ಎಂದರು.

ಆರೋಗ್ಯಕರ ಮತ್ತು ರೋಗ ಮುಕ್ತ ನೆಡುವ ಸಾಮಾಗ್ರಿ, ಏಕರೂಪದ ಬೆಳವಣಿಗೆ, ಗುಣಮಟ್ಟ, ಕಡಿಮೆ ಅವಧಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಸಿಗಳ ಉತ್ಪಾದನೆ ಹಾಗು ಉತ್ತಮ ಇಳುವರಿಗೆ ಸಹಕಾರ ಇತ್ಯಾದಿ ಪ್ರಯೋಜನಗಳ ಬಗ್ಗೆ ರೈತರಿಗೆ ತಿಳಿಸಲಾಯಿತು. ರೈತರಿಗೆ ಅಂಗಾಂಶ ಕೃಷಿ ಬಾಳೆ ಸಸಿಗಳನ್ನು ಉಚಿತವಾಗಿ ವಿತರಿಸಲಾಯಿತು.

### ಮಳಲಿ ಲಕ್ಷ್ಮೀದೇವಿ ಅರ್ಚಕರ ಒತ್ತಾಯ: ದಾಖಲಾತಿ ಪರಿಶೀಲಿಸಿ ನೇಮಕಾತಿಗೆ ಮನವಿ

## ಪೂಜೆಗೆ 24 ಕುಟುಂಬಗಳಿಗೂ ಅವಕಾಶ ನೀಡಿ

• ಪ್ರಜೋದಯ ವರದಿ

**ಹಾಸನ:** ಹೊಳೆನರಸೀಪುರ ತಾಲ್ಲೂಕಿನ ಮಳಲಿ ಗ್ರಾಮದಲ್ಲಿರುವ ಶ್ರೀ ಲಕ್ಷ್ಮೀದೇವಿ ದೇವಾ ಲಯದಲ್ಲಿ ಪೂಜೆ ಸಲ್ಲಿಸಲು ಹಿಂದಿನಂತೆ 24 ಕುಟುಂಬಗಳಿಗೂ ಅವಕಾಶ ನೀಡಬೇಕೆಂದು ಜಿಲ್ಲಾಡಳಿತವನ್ನು ಅರ್ಚಕರು ಒತ್ತಾಯಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅರ್ಚಕ ಎಂ.ರಕ್ಷಿತ್ ಅವರು ಮಾತನಾಡಿ, ದೇವಾಲ ಯದಲ್ಲಿ ಹಿಂದಿನಿಂದಲೂ ಪೂಜೆ ಮಾಡಿಕೊಂಡು ಬಂದಿರುವ 24 ಕುಟುಂಬಗಳ ಹಿರಿಯರ ನಿಧನ ನಂತರ ಅವರ ಸದಸ್ಯರ ಪೈಕಿ ಆರು ಮಂದಿ ಮಾತ್ರ ವಂಶ ಪಾರಂಪರ್ಯ ದಾಖಲಾತಿ ನೀಡಿ ಹೊಸದಾಗಿ ನೇಮಕಾತಿ ಮಾಡಿಸಿ ಕೊಂಡಿದ್ದಾರೆ. ಉಳಿದವರು ದಾಖಲಾತಿ ನೀಡಿ ನೇಮಕಾತಿ ಮಾಡಿಸಿಕೊಳ್ಳದೇ ಇರುವುದರಿಂದ ಇದೀಗ ಗೊಂದಲ ಸೃಷ್ಟಿಯಾಗಿದೆ ಎಂದು ತಿಳಿಸಿದರು.

ಇದೀಗ ಬಾಕಿ ಉಳಿದ ಕುಟುಂಬದವರು ದಾಖಲಾತಿ ಸಲ್ಲಿಸಿದ್ದು, ತಹಶೀಲ್ದಾರ್ ಅಥವಾ ಜಿಲ್ಲಾಧಿಕಾರಿ ಪರಿಶೀಲಿಸಿ ಹಿಂದಿನಿಂದಲೂ ನಡೆದುಕೊಂಡು ಬಂದಿರುವಂತೆ ಎಲ್ಲಾ 24 ಕುಟುಂಬದ ಒಬ್ಬೊಬ್ಬರು ಪೂಜಾ ಕಾರ್ಯಮುಂದುವರಿಸಲು ಅವಕಾಶ ಮಾಡಿಕೊಡಬೇಕೆಂದುಮನವಿ ಮಾಡಿದರು.




ಅರ್ಚಕ ಉಮೇಶ್ ಅವರು ಮಾತನಾಡಿ, ಹೊಸದಾಗಿ ನೇಮಕಾತಿ ಮಾಡಲು 24 ಜನರ ಬದಲಿಗೆ 45 ರಿಂದ 60 ಜನ ಅರ್ಜಿ ಹಾಕಿದ್ದಾರೆ. ಒಂದೇ ಮನೆಯಿಂದ 8-10 ಮಂದಿ ಅರ್ಜಿ ಹಾಕಿದ್ದಾರೆ. ಅಧಿಕಾರಿಗಳು ಈ ಬಗ್ಗೆ ಪರಿಶೀಲಿಸಿ ಅರ್ಹರಿಗೆ ಮಾತ್ರ ಅವಕಾಶ ನೀಡಬೇಕು. ಉಳಿದವರು ಬೇಡ, ಅದರಲ್ಲೂ ಕುಟುಂಬದ ಮಹಿಳೆಯರು, ಮಕ್ಕಳಿಗೆ ಅವಕಾಶ ನೀಡ ಬಾರದೆಂದು ವಿನಂತಿಸಿದರು.

ಕುಟುಂಬದಲ್ಲಿ ಹೆಣ್ಣುಮಕ್ಕಳಿಲ್ಲದಿದ್ದರೆ ಅಳಿಯಂದಿರಿಗೆ ಅವಕಾಶ ನೀಡಬೇಕೆಂಬ ನ್ಯಾಯಾಲ ಯದ ಆದೇಶವಿದೆ. ಆ ಪ್ರಕಾರ ಒಂದು ಕುಟುಂಬಕ್ಕೆ ಒಬ್ಬರಿಗೆ ಮಾತ್ರ ಅವಕಾಶ ನೀಡಬೇಕು. ಹೆಚ್ಚಿನವರಿಗೆ ಅವಕಾಶ ನೀಡುವುದರಿಂದ ಭಕ್ತರಿಗೆ ಕಿರಿಕಿರಿ ಉಂಟಾಗುವುದರ ಜೊತೆಗೆ ಅನಗತ್ಯ ಗೊಂದಲ ಸೃಷ್ಟಿಯಾಗಲಿದೆ. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಅಗತ್ಯ ಕ್ರಮ ತೆಗೆದುಕೊಳ್ಳಬೇಕೆಂದು ಮನವಿ ಮಾಡಿದರು.

ಗ್ರಾಮದ ಸುರೇಶ್ ಎಂಬುವವರು ಮಾತನಾಡಿ, ನೇಮಕಾತಿ ಆಗಿರುವ ಅರ್ಚಕರು ತಲಾ 15 ದಿನಕ್ಕೆ ಒಬ್ಬರಂತೆ ಪೂಜೆ ಮಾಡಲು ಪಂಚಾಯಿತಿ ಮೂಲಕ ತೀರ್ಮಾನ ಮಾಡಲಾಗಿತ್ತು. ಕೆಲವರು ಈ ವಿಚಾರದಲ್ಲಿ ಅನಗತ್ಯ ಗೊಂದಲ ಉಂಟು ಮಾಡಿದರು. ಅದರಲ್ಲಿ ಯಾವುದೇ ರಾಜಕೀಯ ಇಲ್ಲ, ಯಾವುದೇ ಗೊಂದಲ ಸಹ ಎಂದು ಸ್ಪಷ್ಟಪಡಿಸಿದರು. ಅರ್ಚಕರಾದ ಕಾರ್ತಿಕ್, ನಿಂಗರಾಜು, ಸುರೇಶ್ ಇದ್ದರು.

## ಜಮೀನು ಕಬಳಿಸಲು ಪೊಲೀಸರ ಮೂಲಕ ಬೆದರಿಕೆ

### ದೌರ್ಜನ್ಯಕ್ಕೆ ಒಳಗಾದವರ ಮೇಲೆಯೇ ಸುಳ್ಳು ಪ್ರಕರಣ ದಾಖಲಿಸಿರುವ ಆರೋಪ

• ಪ್ರಜೋದಯ ವರದಿ

**ಹಾಸನ:** ಜಮೀನು ವಿವಾದ ಹಿನ್ನಲೆ ಹಲ್ಲೆ ಮಾಡಿದವರ ಮೇಲೆ ಯಾವುದೇ ಕ್ರಮ ಕೈಗೊಳ್ಳದ ಗ್ರಾಮಾಂತರ ಠಾಣೆ ಪೊಲೀಸರು, ದೌರ್ಜನ್ಯಕ್ಕೆ ಒಳಗಾದವರ ಮೇಲೆಯೇ ಸುಳ್ಳು ಪ್ರಕರಣ ದಾಖಲು ಮಾಡಿದ್ದಾರೆಂದು ಜಿಲ್ಲಾ ಅಟ್ರಾಸಿಟಿ ಸಮಿತಿ ಸದಸ್ಯೆ ಶಿವಮ್ಮ ಅವರು ದೂರಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲ್ಲೂಕಿನ ಸಾಲಗಾಮೆ ಹೋಬಳಿ ನಿಟ್ಟೂರು ಗ್ರಾಮದ ಲಕ್ಕಮ್ಮ ಅವರ ಕುಟುಂಬದ ಹೆಸರಿನಲ್ಲಿ ಗ್ರಾಮದ ಸ.ನಂ. 246/ಪಿ ಯಲ್ಲಿ 3 ಎಕರೆ 33 ಗುಂಟೆ ಜಮೀನಿದ್ದು, ಹಲವು ವರ್ಷಗಳಿಂದ ಸ್ವಾಧೀನದಲ್ಲಿದ್ದಾರೆ. ಲಕ್ಕಮ್ಮ ಅವರಿಗೆ ಐವರು ಹೆಣ್ಣು ಮಕ್ಕಳಿದ್ದು, ಗಂಡುಮಕ್ಕಳಿಲ್ಲ. ಇದನ್ನೇ ನೆಪ ಮಾಡಿಕೊಂಡು ಸಾಗರ್ ಮತ್ತು ಶರತ್ ಎಂಬುವವರು ಜಮೀನು ಕಬಳಿಸಲು ಹಲ್ಲೆ ನಡೆಸಿದ್ದಾರೆಂದು ಆರೋಪಿಸಿದರು.

ಈ ಸಂಬಂಧ ದೂರು ನೀಡಿದರೆ ವಿಳಂಬವಾಗಿ ಎಫ್‌ಐಆರ್ ಮಾಡಿಸಿದರು. ಆರೋಪಿಗಳನ್ನು ಬಂಧಿಸಿ ಕ್ರಮ ಜರುಗಿಸುವ ಬದಲು ಇದೇ ಪೊಲೀಸರು, ರಾಜಿ ಸಂಧಾನಕ್ಕೆ ಪ್ರಯತ್ನ. ಇತ್ತೀಚೆಗೆ ಮಹಾಲಕ್ಷ್ಮಿ ಶಾಂತರಾಜು ಎಂಬುವವರ ಮೂಲಕ ದೂರುಕೊಡಿಸಿಲಕ್ಷ್ಮಮ್ಮ, ಶಾಂತಮ್ಮ, ಶಿವಮ್ಮ ಅವರ ಮೇಲೆ ಸುಳ್ಳು ಪ್ರಕರಣ ದಾಖಲು ಮಾಡಿಸಿದ್ದಾರೆ. ಸಾಗರ್ ಮೊದಲಾದವರೊಂದಿಗೆ ರಾಜಿ ಮಾಡಿ ಕೊಳ್ಳದೇ ಇದ್ದರೆ ಬಂಧಿಸುವುದಾಗಿ ಬೆದರಿಕೆ ಹಾಕುತ್ತಿದ್ದಾರೆ ಎಂದು ದೂರಿದರು.

ಮೇಲಾಧಿಕಾರಿಗಳು ಈ ಬಗ್ಗೆ ಗಮನ ಹರಿಸಿ ತಪ್ಪು ಮಾಡಿರುವವರ ಮೇಲೆ ಕ್ರಮ ಜರುಗಿಸಿ, ನೊಂದವರಿಗೆ ನ್ಯಾಯ ಕೊಡಿಸಬೇಕು. ಈ ಸಂಬಂಧ ಎಸ್ಸಿ-ಎಸ್ಟಿ ಆಯೋಗ, ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡುವುದಾಗಿ ತಿಳಿಸಿದರು. ಸಂತ್ರಸ್ತ ಕುಟುಂಬ ಸದಸ್ಯರಾದ ಲಕ್ಷ್ಮಮ್ಮ, ಲಕ್ಕಮ್ಮ, ದೇವಿ, ಶಾಂತಮ್ಮ, ಶಿವಮ್ಮ ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK